

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಶಿಸ್ತಿನ ಸಂಶೋಧಕ ಕಲಬುರ್ಗಿ

ಜನವರಿ 19, 2011 ರೂ. 12/-






ಸೂರಿ ಹತ್ಯೆ ಹಿಂದೆ ಬೆಂಗಳೂರು ಲ್ಯಾಂಡ್ ಮಾಫಿಯಾ



ನಿತ್ಯಾನಂದನ ಸಂಪತ್ತಿನ ಮೇಲೆ ಹಿಂದೂ ನಾಯಕರ ಕಣ್ಣು



ತೆರಿಗೆ ಕದ್ದು ಸಿಕ್ಕಿಬಿದ್ದ ರೆಡ್ಡಿ

ಕರಾವಳಿ: ಪಂಚಾಯ್ತಿ ಫೈಟಿಂಗ್ ಫಲಿತಾಂಶದ ಪಾಠವೇನು?

ರವಾಡ: ಸಿಪಿಐ ಬಿರಾದಾರ್‌ನ ನಂಬಿದ ಹುಡುಗಿಯೀಗ ಹುಚ್ಚಿ!

ಪಂ-ತಾಪಂ: ಸೋತರೂ ಗೆದ್ದ ಯಡ್ಡಿ

ಇರಾನಿನ ತೈಲ, ಪಾಕಿಸ್ತಾನದ ಈರುಳ್ಳಿ V/S ಹಣದುಬ್ಬರ ಹಾಗೂ ಅಮೆರಿಕದ ಗುಲಾಮೀ!

ನೋ ಕಾಮೆಂಟ್ಸ್

"ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ನಮ್ಮ ವಿಫಲ ಕೃಷಿ ಆರ್ಥಿಕತೆಯಿಂದ ಉಂಟಾಗಿರುವ ಬಿಕ್ಕಟ್ಟನ್ನು ನಿವಾರಿಸಲು ಒಂದು ಒಳ್ಳೆಯ ಪ್ರಯತ್ನವೆಂದೇನೋ ಹೇಳಬಹುದು. ಆದರೆ ಈಗ ಕೇಳಬೇಕಿರುವ ಪ್ರಶ್ನೆ ಆ ಯೋಜನೆ ಸರಿಯಾಗಿ ಜಾರಿಯಾಗುತ್ತಿದೆಯೋ ಎಂಬುದಲ್ಲ, ಬದಲಿಗೆ ಅಂಥ ಯೋಜನೆಯ ಅಗತ್ಯವನ್ನು ಉಂಟುಮಾಡಿದ ಕಾರಣಗಳೇನು ಎಂದು ಕೇಳುವುದು."

- ಸುನಿಲ್ ಖಿಲ್ನಾನಿ, ಚಿಂತಕ

"ಜಾಗತೀಕರಣಕ್ಕೆ ಒಂದು ಮಾನವೀಯ ಮುಖವಿರಲು ಸಾಧ್ಯವೇ ಇಲ್ಲ, ಅದು ಸಂಪೂರ್ಣವಾಗಿ ಅಮಾನವೀಯವಾಗಿದೆ. ನಮ್ಮ ಮಧ್ಯೆ ಇಷ್ಟೊಂದು ಬಡತನ, ದಾರಿದ್ರ್ಯ ಇರುವಾಗ, ಮುಂಬೈನ ಅರ್ಧಕ್ಕೂ ಹೆಚ್ಚು ಜನ ಕೊಳಗೇರಿಗಳಲ್ಲಿ ವಾಸಿಸುತ್ತಿರುವಾಗ ಅದರ ಮಧ್ಯೆ ಕೋಟ್ಯಾಧೀಶನೊಬ್ಬ 5000 ಕೋಟಿ ರೂಪಾಯಿ ಮೌಲ್ಯದ ಅರಮನೆಯನ್ನು ಕಟ್ಟಿಸಿಕೊಳ್ಳುವ ಧಾರ್ಷ್ಟ್ಯವನ್ನು ಪ್ರದರ್ಶಿಸುತ್ತಾನೆ ಎಂದರೆ ಎಲ್ಲಿಯ ಮಾನವೀಯತೆ? ಆರ್ಥಿಕ ಉದಾರೀಕರಣ ಈ ದೇಶಕ್ಕೆ ಕೊಟ್ಟಿರುವುದು ಇದನ್ನೇ."

- ಅಶೋಕ್ ಮಿತ್ರ, ಅರ್ಥಶಾಸ್ತ್ರಜ್ಞ

"ಹಗರಣಗಳಿಂದ ಮುಕ್ತವಾದ ಯಾವ ರಾಜಕೀಯ ಪಕ್ಷವೂ ಇಲ್ಲ, ಈಗ ಎಲ್ಲರ ಬಣ್ಣವೂ ಬಯಲಾಗುತ್ತಿದೆ. ನಮ್ಮ ಪ್ರಜಾಸತ್ತಾತ್ಮಕ ವೇದಿಕೆಗಳ ಇತ್ತೀಚಿನ ವಿದ್ಯಮಾನಗಳ 'ವಿನ್ಯಾಸ'ವನ್ನು ನೋಡಿದರೆ ಹೇಗಾದರೂ ಗಲಾಟೆ ಮತ್ತು ಗೊಂದಲಗಳ ಧೂಳನ್ನೆಬ್ಬಿಸಿ ಅವರವರ ಹಗರಣಗಳು ಮುಚ್ಚಿಹೋಗುವಂತೆ, ಜನರ ಮನಸ್ಸಿನಿಂದ ಮರೆಯಾಗುವಂತೆ ನಮ್ಮ ಎಲ್ಲಾ ರಾಜಕೀಯ ಪಕ್ಷಗಳು ಒಂದು 'ಒಳ-ಒಪ್ಪಂದ'ವನ್ನು ಮಾಡಿಕೊಂಡಿರಬಹುದೇ ಎಂಬ ಅನುಮಾನ ಉಂಟಾಗುತ್ತಿದೆ."

- ಚಂದ್ರಶೇಖರ ಪಾಟೀಲ್

"ರೈತಸಂಘದವರು ಎರಡರಲ್ಲಿ ಒಂದನ್ನು ತೀರ್ಮಾನಿಸಬೇಕು. ಒಂದೋ ಅವರು ರಾಜಕೀಯ ಪಕ್ಷ ಸೇರಿಕೊಂಡು ಆ ದಾರಿಯಲ್ಲಿ ಹೋಗಿಬಿಡಲಿ ಅಥವಾ ರಾಜಕೀಯದ ಬಗ್ಗೆ ಕಿಂಚಿತ್ತೂ ಯೋಚಿಸದೆ ಹೋರಾಟ ಮಾರ್ಗದಲ್ಲಿ ಮುನ್ನಡೆಯಲಿ. ಎರಡು ದೋಣಿಯಲ್ಲಿ ಪಯಣ ಮಾಡುವುದು ಬೇಡ."

- ಎಚ್.ಎಸ್. ದೊರೆಸ್ವಾಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಪಿಎಸಿ ಮುಂದೆ ಹಾಜರಾಗಲು ಪ್ರಧಾನಿ ನೀಡಿರುವ ಹೇಳಿಕೆ ಅವರು ಪಕ್ಷದೊಂದಿಗೆ ಚರ್ಚೆ ನಡೆಸದೇ ನೀಡಿರುವ ಹೇಳಿಕೆಯಾಗಿದೆ. ಒಂದು ವೇಳೆ ಅವರು ಆ ಬಗ್ಗೆ ನನ್ನೊಂದಿಗೆ ಚರ್ಚಿಸಿದ್ದರೆ ನಾನು ಅವರಿಗೆ ಪಿಎಸಿ ಮುಂದೆ ಹಾಜರಾಗದಂತೆ ಸಲಹೆ ನೀಡುತ್ತಿದ್ದೆ. ಸಾಂವಿಧಾನಿಕವಾಗಿ ಪ್ರಧಾನಿಯು ಲೋಕಸಭೆಗೆ ಉತ್ತರದಾಯಿಯಾಗಿದ್ದು ಇತರ ಯಾವುದೇ ಸಮಿತಿಗಲ್ಲ."

- ಪ್ರಣವ್ ಮುಖರ್ಜಿ

"ಜಾತಿ ರಾಜಕಾರಣ ದಿನೇದಿನೇ ಹೆಚ್ಚಾಗುತ್ತಿದೆ. ಟಿಕೆಟ್ ಹಂಚಿಕೆಯಲ್ಲಿಯೂ ಜಾತಿ ನುಸುಳಿದೆ. ಇದು ನಿಜಕ್ಕೂ ಆತಂಕಕಾರಿಯಾದ ಸಂಗತಿಯಾಗಿದೆ."

- ಈಶ್ವರಪ್ಪ

ಹೇಲು ಇಷ್ಟು ತಿಂದರೂ ಅಸಹ್ಯವೇ! ಅಷ್ಟು ತಿಂದರೂ ಅಸಹ್ಯವೇ!

"ಕೇಂದ್ರದಲ್ಲಿ ನಡೆದಿರುವ 2ಜಿ ಸ್ಪೆಕ್ಟ್ರಂ ಹಗರಣದಂತಹ ದೊಡ್ಡ ಹಗರಣವೇನೂ ಇಲ್ಲಿ ನಡೆದಿಲ್ಲ. ನಡೆದಿರುವ ಹಗರಣಗಳ ಕುರಿತು ಈಗಾಗಲೇ ಸಿಎಂ ಸ್ಪಷ್ಟನೆ ನೀಡಿದ್ದಾರೆ. ಬೇರೆ ಏನೇ ಚರ್ಚೆ ನಡೆಸಬೇಕೆಂದಿದ್ದರೂ ಪ್ರತಿಪಕ್ಷದವರು ಸದನದಲ್ಲಿ ನಡೆಸಲಿ. ಅದು ಬಿಟ್ಟು ಅಧಿವೇಶನವನ್ನೇ ನಡೆಸಲು ಬಿಡುವುದಿಲ್ಲ ಎನ್ನುವುದು ಸರಿಯಲ್ಲ."

- ಡಿ.ಎನ್. ಜೀವರಾಜ್, ಬಿಜೆಪಿ ಸಚೇತಕ

ನೀವು ವಿಪಕ್ಷದಲ್ಲಿ ಇದ್ದದ್ದು ಯಾವಾಗ?

"ಸದನವನ್ನು ಬಹಿಷ್ಕರಿಸುವುದು ಸರಿಯಲ್ಲ. ದಯವಿಟ್ಟು ಜೆಡಿಎಸ್‌ನವರು ಸದನದ ಕಲಾಪ ನಡೆಸಲು ಅವಕಾಶ ಮಾಡಿಕೊಡಲಿ. ಸದನವನ್ನು ಬಹಿಷ್ಕರಿಸುವುದರಿಂದ ಏನೆಲ್ಲಾ ಅನಾಹುತವಾಗುತ್ತದೆ ಎಂಬುದನ್ನು ನಾನು ವಿರೋಧ ಪಕ್ಷದಲ್ಲಿದ್ದಾಗ ನನಗೆ ಅರಿವಾಗಿದೆ."

- ಡಿ.ಬಿ. ಚಂದ್ರೇಗೌಡ


ಬಹುಮಾನ ಮೆಹರ್ಬಾನಿ!

"ವೀಸಾ ಶುಲ್ಕ ಹೆಚ್ಚಳದಿಂದಾಗಿ ಐದು ವರ್ಷಗಳಲ್ಲಿ ಭಾರತೀಯ ಐಟಿ ಜನರಿಂದ ಅಮೆರಿಕಕ್ಕೆ 20,150 ಕೋಟಿ ರೂ.ಗಳಷ್ಟು ಬೃಹತ್ ಮೊತ್ತ ಹರಿದುಹೋಗಲಿದೆ. ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಇನ್ಫೋಸಿಸ್, ವಿಪ್ರೋ, ಮಹೀಂದ್ರಾ, ಸತ್ಯಂ ಸೇರಿದಂತೆ ಹಲವು ಕಂಪನಿಗಳ ವರಮಾನದ ಮೇಲೆ ಇದು ಪರಿಣಾಮ ಬೀರಲಿದೆ."

- ಪತ್ರಿಕಾ ವರದಿ



ಈಗಾಗಲೇ ಅತ್ಯಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಭಾರತೀಯ ಜನತೆಗೆ ಭಾರತ ಸರ್ಕಾರದ ಹೊಸ ವರ್ಷದ ಕೊಡುಗೆ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಹಾಗೂ ಆಟೋಗ್ಯಾಸ್ ದರ ಹೆಚ್ಚಳ! ಇದರ ಪರಿಣಾಮ? ಮತ್ತಷ್ಟು ಹಣದುಬ್ಬರ. ಅತ್ಯಗತ್ಯ ವಸ್ತುಗಳ ಮತ್ತಷ್ಟು ಬೆಲೆ ಏರಿಕೆ. ಬಡ ಹಾಗೂ ಮಧ್ಯಮ ವರ್ಗದ ಜನತೆಯ ಬದುಕು ಇನ್ನಷ್ಟು ದುಸ್ತರ! ಆದರೆ ಗ್ಯಾಸ್ ಹಾಗೂ ಪೆಟ್ರೋಲ್ ಬೆಲೆ ಏರಿಕೆಯ ಅಗತ್ಯ ನಿಜಕ್ಕೂ ಇದೆಯೇ? ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಒಂದು ಬ್ಯಾರೆಲ್‌ಗೆ 95 ಡಾಲರ್ ತಲುಪಿರುವುದರಿಂದ ಇದು ಅನಿವಾರ್ಯ ಎಂಬುದು ಕೇಂದ್ರ ಸರ್ಕಾರದ ವಾದ. ಅದಕ್ಕೆ ಎಲ್ಲಾ ವಿರೋಧ ಪಕ್ಷಗಳ ಮೌನ ಬೆಂಬಲ! ಆದರೆ ಎರಡು ವರ್ಷದ ಕೆಳಗೆ ಒಂದು ಬ್ಯಾರೆಲ್ ಕಚ್ಚಾ ತೈಲದ ಬೆಲೆ 125 ಡಾಲರ್ ತಲುಪಿದ್ದಾಗಲೂ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್‌ನ ಬೆಲೆ ಇಷ್ಟು ತಲುಪಿರಲಿಲ್ಲ. ಹಾಗೆಯೇ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ 125 ಡಾಲರ್/ಬ್ಯಾರೆಲ್‌ನಿಂದ ಕಳೆದ ವರ್ಷ 40 ಡಾಲರ್‌ಗೆ ಇಳಿದರೂ ಭಾರತ ಸರ್ಕಾರ ಅದೇ ಪ್ರಮಾಣದಲ್ಲಿ ಪೆಟ್ರೋಲ್/ಡೀಸೆಲ್ ಬೆಲೆಯನ್ನು ಮಾತ್ರ ಇಳಿಸಲಿಲ್ಲ! ಯಾಕೆ ಎಂದು ಯಾರೂ ಕೇಳಲೂ ಇಲ್ಲ.



ಶಿವಸುಂದರ್

ಚಾರ್ವಾಕ


ಅದೆಲ್ಲಾ ಒಂದು ಕಡೆ ಇದ್ದರೆ ಪ್ರತಿ ಬಾರಿ ಪೆಟ್ರೋಲ್/ಡೀಸೆಲ್ ಬೆಲೆ ಏರಿಸಲು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಯ ಏರಿಳಿಕೆಯ ಕಾರಣ ನೀಡುವ ಸರ್ಕಾರಗಳ ವಾದ ನಿಜಕ್ಕೂ ಪ್ರಾಮಾಣಿಕವಾದುದೇ? ಅಂತರರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಎಲ್ಲಾ ದೇಶಗಳ ತೈಲದ ಬೆಲೆಯೂ ಏಕರೂಪದಲ್ಲಿ ಜಾಸ್ತಿಯಾಗುತ್ತದೆಯೇ? ನಮಗೆ ಅಗ್ಗದಲ್ಲಿ ತೈಲ ಸರಬರಾಜು ಮಾಡುವ ಇತರ ದೇಶಗಳಿಲ್ಲವೆ? ಇದ್ದರೆ ಅವರಿಂದ ಏಕೆ ನಾವು ಕಡಿಮೆ ದರದಲ್ಲಿ ತೈಲ ಸರಬರಾಜು ವ್ಯವಸ್ಥೆ ಮಾಡಿಕೊಳ್ಳಬಾರದು?

ವಾಸ್ತವವಾಗಿ ನಮಗೆ ಪ್ರತಿವರ್ಷ 20 ಕೋಟಿ ಬ್ಯಾರೆಲ್‌ನಷ್ಟು ಕಚ್ಚಾ ತೈಲದ ಅಗತ್ಯವಿದ್ದರೆ ಅದರಲ್ಲಿ ಶೇ.25ರಷ್ಟನ್ನು ಮಾತ್ರ ನಾವು ಸ್ಥಳೀಯವಾಗಿ ಉತ್ಪಾದಿಸಿಕೊಳ್ಳುತ್ತಿದ್ದೇವೆ. ನಮ್ಮ ತೈಲ ಉತ್ಪಾದನಾ ಸಾಮರ್ಥ್ಯವನ್ನು ದುಪ್ಪಟ್ಟುಗೊಳಿಸುವ ಎಲ್ಲಾ ಅವಕಾಶಗಳಿದ್ದರೂ ಅಂತರರಾಷ್ಟ್ರೀಯ ತೈಲ ಕಂಪನಿಗಳ ಮತ್ತು ಅಮೆರಿಕದ ಪ್ರತ್ಯಕ್ಷ ಮತ್ತು ಹಾಗೂ ಒತ್ತಡಗಳಿಗೆ ಬಲಿಯಾಗಿ ಭಾರತದ ಆಳುವವರ್ಗಗಳು ನಾವು ತೈಲ ಸ್ವಾವಲಂಬಿಯಾಗದಂತೆ ನೋಡಿಕೊಂಡಿವೆ.

ಇದು ಒಂದು ಕಡೆಗಿದ್ದರೆ, ಮತ್ತೊಂದು ಕಡೆ ಅಗ್ಗದ ತೈಲ ಸರಬರಾಜು ಮಾಡುವ ಹಾಗೂ ತೈಲ ವ್ಯವಹಾರದಲ್ಲಿ ನಮ್ಮಂತ ದೇಶಗಳಿಗೆ ರಿಯಾಯಿತಿ ತೋರಬಹುದಾದ ದೇಶಗಳ ಜೊತೆ ಸ್ನೇಹಸಂಬಂಧವನ್ನು ಇಟ್ಟುಕೊಳ್ಳದಂತೆಯೂ ಅಮೆರಿಕ ಭಾರತದ ಮೇಲೆ ಒತ್ತಡ ಹಾಕುತ್ತಿದೆ. ಭಾರತದಲ್ಲಿ ಪದೇಪದೇ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲದ ಬೆಲೆ ಹೆಚ್ಚುತ್ತಿರಲು ಮತ್ತು ಪರ್ಯಾಯ ಮೂಲದ ಅನ್ವೇಷಣೆ ಮಾಡದಿರಲೂ ಇದು ಸಹ ಪ್ರಮುಖ ಕಾರಣವಾಗಿದೆ.

ಪ್ರಪಂಚದಲ್ಲಿ ತೈಲ ಸರಬರಾಜು ಮಾಡುವ ದೇಶ ಹಾಗೂ ಕಂಪನಿಗಳನ್ನು ಸ್ಥೂಲವಾಗಿ ಅಮೆರಿಕ ನೇತೃತ್ವದ ಮತ್ತು ಅಮೆರಿಕ ವಿರೋಧಿ ಗುಂಪಿನ ದೇಶಗಳನ್ನಾಗಿ ವಿಂಗಡಿಸಬಹುದು. ಅಮೆರಿಕ ಪರವಾದ ಅಥವಾ ಗುಲಾಮೀ ಮಾಡುವ ತೈಲ ರಫ್ತು ಮಾಡುವ ದೇಶಗಳಲ್ಲಿ ಸೌದಿ ಅರೇಬಿಯಾ ಮುಖ್ಯವಾದದ್ದು. ಅಮೆರಿಕ ವಿರೋಧಿ ಗುಂಪಿನಲ್ಲಿ ಇರಾನ್ ಹಾಗೂ ವೆನಿಜುಯೇಲಾ ದೇಶಗಳು ಪ್ರಮುಖವಾದವು. ಭಾರತವು ತನಗೆ ಅಗತ್ಯವಿರುವ ತೈಲವನ್ನು ಸೌದಿ ಅರೇಬಿಯಾದಿಂದ ಬಿಟ್ಟರೆ ಅತಿಹೆಚ್ಚು ಆಮದು ಮಾಡಿಕೊಳ್ಳುವುದು ಇರಾನಿನಿಂದಲೇ! ಭಾರತದ ಸಾರ್ವಜನಿಕ ಕ್ಷೇತ್ರದ ತೈಲ ಸಂಸ್ಕರಣಾ ಮತ್ತು ವಿತರಣಾ ಘಟಕಗಳಾದ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್, ಇಂಡಿಯನ್ ಆಯಿಲ್ ಕಾರ್ಪೋರೇಷನ್, ಮಂಗಳೂರು ಪೆಟ್ರೋ ಕೆಮಿಕಲ್ಸ್ ಮತ್ತು ಖಾಸಗಿ ತೈಲ ಕಂಪನಿಯಾದ ಎಸ್ಸಾರ್‌ಗಳು ಪ್ರತಿದಿನ 4 ಲಕ್ಷ ಬ್ಯಾರೆಲ್ ತೈಲವನ್ನು ಇರಾನಿನಿಂದ ಖರೀದಿ ಮಾಡುತ್ತವೆ.

ವಾಸ್ತವವಾಗಿ ಇರಾನ್ ಮತ್ತು ವೆನಿಜುಯೇಲಾ ದೇಶಗಳು ಭಾರತದೊಡನೆ ಅಗ್ಗದ ಪ್ರತ್ಯೇಕ ತೈಲ ಒಪ್ಪಂದ ಮಾಡಿಕೊಂಡು ಈಗ ಸರಬರಾಜು ಮಾಡುತ್ತಿರುವುದಕ್ಕಿಂತ ಅಗ್ಗದ ದರದಲ್ಲಿ ತೈಲ ಸರಬರಾಜು ಮಾಡುವ ಪ್ರಸ್ತಾಪವನ್ನು ಮುಂದಿಟ್ಟಿದ್ದವು. ಆದರೆ ಅಮೆರಿಕದ ಗುಲಾಮೀತನ ಮಾಡುವ ಭಾರತದ ಆಳುವ ವರ್ಗಗಳು ಭಾರತದ ಸಾಮಾನ್ಯ ಜನರಿಗೆ ಒಳ್ಳೆದನ್ನು ಮಾಡುತ್ತಿದ್ದ ಈ ಒಪ್ಪಂದಕ್ಕೆ ಜೀವ ಕೊಡುವ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಇರಾನಿನಲ್ಲಿ ಅಪಾರವಾದ ನೈಸರ್ಗಿಕ ಅನಿಲದ ನಿಕ್ಷೇಪಗಳಿವೆ. ಇರಾನಿನಿಂದ ಅಗ್ಗದ ದರದಲ್ಲಿ ಆ ಅನಿಲವನ್ನು ಭಾರತಕ್ಕೆ ಕೊಳವೆಗಳ ಮೂಲಕ ತಂದಲ್ಲಿ ಅಡುಗೆ ಅನಿಲದ ಬೆಲೆ ಈಗಿರುವುದಕ್ಕಿಂತ ಕನಿಷ್ಠ ಅರ್ಧದಷ್ಟು ಕಡಿಮೆಯಾಗುತ್ತದೆ. ಅದಕ್ಕಾಗಿ ಭಾರತ ಮತ್ತು ಇರಾನಿನ ನಡುವೆ ಒಂದು ಲಕ್ಷ ಕೋಟಿ ರೂಪಾಯಿಗಳ ಒಪ್ಪಂದವೂ ಆಗಿತ್ತು. ಆದರೆ ಅಮೆರಿಕವು ತನ್ನ ಜೊತೆ ಸ್ನೇಹದಿಂದಿರುವ ಯಾವ ದೇಶಗಳೂ ಇರಾನಿನ ಜೊತೆ ಸ್ನೇಹದಿಂದಿರಕೂಡದೆಂಬ ಆದೇಶ ಹೊರಡಿಸಿರುವುದರಿಂದ ಅತ್ಯಂತ ಜನೋಪಯೋಗಿ ಆಗುತ್ತಿದ್ದ ಈ ಯೋಜನೆಯೂ ನನೆಗುದಿಗೆ ಬಿದ್ದಿದೆ.



ಇದೀಗ ಅಮೆರಿಕದ ಒತ್ತಡಕ್ಕೆ ಮಣಿದು ಭಾರತ ಮತ್ತು ಇರಾನಿನ ತೈಲ ವ್ಯವಹಾರಗಳನ್ನು ಇನ್ನು ಮುಂದೆ ಯೂರೋ ಅಥವಾ ಡಾಲರಿನಲ್ಲೇ ಮಾಡುವುದಾಗಿ ಭಾರತದ ರಿಸರ್ವ್ ಬ್ಯಾಂಕ್ ಘೋಷಿಸಿರುವುದು ಭಾರತವು ಇರಾನಿನಿಂದ ಮಾಡಿಕೊಳ್ಳುತ್ತಿದ್ದ ತೈಲ ಆಮದಿನ ಮೇಲೆ ನೇರ ಪರಿಣಾಮ ಬೀರಲಿದ್ದು ಇದರಿಂದಾಗಿ ತೈಲ ಬೆಲೆ ಮತ್ತಷ್ಟು ತುಟ್ಟಿಯಾಗುವ ಎಲ್ಲಾ ಸೂಚನೆಗಳು ಇವೆ.


ಭಾರತವನ್ನೂ ಒಳಗೊಂಡಂತೆ ಇರಾನ್ ಜೊತೆ ತೈಲ ವ್ಯವಹಾರ ಮಾಡುವ ಏಷಿಯಾದ ಬಾಂಗ್ಲಾ ದೇಶ, ಮಾಲ್ಡೀವ್ಸ್, ಮಯನ್ಮಾರ್, ಪಾಕಿಸ್ತಾನ, ಭೂತಾನ, ನೇಪಾಳ ಮತ್ತು ಶ್ರೀಲಂಕಾಗಳು ತೈಲ ಬಿಲ್ಲನ್ನು ಪಾವತಿ ಮಾಡಲು ತಮ್ಮ ನಡುವೆ Asian Clearing Union (ACU) ಎಂಬ ವ್ಯವಸ್ಥೆಯನ್ನು ಮಾಡಿಕೊಂಡಿದ್ದವು. ಈ ವ್ಯವಸ್ಥೆಯಲ್ಲಿ ಇರಾನ್ ತನ್ನಿಂದ ತೈಲ ಕೊಳ್ಳುತ್ತಿದ್ದ ದೇಶಗಳಿಗೆ ಹಣ ಪಾವತಿ ಮಾಡಲು 90 ದಿನಗಳ ವಾಯಿದೆಯನ್ನು ಕೊಡುತ್ತದೆಯಲ್ಲದೆ ಹಣವನ್ನು ಈ ದೇಶಗಳು ತಮ್ಮ ನಡುವಿನ ಯಾವುದೇ ಕರೆನ್ಸಿಯಿಂದಲೂ ಕೊಡಬಹುದಿತ್ತು. ಇದರಿಂದಾಗಿ ಈ ಏಷಿಯಾದ ಬಡ ದೇಶಗಳ ನಡುವೆ ಹೆಚ್ಚಿನ ವ್ಯಾಪಾರ ಮತ್ತು ವಹಿವಾಟುಗಳು ಹೆಚ್ಚಿನ ತಾರತಮ್ಯವಿಲ್ಲದೆ ನಡೆದು ಉತ್ತಮ ಬಾಂಧವ್ಯ ಸೃಷ್ಟಿಗೆ ಅನುಕೂಲ ಮಾಡಿಕೊಡುತ್ತಿತ್ತು.

ಆದರೆ ಇರಾನಿನ ಜೊತೆ ಏಷಿಯಾ ದೇಶಗಳು ಮೈತ್ರಿಯಿಂದ ಇರುವುದು ಅಮೆರಿಕದ ಹಿತಾಸಕ್ತಿಗೆ ವಿರುದ್ಧವಾದದ್ದು. ಏಕೆಂದರೆ ಇಂದು ಇಡೀ ಮಧ್ಯ ಏಷಿಯಾದಲ್ಲಿ ಅಮೆರಿಕದ ಆಧಿಪತ್ಯಕ್ಕೆ ಮತ್ತು ಇಸ್ರೇಲ್‌ನ ಜನಾಂಗೀಯ ಫ್ಯಾಸಿಸ್ಟ್ ವಿಸ್ತರಣಾವಾದಕ್ಕೆ ಅಡ್ಡಿಯಿರುವುದು ಕೇವಲ ಇರಾನ್ ಮಾತ್ರ. ಆದ್ದರಿಂದಲೇ ಅಮೆರಿಕಕ್ಕೆ ಇರಾನ್ ಎಂದರೆ ಕೆಣ್ಣೆಸೆರು. ಆದರೆ ಅಫ್ಘಾನಿಸ್ತಾನದಂತೆಯೋ, ಇರಾಕಿನಂತೆಯೂ ಇರಾನ್ ಮೇಲೆ ಅಮೆರಿಕ ದಾಳಿ ಮಾಡಲು ಸಾಧ್ಯವಾಗದಷ್ಟು ಇರಾನ್ ಆರ್ಥಿಕವಾಗಿ, ಸೈನಿಕವಾಗಿಯೂ ಬೆಳೆದು ನಿಂತಿದೆ. ಹೀಗಾಗಿ ಇರಾನನ್ನು ಆರ್ಥಿಕವಾಗಿ ಬಗ್ಗುಬಡಿಯಲು ಮತ್ತು ವಿಶ್ವಸಮುದಾಯದಿಂದ ದೂರ ಸರಿಸಲು ಅಮೆರಿಕ ಈಗ ಇರಾನ್ ಅಣ್ವಸ್ತ್ರ ತಯಾರಿಸುತ್ತಿದೆ ಎಂಬ ಹೊಸ ಕಥೆ ಹೆಣೆದು ಅದರ ಮೇಲೆ ದಾಳಿ ನಡೆಸುವ ಸನ್ನಾಹ ನಡೆಸುತ್ತಿದೆ. ಇರಾಕ್ ಮತ್ತು ಅಫ್ಘಾನಿಸ್ತಾನದ ಮೇಲೆ ದಾಳಿ ಮಾಡಿ ಆಕ್ರಮಿಸಿಕೊಳ್ಳಲು ಅಲ್ಲಿನ ಅಪಾರ ತೈಲ ನಿಕ್ಷೇಪ ಕಾರಣವಾಗಿರುವಂತೆ ಇರಾನಿನಲ್ಲಿರುವ ತೈಲ ಮತ್ತು ನೈಸರ್ಗಿಕ ಅನಿಲ ನಿಕ್ಷೇಪ ಅಮೆರಿಕದ ಕಂಪನಿಗಳ ಬಾಯಲ್ಲಿ ನೀರೂರುವಂತೆ ಮಾಡಿದೆ. ಆದರೆ ಇರಾನಿನಲ್ಲಿರುವ ಖೋಮೇನಿ-ಅಹ್ಮದಿನೆಜಾದ್ ರಾಜಕೀಯ ನಾಯಕತ್ವ ಅಮೆರಿಕದ ಈ ಆಕ್ರಮಣವನ್ನು ಸ್ವಾಭಿಮಾನದಿಂದ ಹಾಗೂ ದಿಟ್ಟತನದಿಂದ ಎದುರಿಸುತ್ತಿದೆ. ಆದ್ದರಿಂದಲೇ ಅಮೆರಿಕ ಈಗಿನ ರಾಜಕೀಯ ನಾಯಕತ್ವ ಉಗ್ರಗಾಮಿಗಳನ್ನು ಸೃಷ್ಟಿಸುತ್ತಿದೆಯೆಂದೂ, ವಿಶ್ವದ ಭದ್ರತೆಗೆ ಮಾರಕವೆಂದೂ ಹಾಗೂ ಗುಟ್ಟಾಗಿ ಅಣ್ವಸ್ತ್ರ ತಯಾರಿಸುತ್ತಿದೆಯೆಂದೂ ಆರೋಪಗಳನ್ನು ಹೊರಿಸಿ ಯುದ್ಧ ಸನ್ನಾಹ ನಡೆಸುತ್ತಿದೆ.

ಆದರೆ ಪ್ರಪಂಚದ ಇತಿಹಾಸ ಗೊತ್ತಿರುವ ಎಲ್ಲರಿಗೂ ಗೊತ್ತಿರುವ ವಿಷಯವೇನೆಂದರೆ 1970ರ ದಶಕದಲ್ಲಿ ಇರಾನಿನಲ್ಲಿ ಇಸ್ಲಾಮಿಕ್ ಕ್ರಾಂತಿಯಾಗಿ ಪ್ರಸ್ತುತ ರಾಜಕೀಯ ನಾಯಕತ್ವ ಅಧಿಕಾರಕ್ಕೆ ಬರುವ ಮುಂಚೆ ಇದ್ದದ್ದು ಅಮೆರಿಕದ ಚೇಲಾ ಶಾ ನ ಆಧಿಪತ್ಯ. ಅವನ ಕಾಲದಲ್ಲಿ ಅಮೆರಿಕವೇ ಇರಾನಿಗೆ ಅಣ್ವಸ್ತ್ರ ತಯಾರು ಮಾಡಲು ಎಲ್ಲಾ ಪರಿಕರಗಳನ್ನೂ ಒದಗಿಸಿತ್ತು, ಇರಾನಿನ ಎಲ್ಲಾ ಕಮ್ಯುನಿಸ್ಟ್ ಮತ್ತು ಪ್ರಗತಿಪರ ಕ್ರಾಂತಿಕಾರಿಗಳನ್ನು ಬಗ್ಗುಬಡಿಯಲು ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿತ್ತು, ಇಂದೂ ಸಹ ಇಸ್ರೇಲ್‌ಗೆ ಅಮೆರಿಕ ಅಣ್ವಸ್ತ್ರ ಪರಿಕರಗಳನ್ನು ಸರಬರಾಜು ಮಾಡುತ್ತಿರುವುದು ಮತ್ತು ಇಸ್ರೇಲ್ ಅಣ್ವಸ್ತ್ರವನ್ನು ಬಹಿರಂಗವಾಗಿಯೇ ತಯಾರಿಸುತ್ತಿರುವುದು ಗುಟ್ಟೇನಲ್ಲ. ಆದರೂ ಇರಾನ್ ಅಣ್ವಸ್ತ್ರ ತಯಾರು ಮಾಡಬಾರದೆನ್ನುವ ಅಮೆರಿಕ ಇಸ್ರೇಲ್ ಅನ್ನು ಮಾತ್ರ ಬಹಿರಂಗವಾಗಿಯೇ ಸಮರ್ಥಿಸುತ್ತದೆ. ಹಾಗೆ

▶▶ 16

ನ್ಯಾಯ ಕೇಳಿದ ತೀಸ್ತಾರಿಗೆ ಬಂಧನದ ಬೆದರಿಕೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

2002 ರಲ್ಲಿ ಗುಜರಾತಿನಲ್ಲಿ ಕೋಮು ಗಲಭೆಗಳು ಡೆದು ಸಾವಿರಾರು ಅಮಾಯಕರನ್ನು ಕೊಂದು ಹಾಕಿದ ನದಿಂದ ಅಂತಹ ಭೀಕರ ಕೃತ್ಯಗಳನ್ನು ನಡೆಸಿದವರಿಗೆ ಕ್ಷೆ ಆಗಬೇಕು ಮತ್ತು ಆ ಮೂಲಕ ಸತ್ತವರಿಗೆ ಮತ್ತು ವರ ಬಂಧುಗಳಿಗೆ ನ್ಯಾಯ ಸಿಗಬೇಕೆಂದು ಹೋರಾಡುತ್ತಾ ಂದಿರುವವರಲ್ಲಿ ತೀಸ್ತಾ ಸೆಟೆಲ್‌ವಾದ್ ಪ್ರಮುಖರು.

ಕಳೆದ ಎಂಟು ವರ್ಷಗಳಿಂದ ತೀಸ್ತಾ ಅವರು ನ್ಯಾಯಾ ಯಗಳ ಮುಂದೆ ನಡೆಸಿರುವ ಹೋರಾಟ ಈಗ ಒಂದು ುಖ್ಯ ಘಟ್ಟವನ್ನು ತಲುಪಿದೆ. ಸುಪ್ರೀಂಕೋರ್ಟ್ ಸದ್ಯದಲ್ಲೇ ರಹಂತಕ ನರೇಂದ್ರ ಮೋದಿಯ ನೇತೃತ್ವದ ಗುಜರಾತ್ ರ್ಕಾರದ ವಿರುದ್ಧ ಸಾಮೂಹಿಕ ಹತ್ಯೆಗೆ ಸಂಚು, ನ್ಯಾಯದ ಂಸ ಮತ್ತು ಸಾಕ್ಷ್ಯಗಳ ನಾಶ ಕುರಿತ ವಿಚಾರಣೆಯನ್ನು ಗೆದುಕೊಳ್ಳಲಿದೆ. ಈ ಹಂತದಲ್ಲೇ ಗುಜರಾತ್ ಪೊಲೀಸರು ೀಸ್ತಾ ಅವರನ್ನು ಬಂಧಿಸಲಿದ್ದೇವೆ ಎಂದು ಹೇಳುತ್ತಾ ವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಾಗೆ ಮಾಡುವ ಮೂಲಕ ನರೇಂದ್ರ ಮೋದಿ ನಿರಪರಾಧಿ ಎಂದೂ, ತೀಸ್ತಾ ಅವರೇ ನಿಜವಾದ ಅಪರಾಧಿ ಎಂದೂ ಬಿಂಬಿಸಿ ನ್ಯಾಯಾಲಯದ ಮತ್ತು ಜನರ ದಿಕ್ಕುತಪ್ಪಿಸಲು ಲ್ಲಿನ ಪೊಲೀಸರು ನೋಡುತ್ತಿದ್ದಾರೆ.

ಆದರೆ ಯಾವ ಪ್ರಕರಣದಲ್ಲಿ ತೀಸ್ತಾ ಅವರನ್ನು ುಜರಾತ್ ಪೊಲೀಸರು ಫಿಕ್ಸ್ ಮಾಡಲು ನೋಡುತ್ತಿದ್ದಾರೆ ಮತ್ತು ಆ ಪ್ರಕರಣದಲ್ಲಿ ನಿಜವಾಗಲೂ ನಡೆದದ್ದೇನು ಎಂಬುದನ್ನು ನೋಡಿದರೆ ತೀಸ್ತಾ ಅವರ ಅಪಾರ ಕಾಳಜಿ ಮತ್ತು ಗುಜರಾತ್ ಸರ್ಕಾರ ಹಾಗು ಅಲ್ಲಿನ ಪೊಲೀಸರ ಪ್ರಬುದ್ಧಿ ಅನಾವರಣಗೊಳ್ಳುತ್ತದೆ.


ಈಗ ಎಲ್ಲರಿಗೂ ಗೊತ್ತಿರುವಂತೆ 2002 ರ ಮಾರ್ಚ್ ಿಗಳಲ್ಲಿ ಗುಜರಾತಿನಲ್ಲಿ ಮೋದಿಯ ಸರ್ಕಾರವು ಕೋಮು ಲಭೆಗಳನ್ನು ಪ್ರಯೋಗಿಸಿ ಮೂರು ಸಾವಿರಕ್ಕಿಂತಲೂ ಹೆಚ್ಚು ಅಮಾಯಕರನ್ನು–ಅವರು ಮಕ್ಕಳು, ಮಹಿಳೆಯರು, ದ್ಧರು ಎಂದೆಲ್ಲ ನೋಡದೆ–ಕೊಂದು ಹಾಕಿತ್ತು. ಆ ಲಭೆಗಳಲ್ಲಿ ಪಂಚಮಹಲ್ ಜಿಲ್ಲೆಯ ಪಂಡೇರವಾಡ ಬ ಹಳ್ಳಿಯ ಮುಸಲ್ಮಾನರೂ ಹಿಂದೂತ್ವವಾದಿಗಳ ಳಿಗೆ ಗುರಿಯಾಗಿದ್ದರು. ಸರ್ಕಾರದ ಪ್ರಕಾರವೇ ಆಗ ಡೇರವಾಡದ 27 ಜನ ನಾಪತ್ತೆಯಾಗಿದ್ದರು.

ಹೀಗೆ ನಾಪತ್ತೆ ಆದವರು ಬದುಕಿದ್ದಾರೋ ಇಲ್ಲವೋ? ಸ್ಮಾತ್ ಅವರೆಲ್ಲ ಸಾವಿಗೀಡಾಗಿದ್ದರೆ. ಅವರ ದೇಹಗಳನ್ನು ಲ್ಲಿ ಹೂತಲಾಗಿದೆ ಎಂಬುದು ಯಾರಿಗೂ ಗೊತ್ತಿರಲಿಲ್ಲ. ದ್ದರಿಂದ ಅವರ ಸಂಬಂಧಿಗಳು ನಮ್ಮವರು ಎಲ್ಲಿದ್ದಾರೆ, ಗೊಮ್ಮೆ ಅವರನ್ನು ಕೊಲ್ಲಲಾಗಿದ್ದರೆ ಅವರ ಕಳೇಬರ ನ್ನಾದರೂ ಕೊಡಿ ಅಂತ್ಯಸಂಸ್ಕಾರಗಳನ್ನು ಪೂರೈಸಲು ಎಂದು ವಿವಿಧ ಸರ್ಕಾರಿ ಅಧಿಕಾರಿಗಳನ್ನು ಬೇಡಲಾರಂಭಿಸಿದರು. ಅದೂ ಒಂದೆರಡು ಬಾರಿ ಅಲ್ಲ, ಒಂದೆರಡು ವರ್ಷಗಳ ಕಾಲವೂ ಅಲ್ಲ, ಸತತ ನಾಲ್ಕು ವರ್ಷಗಳ ಕಾಲ ಈ ಅಹವಾಲನ್ನು ಮುಂದಿಸುತ್ತಲೇ ಬಂದರು. ರಿ ಅಧಿಕಾರಿಗಳು ಮಾತ್ರ ಯಾವ ಪ್ರತಿಕ್ರಿಯೆಯನ್ನು ನೀಡದೆ ತೆಪ್ಪಗಿದ್ದರು.

ಆದರೆ 2005 ರಲ್ಲಿ ಪಂಚಮಹಲ್ ಜಿಲ್ಲೆಯ ಪಕ್ಕದ ಪ ಗೋಧ್ರಾ ಜಿಲ್ಲೆಯಲ್ಲಿ, ಪಂಡೇವಾಡ ಹಳ್ಳಿಯಿಂದ ಮಾರು ಹದಿನೈದು ಕಿಲೋಮೀಟರ್ ದೂರದಲ್ಲಿರುವ ಾಮ್ ಎಂಬ ನದಿಯ ದಡದಲ್ಲಿದ್ದ ಕಸದ ತಿಪ್ಪೆಯಿಂದ ಯಿಗಳು ಮೂಳೆಗಳನ್ನು ಅಗೆದು ತಿನ್ನುತ್ತಿರುವುದನ್ನು ಹಳ್ಳಿಯ ಜನ ಗಮನಿಸಿದರು. ಆ ಮೂಳೆಗಳನ್ನು ಗಮನಿಸಿದಾಗ ಅವು ಮಾನವ ಮೂಳೆಗಳೆಂದೂ, ನದಿಯ ದಡದಲ್ಲಿ ಸಾಮೂಹಿಕವಾಗಿ ಶವಗಳನ್ನು ಹೂತಲಾಗಿದೆ ಎಂದೂ, ಅವು ತಮ್ಮ ಸಂಬಂಧಿಕರ ಶವಗಳೇ ಆಗಿರಬಹುದು ಎಂದೂ ಜನ ಶಂಕಿಸಲಾರಂಭಿಸಿದರು. ಆಗ ಮತ್ತೆ ಸರ್ಕಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಆ ಜಾಗೆಯನ್ನು ಅಗೆದು ವಿಚಾರಣೆ ನಡೆಸಬೇಕೆಂದು ಕೇಳಿಕೊಂಡರು. ಆಗಲೂ ಅಧಿಕಾರಿಗಳು ನಿರುತ್ತರವಾಗಿಯೋ ಉಳಿದರು.

ಆಗ ತೀಸ್ತಾ ಅವರ ಸೀಟಿಜನ್ಸ್ ಫಾರ್ ಜಸ್ಟೀಸ್ ಅಂಡ್ ಪೀಸ್ (ಸಿಜೆಪಿ) ಎಂಬ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದ ರೈಸ್ ಖಾನ್ ಎಂಬಾತನನ್ನು ಪಂಡೇವಾಡದ ಜನ ಸಂಪರ್ಕಿಸಿ ತಮ್ಮ ಹಳ್ಳಿಯ ಹತ್ತಿರವಿದ್ದ ಸಾಮೂಹಿಕ ಸಮಾಧಿಯ ಬಗ್ಗೆ ಆತನಿಗೆ ತಿಳಿಸಿದರು. ಆಗ ರೈಸ್ ಖಾನ್ ಸಹಾರಾ ಟಿವಿ ಚಾನೆಲ್‌ನಲ್ಲಿ ವರದಿಗಾರರಾಗಿ ಕೆಲಸ ಮಾಡುತ್ತಿದ್ದ ರಾಹುಲ್‌ಸಿಂಗ್‌ಗೆ ಈ ವಿಚಾರವನ್ನು ತಿಳಿಸಿದರು. ಅದೇ ಹೊತ್ತಿಗೆ ಇದರ ಬಗ್ಗೆ ತೀಸ್ತಾ ಕೂಡ ಗುಜರಾತ್ ಪೊಲೀಸರಿಗೆ ಫ್ಯಾಕ್ಸ್ ಮೂಲಕ ತಿಳಿಸಿದರು.

ಪತ್ರಕರ್ತ ರಾಹುಲ್ ಕೂಡಲೇ ಸಮಾಧಿಯ ಹತ್ತಿರ ಹೋಗಲಿಲ್ಲ; ಬದಲಾಗಿ ಆಗ ಪಂಚಮಹಲ್ ಜಿಲ್ಲೆಯ ಎಸ್‌ಪಿ ಆಗಿದ್ದ ಜೆ.ಕೆ. ಭಟ್ ಎಂಬಾತನನ್ನು ಭೇಟಿ ಆಗಿ ಇಂತಹ ಒಂದು ಸಾಮೂಹಿಕ ಸಮಾಧಿಯ ಬಗ್ಗೆ ಸಂದರ್ಶಿಸಿದರು. ಆ ಸಂದರ್ಶನದಲ್ಲಿ ಭಟ್ ಅಂತಹ ಸಮಾಧಿ ಬಗ್ಗೆ ಪೊಲೀಸರಿಗೆ ಗೊತ್ತಿಲ್ಲವೆಂದೂ, ಪಂಡೇವಾಡ ದಿಂದ 2002 ರ ಗಲಭೆಗಳಲ್ಲಿ ನಾಪತ್ತೆಯಾದ 21 ಜನರ ಬಗ್ಗೆ ಪೊಲೀಸರಿಗೆ ಯಾವ ಸುಳಿವೂ ಇಲ್ಲವೆಂದೂ ಹೇಳಿದ್ದರು. ಅಲ್ಲಿಂದ ರಾಹುಲ್ ಸಾಮೂಹಿಕ ಸಮಾಧಿ ಇದ್ದಲ್ಲಿಗೆ ಹೋದರು.



ಅಲ್ಲಿಯತನಕ ಅಧಿಕಾರಿಗಳೇ ಬಂದು ಆ ಜಾಗೆಯಲ್ಲಿ ಅಗೆದು ವಿಚಾರಣೆ ನಡೆಸುತ್ತಾರೆಂದು ಕಾದಿದ್ದ ಜನ ಸರ್ಕಾರದ ನಿರ್ಲಿಪ್ತತೆಯಿಂದ ರೋಸೆದ್ದು ತಾವೇ ಅಗೆಯಲು ಪ್ರಾರಂಭಿಸಿದ್ದರು. ಆಗ ಜನರಿಗೆ ಸಿಕ್ಕಿದ್ದು ಮಾನವರ ಕಳೇಬರಗಳು. ಅಷ್ಟೇ ಮುಖ್ಯವಾಗಿ 2002 ರಲ್ಲಿ ನಾಪತ್ತೆ ಆಗಿದ್ದ ಜನ ಅಂದು ತೊಟ್ಟಿದ್ದ ಬಟ್ಟೆಗಳ ಚೂರುಪಾರುಗಳು ಇನ್ನೂ ಆ ಕಳೇಬರಗಳಿಗೆ ಅಂಟಿಕೊಂಡಿದ್ದವು. ಇದೆಲ್ಲವನ್ನು ರಾಹುಲ್ ಕ್ಯಾಮೆರಾದಲ್ಲಿ ಸೆರೆಹಿಡಿದ ನಂತರ ಸಹಾರಾ ಟಿವಿ ಅದನ್ನು ಪ್ರಸಾರ ಮಾಡಿತ್ತು.

ಇದಾದದ್ದೇ ತಡ, ಸರ್ಕಾರ ಎಚ್ಚರಗೊಂಡಿತು. ಕೂಡಲೇ ಅಲ್ಲಿಗೆ ಆಗಮಿಸಿದ ಅಧಿಕಾರಿಗಳು ಆ ಜಾಗದ ಸುತ್ತ ಬಂದೋಬಸ್ತು ಮಾಡಿ ತಾವೇ ಆ ಸಾಮೂಹಿಕ ಸಮಾಧಿಯನ್ನು ಅಗೆದರು. ಆಗ ಅಲ್ಲಿದ್ದ ಜನ ಆ ಕಳೇಬರಗಳನ್ನು ಹೈದರಾಬಾದಿನಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಬೇಕೆಂದು ಒತ್ತಾಯಿಸಿದರು. ವಿಧಿ ಇಲ್ಲದೆ ಹಾಗೇ ಮಾಡಲಾಯಿತು. ಹೈದರಾಬಾದಿನ ಲ್ಯಾಬೋರೇಟರಿ ಪರೀಕ್ಷೆಗಳನ್ನು ನಡೆಸಿದ ನಂತರ ನೀಡಿದ ವರದಿಯ ಪ್ರಕಾರ ತಮ್ಮ ಸಂಬಂಧಿಗಳು ನಾಪತ್ತೆಯಾಗಿದ್ದರೆಂದು ಯಾವ ಜನ ದೂರು ನೀಡಿದ್ದರೋ ಅವರೆಲ್ಲರ ಸಂಬಂಧಿಗಳ ಕಳೇಬರಗಳಾಗಿದ್ದವು. ಅಂದರೆ ಪಂಡೇವಾಡದ 21 ಮಂದಿ ನಾಪತ್ತೆ ಆಗಿರಲಿಲ್ಲ, ಬದಲಾಗಿ ಅವರನ್ನೆಲ್ಲ ಕೊಂದದ್ದು ಅಲ್ಲದೆ ಅವಸರವಸರವಾಗಿ ಒಂದು ಗುಂಡಿಯನ್ನು ತೋಡಿ ಅವರನ್ನೆಲ್ಲ ಅಲ್ಲಿ ಹೂಳಲಾಗಿತ್ತು ಎಂಬುದು ಸ್ಪಷ್ಟವಾಯಿತು.

ಇದು ಬಹಿರಂಗಗೊಂಡಿದ್ದೇ ತಡ, ಪೊಲೀಸರು ಹೊಸ ರಾಗವನ್ನು ಹಾಡಲಾರಂಭಿಸಿದರು. ಕೋಮುಗಲಭೆಯ ನಂತರ ಸಿಕ್ಕಿದ್ದ ಶವಗಳನ್ನು ಒಂದೆಡೆ ಇಟ್ಟು, ಅವುಗಳನ್ನು ಅವರ ಸಂಬಂಧಿಗಳು ಗುರುತಿಸಿದ ನಂತರ, ಅವುಗಳ ಮರಣೋತ್ತರ ಪರೀಕ್ಷೆ ನಡೆಸಿದ ಮೇಲೆಯೇ ಅವರನ್ನೆಲ್ಲ ಹೂಳಲಾಗಿತ್ತೆಂದೂ, ಅದು ಸಾಮೂಹಿಕ ಸಮಾಧಿ ಆಗಿರದೆ ಅದೊಂದು ಸಾರ್ವಜನಿಕ ಸ್ಮಶಾನ ಎಂದೂ ಹೇಳಲಾರಂಭಿಸಿದರು. ಜೊತೆಗೆ ತಮ್ಮ ವಾದವನ್ನು ಸಮರ್ಥಿಸುವಂತಹ ಮರಣೋತ್ತರ ಪರೀಕ್ಷೆಗಳ ದಾಖಲೆಗಳನ್ನು ತೋರಿಸಿದರು.

ಆದರೆ ಆ ಮರಣೋತ್ತರ ಪರೀಕ್ಷೆಗಳ ದಾಖಲೆಗಳೇ ಅವರು ಹೇಳುತ್ತಿರುವ ಸುಳ್ಳನ್ನು ಬಟಾಬಯಲಾಗಿಸಿದ್ದವು. ಏಕೆಂದರೆ ದಾಖಲೆಗಳ ಪ್ರಕಾರ ಎಲ್ಲ 21 ಜನರ ಮರಣೋತ್ತರ ಪರೀಕ್ಷೆಗಳನ್ನು ಒಂದೇ ತಂಡ ಒಂದೇ ಆಸ್ಪತ್ರೆಯಲ್ಲಿ ನಡೆಸಿತ್ತಲ್ಲದೇ ಪ್ರತಿ ಪರೀಕ್ಷೆಯನ್ನು ಕೇವಲ ಐದು ನಿಮಿಷಗಳಲ್ಲಿ ಮಾಡಿ ಮುಗಿಸಲಾಗಿತ್ತು. ಇದು ಅಸಾಧ್ಯವೇ ಸರಿ. ಇದರರ್ಥ ಪೊಲೀಸರು ಸಿಕ್ಕಿಬಿದ್ದ ನಂತರ ಅವರು ಈ ದಾಖಲೆಗಳನ್ನು ಸೃಷ್ಟಿಸಿದ್ದರು!

ಅಷ್ಟೇ ಅಲ್ಲ, ತಾವು ಆ ಶವಗಳನ್ನು ಸ್ಮಶಾನದಲ್ಲಿ ಹೂತಿದ್ದೆವು ಎಂಬ ಪೊಲೀಸರ ಹೇಳಿಕೆಯೂ ಸುಳ್ಳಾಗಿತ್ತು. ಏಕೆಂದರೆ ಪಂಡೇವಾಡದಲ್ಲಿರುವ 250 ಎಕರೆ ಸ್ಮಶಾನದಲ್ಲಿ ಅವುಗಳನ್ನು ಹೂಳುವ ಬದಲಾಗಿ ಒಂದು ಕಸದ ತಿಪ್ಪೆಯಂತಹ ಜಾಗದಲ್ಲಿ ಅಷ್ಟೇನು ಆಳವಿಲ್ಲದ ಗುಂಡಿಯನ್ನು ತೋಡಿ ಆ ಶವಗಳನ್ನು ಅದರಲ್ಲಿ ಸುರಿದಿದ್ದರು ಎಂಬುದೂ ಸಾಬೀತಾಯಿತು.

ಅಂದರೆ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಮಾರಣಹೋಮದಲ್ಲಿ ಪೊಲೀಸರೂ ಪಾಲುದಾರರಾಗಿದ್ದರು ಎಂಬುದನ್ನು ಈ ಪ್ರಕರಣ ಜಗಜ್ಜಾಹೀರು ಪಡಿಸಿತ್ತು. ಇದೆಲ್ಲ ನಡೆದು ಈಗ್ಗೆ ಆರು ವರ್ಷಗಳಾಗಿವೆ. ಈ ಮಧ್ಯೆ, ಹಲವು ಅಕ್ರಮಗಳನ್ನು ನಡೆಸಿದ್ದ ರೈಸ್ ಖಾನ್‌ನನ್ನು ತೀಸ್ತಾರ ಸಿಜೆಪಿ ತಂಡದಿಂದ ಹೊರಗೆ ಕಳುಹಿಸಲಾಗಿದೆ. ಈಗ ಆತ ನರೇಂದ್ರ ಮೋದಿಯ ಸರ್ಕಾರದೊಂದಿಗೆ ಗಳಸ್ಯಕಂಠಸ್ಯ ಸಂಬಂಧ ಹೊಂದಿದ್ದಾನೆ. ಅದೂ ಎಂತಹ 'ಆಪ್ತ' ಸಂಬಂಧವೆಂದರೆ ಈಗಾಗಲೇ ಕೋಮುಗಲಭೆಗೆ ನೆರವಾಗಿದ್ದಳು ಎಂಬ ಆರೋಪದ ಮೇಲೆ ಜೈಲು ಶಿಕ್ಷೆಗೆ ಗುರಿಯಾಗಿರುವ–ಈಗ ಜಾಮೀನಿನ ಮೇಲೆ ಹೊರಬಂದಿರುವ–ಮಾಜಿ ಸಚಿವೆ ಮಾಯಾ ಕೊಡ್ನಾನಿ ಎಂಬ ರಾಕ್ಷಸಿ ಮತ್ತು ವಿಶ್ವಹಿಂದೂ ಪರಿಷತ್ತಿನ ರಾಜ್ಯ ಪ್ರಧಾನ ಸಂಚಾಲಕನಾಗಿರುವ ಜೈದೀಪ್ ಪಟೇಲ್ ಎಂಬ ಕೋಮುವಾದಿಯ 'ಆಶ್ರಯ'ದಲ್ಲಿ ಜೀವಿಸುತ್ತಿದ್ದಾನೆ.

ಇಂಥ ಜನದ್ರೋಹಿ ರೈಸ್ ಖಾನ್ ಪೊಲೀಸರಿಗೆ ನೀಡಿರುವ ಹೇಳಿಕೆಯನ್ನಾಧರಿಸಿ ಈಗ ಗುಜರಾತ್ ಪೊಲೀಸರು ಪತ್ರಕರ್ತ ರಾಹುಲ್‌ಸಿಂಗ್, ಮಾನವಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್‌ವಾದ್ ಮತ್ತು ಸಿಪಿಜೆ ಪರವಾಗಿ ನ್ಯಾಯಾಲಯದ ಮುಂದೆ ವಾದಿಸುತ್ತಿರುವ ವಕೀಲ ಎಂ.ಎಂ. ತಿರ್‌ಮಿಜಿ ವಿರುದ್ಧ ದೂರುಗಳನ್ನು ದಾಖಲಿಸಿ ಅವರನ್ನೆಲ್ಲ ಸದ್ಯದಲ್ಲೇ ಬಂಧಿಸುತ್ತೇವೆ ಎಂದು ಹೂಂಕರಿಸುತ್ತಿದ್ದಾರೆ. ಅಂದಹಾಗೆ, ತೀಸ್ತಾ ಸಿಂಗ್ ಮತ್ತು ತಿರ್‌ಮಿಜಿ ವಿರುದ್ಧ ದೂರನ್ನು ದಾಖಲಿಸಿಕೊಂಡು ಅದರ ವಿಚಾರಣೆ ನಡೆಸುತ್ತಿರುವಾತ ಬೇರ್‍ಯಾರೂ ಅಲ್ಲ ಅಂದು ಪಂಚಮಹಲ್ ಜಿಲ್ಲೆಯ ಎಸ್‌ಪಿಯಾಗಿದ್ದ ಮತ್ತು ಈಗ ಡಿಜೆಪಿ ಆಗಿ ಬಡ್ತಿ ಪಡೆದಿರುವ ಅದೇ ಜೆ.ಕೆ. ಭಟ್!

ಹೀಗೆ ಈ ಮೂವರ ವಿರುದ್ಧ ಧಮಕಿ ಹಾಕುತ್ತಿರುವುದರ ಹಿಂದೆ ಇವರೆಲ್ಲರನ್ನು ತೆಪ್ಪಗಾಗಿಸುವ ನೇರ ಉದ್ದೇಶದೊಂದಿಗೆ ಇನ್ನೊಂದು ಪರೋಕ್ಷ ಗುರಿಯೂ ಅಡಗಿದೆ. ಅದೇನೆಂದರೆ ಈಗಾಗಲೇ ಬಿನಾಯಕ್ ಸೇನ್‌ರಂತಹ ಮಾನವಹಕ್ಕುಗಳ ಹೋರಾಟಗಾರರಿಗೆ ನಮ್ಮ ವ್ಯವಸ್ಥೆ ಜೀವಾವಧಿ ಶಿಕ್ಷೆಯನ್ನು ನೀಡುವಲ್ಲಿ ಯಶಸ್ವಿಯಾಗಿದೆ. (ಅಂದಹಾಗೆ ಒಂದು ಕೇಸಿಗೆ ಕೋಟ್ಯಂತರ ರೂಪಾಯಿಗಳ ಸಂಭಾವನೆ ಪಡೆಯುವ ಖ್ಯಾತ ವಕೀಲನೂ ಆಗಿರುವ, ಸದ್ಯ ನಮ್ಮ ದೇಶದ ಗೃಹ ಸಚಿವನೂ ಆಗಿರುವ ಪಿ. ಚಿದಂಬರಂ 'ನ್ಯಾಯಾಲಯದ ಮುಂದೆ ಅಪೀಲು ಹೋಗುವುದೊಂದೇ ಬಿನಾಯಕ್ ಸೇನ್‌ರ ಮುಂದಿರುವ ಆಯ್ಕೆ' ಎಂದು ಹೇಳಿದ್ದಾರೆ. ಆ ಅಪೀಲು ಸುಪ್ರೀಂಕೋರ್ಟ್ ಮುಂದೆ ಹೋಗಿ ಅಲ್ಲಿ ಖುಲಾಸೆಗೊಳ್ಳುವ ಹೊತ್ತಿಗೆ ಅದೆಷ್ಟು ವರ್ಷಗಳನ್ನು ಸೇನ್ ಜೈಲಿನಲ್ಲಿ ಕಳೆಯಬೇಕಿದೆಯೋ). ಈಗ ತೀಸ್ತಾ ಸೆಟಲ್‌ವಾದ್ ಅವರನ್ನು ಬಂಧಿಸುವ ಬೆದರಿಕೆ ಒಡ್ಡುವ ಮೂಲಕ ದೇಶದಾದ್ಯಂತ ಯಾರೂ ಮಾನವಹಕ್ಕುಗಳ ಉಲ್ಲಂಘನೆ ಬಗ್ಗೆ ಚಕಾರವೆತ್ತ ಕೂಡದು ಎಂಬ ಸಂದೇಶವನ್ನು ರವಾನಿಸಲಾಗಿದೆ.

ಹಾಗೆಯೇ ತಿರ್‌ಮಿಜಿ ಎಂಬ ವಕೀಲರಿಗೂ ಬೆದರಿಕೆಯೊಡ್ಡುವ ಮೂಲಕ ಬೇರೆ ವಕೀಲರಿಗೂ "ಇಂತಹ ಕೇಸ್‌ಗಳನ್ನು ಕೈಗೆತ್ತಿಕೊಂಡರೆ ಹುಷಾರ್!" ಎಂಬ ಸೂಚನೆಯನ್ನು ನೀಡಲಾಗಿದೆ.

ಇನ್ನು ರಾಹುಲ್ ಸಿಂಗ್ ಎಂಬ ಪತ್ರಕರ್ತನ ವಿರುದ್ಧ ಗುಜರಾತಿನ ಪೊಲೀಸರು ಜಾರಿ ಮಾಡಿರುವ ವಾರೆಂಟ್ ಅಂತೂ ಪ್ರಜಾಪ್ರಭುತ್ವದ ನಾಲ್ಕನೆ ಸ್ತಂಭವಾಗಿರುವ ಪತ್ರಿಕೋದ್ಯಮಕ್ಕೆ ಸವಾಲು ಹಾಕಿರುವಂತಿದೆ. ರಾಹುಲ್ ಸಿಂಗ್ ವಿರುದ್ಧ ಪೊಲೀಸರು ದಾಖಲಿಸಿಕೊಂಡಿರುವ ದೂರಿನ ಪ್ರಕಾರ ಆತ ತಮ್ಮ ಸಾಮೂಹಿಕ ಕೊಲೆಗಳ ಬಗ್ಗೆ ವರದಿ ಮಾಡುವ ಮೂಲಕ ಕೋಮುಗಲಭೆಗೆ ಪ್ರಚೋದಿಸಿದ್ದಾರಂತೆ. ಹಾಗಾದರೆ, ಅಪರಾಧವೊಂದರ ಬಗ್ಗೆ ವರದಿ ಮಾಡುವುದು ಯಾವ ಕಾನೂನಿನಪ್ರಕಾರ ಅಪರಾಧವಾಗುತ್ತದೆ ಎಂಬ ಪ್ರಶ್ನೆಯನ್ನು ಎಲ್ಲ ಪತ್ರಕರ್ತರೂ ಕೇಳಬೇಕಿದೆ.


ತೀಸ್ತಾ ಸೆಟಲ್‌ವಾದ್ ನನ್ನ ಗೆಳತಿ; ಹಿರಿ ಅಕ್ಕ ಇದ್ದ ಹಾಗೆ. ಗುಜರಾತಿನ ಅಮಾಯಕರಿಗೆ ನ್ಯಾಯ ಒದಗಿಸುವ ತನ್ನ ಹೋರಾಟದ ನಡುವೆಯೂ ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆಗೆ ಸ್ನೇಹ ಮತ್ತು ಬೆಂಬಲ ನೀಡಿರುವ ನಮ್ಮೆಲ್ಲರ ಸಂಗಾತಿ.

ನಮ್ಮ ತೀಸ್ತಾ ಗಟ್ಟಿಗಿತ್ತಿ. ಈ ಹಿಂದೆ ಇಂತಹ ಹಲವಾರು ಬೆದರಿಕೆಗಳನ್ನು ದೃಢವಾಗಿ ಎದುರಿಸಿದ್ದಾರೆ. ಉದಾಹರಣೆಗೆ, ಬೆಸ್ಟ್ ಬೇಕರಿ ಎಂಬ ಮಾರಣಹೋಮದಲ್ಲಿ ಏಕೈಕ ಸಾಕ್ಷಿ ಆಗಿದ್ದ ಜಹೀರಾ ಎಂಬಾಕೆಯ ಪರವಾಗಿ ತೀಸ್ತಾ ನ್ಯಾಯಾಲಯದ ಮುಂದೆ ಹೋರಾಡಿದ್ದರು. ಆದರೆ ಆಗ ಜಹೀರಾ ಕೂಡ ರೈಸ್ ಖಾನ್‌ನಂತೆ ಹಿಂದೂತ್ವವಾದಿಗಳ ಆಮಿಷಕ್ಕೆ ಬಲಿಯಾಗಿ ತೀಸ್ತಾ ವಿರುದ್ಧವೇ ತಿರುಗಿಬಿದ್ದಿದ್ದಳು. ಪರಿಣಾಮವಾಗಿ ಜಹೀರಾಳಿಗೆ ನ್ಯಾಯಾಲಯದ ಮುಂದೆ 'ಸುಳ್ಳು' ಹೇಳಿದ ಕಾರಣಕ್ಕಾಗಿ ಜೈಲು ಶಿಕ್ಷೆಯನ್ನು ನೀಡಲಾಗಿತ್ತು. ಬೇರೆಯವರಾಗಿದ್ದರೆ ಜಹೀರಾಳಿಗೆ ತಕ್ಕದ್ದೇ ಆಯಿತು ಎಂದು ಭಾವಿಸುತ್ತಿದ್ದರು. ಆದರೆ ತೀಸ್ತಾ ಅಂತ ವ್ಯಕ್ತಿ ಅಲ್ಲ, ಬದಲಾಗಿ ಜಹೀರಾಳಿಗೆ ಶಿಕ್ಷೆ ಆಯಿತೇ ಹೊರತು ಆಕೆಯನ್ನು ಅಂತಹ ಸ್ಥಿತಿಗೆ ದೂಡಿದವರು ಪಾರಾದರಲ್ಲ ಎಂದು ವ್ಯಥೆಪಟ್ಟಿದ್ದರು.

ಈಗಲೂ ಕೂಡ ಯಾವುದೇ ಕ್ಷಣದಲ್ಲಿ ಗುಜರಾತಿನ ಪೊಲೀಸರು ತನ್ನನ್ನು ಬಂಧಿಸಬಹುದು ಎಂಬ ಬೆದರಿಕೆ ಇದ್ದರೂ ತೀಸ್ತಾ ಧೃತಿಗೆಟ್ಟಿಲ್ಲ. ಆದರೆ ಗುಜರಾತಿನ ಕೋಮು ಗಲಭೆಯಲ್ಲಿ ಸತ್ತವರ ಪರ ದನಿ ಎತ್ತುತ್ತಿರುವವರು ಕೇವಲ ಅಸುನೀಗಿದವರ ಸಂಬಂಧಿಕರು ಮತ್ತು ಸಾಮಾಜಿಕ ಕಾಳಜಿ ಹೊಂದಿರುವವರು ಮಾತ್ರ; ಇದೊಂದು ಆಂದೋಲನವಾಗಲಿಲ್ಲ ಎಂಬುದರ ಬಗ್ಗೆ ಅವರಲ್ಲಿ ಜಿಗುಪ್ಸೆ ಇದೆ. ಅಷ್ಟೇ ಅಲ್ಲ, 2004 ರ ಚುನಾವಣೆಯಲ್ಲಿ ಗುಜರಾತಿನ ನರಮೇಧಕ್ಕೆ ಕಾರಣರಾದವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುತ್ತದೆ ಎಂದು ಭರವಸೆ ನೀಡಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇವತ್ತು ಅದನ್ನು ಮರೆತಿರುವುದರ ಬಗ್ಗೆಯೂ ತೀಸ್ತಾ ಅವರಲ್ಲಿ ಅಪಾರ ನೋವಿದೆ. "ಸತ್ತ ಅಮಾಯಕರ ಪರವಾದ ಈ ಹೋರಾಟಕ್ಕಿಂತಲೂ ಅವರಿಗೆ ರಾಜಕೀಯ ಕಾರಣಗಳು ಮುಖ್ಯವಾಗಿದೆ. ಜೊತೆಗೆ ಅವರೇ ಈ ಹಿಂದೆ ನಡೆಸಿದ ಹತ್ಯಾಕಾಂಡಗಳು ಅವರ ರಕ್ತಸಿಕ್ತ ಕೈಗಳನ್ನು ತಡೆಯುತ್ತಿವೆ. ಆದ್ದರಿಂದಲೇ ಗುಜರಾತಿನ ಕೊಲೆಗಡುಕರನ್ನು ಎದುರು ಹಾಕಿಕೊಳ್ಳದೆ ನೆಮ್ಮದಿಯ ನಿದ್ದೆಯಲ್ಲಿದ್ದಾರೆ" ಎಂದು ತೀಸ್ತಾ ದುಃಖಪಡುತ್ತಿದ್ದಾರೆ.

ನಮ್ಮ ದೇಶದ ರಾಜಕೀಯ, ಆಡಳಿತ ವ್ಯವಸ್ಥೆ ಮತ್ತು ನ್ಯಾಯಾಂಗ ತಲುಪಿರುವ ದುಃಸ್ಥಿತಿಗೆ ಇದಕ್ಕಿಂತ ದುರಂತಮಯ ಉದಾಹರಣೆ ಇದ್ದೀತೆ? ●

ತೆರಿಗೆ ಕದ್ದು ಸಿಕ್ಕಿಬಿದ್ದ ರೆಡ್ಡಿ



ತೆರಿಗೆ ಕಳ್ಳ ಗಣಿರೆಡ್ಡಿ

ಸರ್ಕಾರಕ್ಕೆ ಪಾವತಿಸಬೇಕಿದ್ದ ತೆರಿಗೆಯನ್ನು ವಂಚಿಸುವುದು ಕೂಡ ದೇಶದ್ರೋಹ ಅಥವಾ ಶಿಕ್ಷಾರ್ಹ ಅಪರಾಧ ಅನ್ನುವುದೇ ಆದಲ್ಲಿ ಕರ್ನಾಟಕದ ಮಂತ್ರಿಗಳಾದ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಮತ್ತು ಶ್ರೀರಾಮುಲು ಖಂಡಿತ ಅಪರಾಧಿಗಳಾಗಿ ನಿಲ್ಲಲೇಬೇಕಿದೆ.

ಈ ಮೂವರೂ ಖದೀಮರು ಅರ್ಥಾತ್ ರಾಜ್ಯದ ಮಂತ್ರಿವರ್ಯರು ಸರ್ಕಾರಕ್ಕೆ ವಂಚಿಸಿದ ಒಂದೇ ಒಂದು ಸುತ್ತಿನ ತೆರಿಗೆಯ ಮೊತ್ತವೇ 86.42 ಕೋಟಿ!

ಅಂದರೆ 86 ಕೋಟಿ 42 ಲಕ್ಷದ 88 ಸಾವಿರದ ಎಂಟು ನೂರಾ ಎರಡು ರೂಪಾ ಯಿಗಳು!

ಕದ್ದ ತೆರಿಗೆಯೇ 86 ಕೋಟಿ

ಇಂಥಾದೊಂದು ಬೃಹತ್ ತೆರಿಗೆ ವಂಚನೆಯನ್ನು ಪತ್ತೆಹಚ್ಚಿದ್ದು ಬೆಂಗಳೂರು ವಲಯದ ಆದಾಯ ತೆರಿಗೆ ಅಧಿಕಾರಿಗಳಾದ ಬಿ.ಎನ್. ಮೋಹನ್, ಸಿಬಿಚಿನ್ ಮ್ಯಾಥ್ಯೂ ಮತ್ತು ಜಿ.ಎಂ. ಬೆಳಗಲಿ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು 2007 ರ ಅಕ್ಟೋ ಬರ್ 26 ರಂದು ನಡೆಸಿದ ಇನ್‌ಕಮ್ ಟ್ಯಾಕ್ಸ್ ದಾಳಿಯಲ್ಲಿ ಗಣಿರೆಡ್ಡಿಗಳ ಅಡ್ಡೆಯಿಂದ ವಶಪಡಿಸಿಕೊಂಡ ದಾಖಲೆಗಳು ಮತ್ತು ಕಾಗದಪತ್ರಗಳನ್ನು ಕೆದಕುತ್ತಾ ಹೋದಂತೆಲ್ಲ ಗಾಲಿ ಜನಾರ್ದನ ರೆಡ್ಡಿ ಮತ್ತು ಆತನ ದುಷ್ಟಕೂಟ ನಡೆಸಿದ ತೆರಿಗೆ ವಂಚನೆಯ ಮರ್ಮ ಬಯಲಾಗಿದೆ.

ಸದ್ಯ ಇನ್‌ಕಮ್ ಟ್ಯಾಕ್ಸ್ ಇಲಾಖೆಯ ಗರ್ಭದಲ್ಲಿ ಉಸಿರಾಡುತ್ತಿರುವ ಗಣಿ ರೆಡ್ಡಿಗಳ ಮೋಸದ ಫೈಲುಗಳೇ ತೆರೆದಿಡುವಂತೆ ನಿಸ್ಸಂಶಯವಾಗಿ ಇದು 86.42 ಕೋಟಿ ರೂಪಾಯಿಗಳ ಬೃಹತ್ ತೆರಿಗೆ ವಂಚನೆ.

ಎಷ್ಟೊಂದು ಉಪಾಯವಾಗಿ ಮತ್ತು ಎಂಥಾ ಖತರ್‌ನಾಕ್ ತಂತ್ರ ಬಳಸಿ ಗಾಲಿ ಜನಾರ್ದನ ರೆಡ್ಡಿ ಈ ಪಾಟಿ ತೆರಿಗೆ ವಂಚಿಸಿದ್ದಾನೆಂಬ ವಿವರಗಳೇ ಎಂಥವರನ್ನೂ ಬೆಸ್ತು ಬೀಳಿಸುತ್ತದೆ. ಇದು ನಡೆದದ್ದು 2007 ಮತ್ತು 2008ರ ಮಧ್ಯೆ. ಆಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಟನ್ ಕಬ್ಬಿಣದ ಅದಿರಿಗೆ ಕಳ್ಳನೇ ಆದರೂ 144ರಿಂದ 165 ಅಮೆರಿಕನ್ ಡಾಲರ್‌ಗಳನ್ನು ಕೊಡುತ್ತಿದ್ದ. 144.25 ರಿಂದ 165. 30 ಅಮೆರಿಕನ್ ಡಾಲರ್‌ಗಳಷ್ಟಿದ್ದ ಟನ್ ಅದಿರನ್ನು ಗಾಲಿ ರೆಡ್ಡಿ ಒಡೆತನದ ಓಬಳಾಪುರಂ ಮೈನಿಂಗ್ ಕಂಪೆನಿ ಸಿಂಗಾಪುರದ ಜಿಎಲ್‌ಎ ಟ್ರೇಡಿಂಗ್ ಇಂಟರ್‌ನ್ಯಾಷನಲ್ ಪ್ರೈ.ಲಿ. ಎಂಬ ಕಂಪೆನಿಯೊಂದಕ್ಕೆ ಮಾರಿದ್ದು ಕೇವಲ 76.14 ರಿಂದ 98.24 ಅಮೆರಿಕನ್ ಡಾಲರ್‌ಗಳಿಗೆ.

ಬೇರೆಲ್ಲ ಅದಿರು ರಫ್ತು ಕಂಪೆನಿಗಳು ಗಣಿ ರೆಡ್ಡಿಗಳು ಮಾರಿದ್ದಕ್ಕಿಂತಲೂ ದುಪ್ಪಟ್ಟು ಬೆಲೆಗೆ ಮಾರುತ್ತಿದ್ದಾಗ ಗಾಲಿ ಜನಾರ್ದನ ರೆಡ್ಡಿ ತನ್ನ ಓಬಳಾಪುರಂ ಮೈನಿಂಗ್ ಕಂಪೆನಿಯ ಅದಿರನ್ನು ಏಕೆ ಹೆಚ್ಚು ಕಮ್ಮಿ ಅರ್ಧಬೆಲೆಗೆ ಸಿಂಗಾಪೂರದ ಕಂಪನಿಗೆ ಮಾರುತ್ತಿದ್ದಾನೆಂಬ ಸಂಗತಿಯೇ ವಿಚಿತ್ರವಾಗಿತ್ತು. 2007ರ ಅಕ್ಟೋಬರ್ 26ರಂದು ನಡೆದ ಇನ್‌ಕಂಟ್ಯಾಕ್ಸ್ ರೇಡಿನಲ್ಲಿ ಜಪ್ತಾದ ದಾಖಲೆಗಳೇ ಹೇಳುತ್ತಿದ್ದ ಈ ಸತ್ಯ(!)ವನ್ನು ಕೆದಕ ಹೊರಟ ಐಟಿ ಅಧಿಕಾರಿಗಳು ಸಹಜವಾಗೇ ಓಎಂಸಿ ಕಂಪೆನಿಯಿಂದ ಈ ಬಗ್ಗೆ ವಿವರಣೆ ಕೇಳಿದ್ದರು ಅದಕ್ಕೆ ಗಾಲಿ ಜನಾರ್ದನ ರೆಡ್ಡಿ ತಾನು ಇತರೇ ದೇಶಗಳ ಜೊತೆ ಬಾಂಧವ್ಯ ವೃದ್ಧಿಸಲು ಮತ್ತು ಜಾಗತಿಕವಾಗಿ ಅದಿರಿನ ಧಾರಣೆಯ ಏರುಪೇರನ್ನು ತಡೆಯುವ ಉದ್ದೇಶದಿಂದ ಮಿಕ್ಕೆಲ್ಲರಿಗಿಂತಲೂ ಅತೀ ಕಮ್ಮಿ ರೇಟಿಗೆ ಅದಿರು ಮಾರಿದೆನೆಂದು ಸತ್ಯಹರಿಶ್ಚಂದ್ರನ ಗತ್ತಿನಲ್ಲಿ ಉತ್ತರ ನೀಡಿದ್ದ. ಬಹುಶಃ ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದರೆ ಅದು ಲೋಕಕ್ಕೆ ಗೊತ್ತಾಗದೆಂದೇ ಗಾಲಿ ರೆಡ್ಡಿ ಲೆಕ್ಕ ಹಾಕಿದ್ದ.


ಆದರೆ ಇನ್‌ಕಮ್ ಟ್ಯಾಕ್ಸ್ ಇಲಾಖೆಯ ಲೆಕ್ಕ ಪರಿಶೋಧಕರಿಗೆ ರೆಡ್ಡಿಯ ಕಳ್ಳ ಬುದ್ಧಿ ಗೊತ್ತಾಗಿಹೋಗಿತ್ತು. ತನ್ನದೇ ಹೆಸರಿನಲ್ಲಿ ಸಿಂಗಾಪೂರ್‌ನಲ್ಲೊಂದು ನಕಲಿ ಕಂಪೆನಿ ಹುಟ್ಟುಹಾಕಿ ಇಲ್ಲಿಂದ ಅದೇ ಕಂಪೆನಿಗೆ ಕಮ್ಮಿ ದರಕ್ಕೆ ತಾನೇ ಅದಿರು ಮಾರಿದಂತೆ ದಾಖಲೆ ಸೃಷ್ಟಿಸಿ ನಂತರ ಅದೇ ಅದಿರನ್ನು ಸಿಂಗಾಪೂರ್ ಮೂಲಕ ದುಬಾರಿ ರೇಟಿಗೆ ರೆಡ್ಡಿ ಮಾರಿಕೊಂಡಿದ್ದ. ಮಾರುಕಟ್ಟೆ ರೇಟಿಗೇ ಇಲ್ಲಿಂದ ರಫ್ತು ಮಾಡಿಬಿಟ್ಟರೆ ಎಲ್ಲಿ ಹೆಚ್ಚಿಗೆ ತೆರಿಗೆ ಕಟ್ಟಬೇಕಾಗುತ್ತೋ ಎಂದು ತೀರ ಕಮ್ಮಿ ರೇಟಿಗೆ ಮಾರಿದಂತೆ ಮಾಡಿ ಅರ್ಧಕ್ಕರ್ಧ ತೆರಿಗೆ ಕದಿಯುವುದು ರೆಡ್ಡಿಯ ಉದ್ದೇಶವಾಗಿತ್ತು.

ಮಾರುಕಟ್ಟೆ ರೇಟಿಗಿಂತಲೂ ಕಮ್ಮಿ ರೇಟಿಗೆ ಏಕೆ ರಫ್ತು ಮಾಡಿದ್ದು ಎಂಬ ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳ ಪ್ರಶ್ನೆಗೆ ರೆಡ್ಡಿ ಎಂಥಾ ಕತೆ ಹೊಡೆದಿದ್ದನೆಂದರೆ, 2007ರ ಜನವರಿ 3ರಂದೇ ಮಾಡಿಕೊಂಡ ಒಪ್ಪಂದದ ಪ್ರಕಾರ ಅಂದರೆ ಬಹುದಿನಗಳ ಹಿಂದೆಯೇ ಮಾಡಿಕೊಂಡ ಒಪ್ಪಂದದಂತೆ ಹಳೇ ರೇಟಿಗೆ ಅದಿರು ರಫ್ತು ಮಾಡಲಾಯ್ತು.

ಹೀಗೆ ಹಿಂದೆಂದೋ ಮಾಡಿಕೊಂಡ ಒಪ್ಪಂದದಂತೆ ಅದಿರು ರಫ್ತು ಮಾಡಬೇಕಿದ್ದದ್ದು ಕಾನೂನು ಪರಿಧಿಗೆ ಬರುತ್ತದೆಯಾದ್ದರಿಂದ, ಹಾಗೊಮ್ಮೆ ಆ ರೇಟಿಗೆ ಕೊಡದೇ ಹೋದರೆ ಸಿಂಗಾ ಪೂರ್‌ನ ಆ ಕಂಪೆನಿಯವರು ತನ್ನ ವಿರುದ್ಧ ಕಾನೂನುಕ್ರಮ ಜರುಗಿಸುವ ಅಪಾಯ ವಿತ್ತಾದ್ದರಿಂದ ವಿಧಿಯಿಲ್ಲದೇ ತಾನು ಕಮ್ಮಿ ರೇಟಿಗೆ ಮಾರಬೇಕಾಯ್ತು ಎಂಬದು ಗಾಲಿ ರೆಡ್ಡಿಯ ಕಳ್ಳ ನೆಪವಾಗಿತ್ತು.

ಗಾಲಿ ರೆಡ್ಡಿಯ ಇಂಥ ಕಳ್ಳ ವಿವರಣೆ ಯನ್ನೇ ಕೆದಕುತ್ತಾ ಹೋದ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳಿಗೆ ಹೇಗೆ ರೆಡ್ಡಿ ಒಂದರಮೇಲೊಂದು ಸುಳ್ಳು ಪೋಣಿಸಿ ವಂಚಿಸಿದ್ದ ಎಂಬುದು ದಾಖಲೆ ಸಮೇತ ಬಯಲಾಗಿತ್ತು.

ಯಾವ ಜಿಎಲ್‌ಎ ಟ್ರೇಡಿಂಗ್ ಇಂಟರ್‌ನ್ಯಾಷನಲ್ ಪ್ರೈ.ಲಿ. ಎಂಬ ಸಿಂಗಾಪೂರ್ ಕಂಪೆನಿಗೆ ಲಕ್ಷಗಟ್ಟಲೇ ಟನ್ನುಗಳಷ್ಟು ಅದಿರನ್ನು ಓಬಳಾಪುರಂ ಮೈನಿಂಗ್ ಕಂಪೆನಿ ರಫ್ತು ಮಾಡಿತ್ತೋ ಅದೇ ಒಂದು ಬೋಗಸ್ ಕಂಪೆನಿಯಾಗಿತ್ತು. ಅಸಲಿಗೆ man-go pub ಪ್ರೈ.ಲಿ. ಎಂಬ ಸಿಂಗಾಪೂರ್‌ನ ಕಂಪೆನಿಯೇ ತನ್ನ ಹೆಸರನ್ನು ಬದಲಿಸಿಕೊಂಡು GLA trading international Pvt Ltd ಎಂಬ ಕಂಪೆನಿಯಾಗಿತ್ತು. 2007ರ ಸೆಪ್ಟೆಂಬರ್ 6ರ ತನಕ ಈ ಕಂಪೆನಿಗೆ ಡೈರೆಕ್ಟರ್ ಆಗಿದ್ದವನು ಆರಂಗನ್ನೆಲ್ ಎಂಬಾತ.



ಆದರೆ ಕಂಪೆನಿ ತನ್ನ ಹಿಂದಿದ್ದ ಹೆಸರನ್ನು ಬದಲಿಸಿಕೊಂಡು ಗಾಲಿ ಜನಾರ್ದನ ರೆಡ್ಡಿ ಅದಕ್ಕೆ ಡೈರೆಕ್ಟರ್ ಆಗಿ ನೇಮಕಗೊಳ್ಳುತ್ತಿದ್ದಂತೆ ಇಡೀ ಕಂಪೆನಿಯ ಷೇರನ್ನು GJR Holdings international Ltd ಎಂಬ ಮತ್ತೊಂದು ಕಂಪೆನಿಗೆ ವರ್ಗಾಯಿಸಲಾಯ್ತು. ಹೀಗೆ ಒಂದು ಕಂಪೆನಿಯಿಂದ ಮತ್ತೊಂದು ಕಂಪೆನಿಗೆ ವರ್ಗಾವಣೆಯಾದ ಷೇರು ಆದರೂ ಎಷ್ಟೆಂದರೆ, ಅದು ಕೇವಲ ಒಂದು ಸಿಂಗಾಪೂರ್ ಡಾಲರ್!

ಇಲ್ಲಿ GJR Holdings ಕಂಪೆನಿಯ ಮೊದಲ ಮೂರು ಅಕ್ಷರಗಳಾದ GJR ಎಂದರೆ ಗಾಲಿ ಜನಾರ್ದನ ರೆಡ್ಡಿ!

ತಾನು ಸಿಂಗಾಪೂರ್‌ನ man-go pub Pvt Ltd ಕಂಪೆನಿಯ ಜೊತೆ 2007ರ ಜನವರಿ 3ರಂದು ಒಪ್ಪಂದ ಮಾಡಿಕೊಂಡಿದ್ದಾಗಿ ಗಾಲಿ ರೆಡ್ಡಿ ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳಿಗೆ ಲಿಖಿತ ಹೇಳಿಕೆ ಕೊಟ್ಟದ್ದೇ ಸುಳ್ಳಾಗಿತ್ತು. ಅಸಲಿಗೆ ರೆಡ್ಡಿ ಒಪ್ಪಂದ ಮಾಡಿಕೊಂಡಿದ್ದು 2007ರ ಸೆಪ್ಟೆಂಬರ್ 6ಕ್ಕೆ. ಅಂದರೆ ಆ ಹೊತ್ತಿಗೆ ಆರೆಂಗನ್ನೆಲ್ ಎಂಬಾತ man-go pub ಕಂಪೆನಿಗೆ ಏನೇನೂ ಆಗಿರಲಿಲ್ಲ!

ದೋಚಿದ ಅದಿರಿನ ನಿಕ್ಷೇಪ



ಇದರರ್ಥ ಓಬಳಾಪುರಂ ಮೈನಿಂಗ್ ಕಂಪೆನಿ ಸಿಂಗಾಪೂರ್ ವಿಳಾಸದ ತನ್ನದೇ ಜಿಎಲ್‌ಎ ಟ್ರೇಡಿಂಗ್ ಇಂಟರ್‌ನ್ಯಾಷನಲ್ ಕಂಪೆನಿಗೆ ಅದಿರು ರಫ್ತು ಮಾಡಿದಂತೆ ದಾಖಲೆ ಸೃಷ್ಟಿಸಿ ಆ ನಂತರ ಅದನ್ನು ಮತ್ತೆ ಗಾಲಿ ರೆಡ್ಡಿಯದೇ ಹೆಸರಿನ ಡಗ್ಲಾಸ್ ಐಲ್ಯಾಂಡ್ ವಿಳಾಸದ ಕಂಪೆನಿಗೆ ಮಾರಿದಂತೆ ಮಾಡಿ ಅದನ್ನು ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್‌ನ ಇಂಟರ್ ಲಿಂಕ್ ಸರ್ವೀಸಸ್ ಗ್ರೂಪ್ ಲಿಮಿಟೆಡ್ ಕಂಪೆನಿಗೆ ದುಬಾರಿ ರೇಟಿಗೆ ಮಾರಿತ್ತು.

2007ರ ಏಪ್ರಿಲ್ 1ರಿಂದ 2008ರ ಮಾರ್ಚ್ 31ರ ತನಕ ಪ್ರತಿ ವರ್ಷ 8 ರಿಂದ 10 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಅದಿರನ್ನು ಸರಬರಾಜು ಮಾಡುತ್ತೇನೆಂದು ರೆಡ್ಡಿ ಸಿಂಗಾಪೂರ್ ಕಂಪೆನಿ ಜೊತೆ ಒಪ್ಪಂದ ಮಾಡಿಕೊಂಡಿದ್ದು ಕೂಡ ಕಪಟ ನಾಟಕವಾಗಿತ್ತು. ಒಪ್ಪಂದದಂತೆ ಪ್ರತಿ ವರ್ಷ ಸರಬರಾಜು ಮಾಡಬೇಕಿದ್ದ ಅದಿರಿನ ಪ್ರಮಾಣವನ್ನೇ ಬದಿಗೊತ್ತಿ ರೆಡ್ಡಿ 2008ರ ಮಾರ್ಚ್ ತಿಂಗಳಲ್ಲಷ್ಟೇ ಅದಿರು ಕಳಿಸಿಕೊಟ್ಟಿದ್ದ!

ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಂಬಂಧ ಕಟ್ಟಿಕೊಳ್ಳಲು ಮತ್ತು ಜಾಗತಿಕ ಧಾರಣೆ ಏರುಪೇರಾಗುವುದನ್ನು ತಡೆಯಲು ತಾನು ಕಮ್ಮಿ ರೇಟಿಗೆ ಮಾರಿದ್ದಾಗಿ ರೆಡ್ಡಿ ಹೇಳಿಕೆ ಕೊಟ್ಟದ್ದೇ ಹಾಸ್ಯಾಸ್ಪದ ಎಂದು ಆದಾಯ ತೆರಿಗೆ ಅಧಿಕಾರಿಗಳು ತಮ್ಮ ವರದಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಹಾಗೊಮ್ಮೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಕಂಪೆನಿಯ ಹಿರಿಮೆಯನ್ನು ಉಳಿಸಿಕೊಳ್ಳುವುದೇ ಹೌದಾಗಿದ್ದರೆ ಗಾಲಿ ರೆಡ್ಡಿ ಕೇವಲ ಒಂದೇ ಒಂದು ಸಿಂಗಾಪೂರ್ ಡಾಲರ್ ಬಂಡ ವಾಳದ GLA ಟ್ರೇಡಿಂಗ್ ಕಂಪೆನಿಯಂಥ ಬೋಗಸ್ ಕಂಪೆನಿಯ ಜೊತೆ ಯಾವ ಆಧಾರದ ಮೇಲೆ ಒಪ್ಪಂದ ಮಾಡಿಕೊಂಡ? ತಾನು ಒಪ್ಪಂದ ಮಾಡಿಕೊಳ್ಳುವ ದಕ್ಕೂ ಮುನ್ನ ಆ ಕಂಪೆನಿಯ ಅಸಲಿಯತ್ತೇನು? ಅದರ ಡೈರೆಕ್ಟರ್‌ನ ಹಿಂದವಾಳವೇನು? ಅಂಥ ಕಂಪೆನಿಯ ಇತಿಹಾಸ ವೇನು? ಇತ್ಯಾದಿ ಯಾವುದನ್ನೂ ಪರಿಶೀಲಿಸದೇ ಗಣಿ ರೆಡ್ಡಿಯಂಥ ಇಂಟರ್‌ನ್ಯಾಷನಲ್ ಖದೀಮನೊಬ್ಬ ಹೇಗೆ ವ್ಯಾಪಾರಕ್ಕಿಳಿದ?

ಹಾಗೊಮ್ಮೆ ಜಿಎಲ್‌ಎ ಟ್ರೇಡಿಂಗ್ ಕಂಪೆನಿಗೆ ನಿಜಕ್ಕೂ ಅದಿರು ಖರೀದಿಸುವ ಅಥವಾ ಕೋಟ್ಯಾಂತರ ಡಾಲರ್‌ಗಳ ವ್ಯವಹಾರವನ್ನು ನಿಭಾಯಿಸುವ ತಾಕತ್ತು ಇದ್ದಿದ್ದೇ ಆಗಿದ್ದರೆ ಓಬಳಾಪುರಂ ಮೈನಿಂಗ್ ಕಂಪೆನಿಯ ಜೊತೆ ಅದು ಅದಿರು ಖರೀದಿ ಒಪ್ಪಂದ ಮಾಡಿಕೊಂಡಾಗಲೇ ಇಂತಿಷ್ಟೆಂದು ಮುಂಗಡ ಹಣವನ್ನು ಪಾವತಿಸಬೇಕಾಗಿತ್ತು. ಯಾವುದೇ ಅಡ್ವಾನ್ಸ್ ಮೊತ್ತವನ್ನು ಪಡೆಯದೆ ಯಾರೂ ಕೂಡ ಏನೊಂದನ್ನೂ ಕೇಳದೆ ಈ ಕಾಲದಲ್ಲಿ ಕೇವಲ ನಾಮಕಾವಸ್ತೆಯ ಅಗ್ರಿಮೆಂಟ್ ಮಾಡಿಕೊಂಡು ಯಾವ ಗ್ಯಾರಂಟಿ ಮೇಲೆ ಸಿಂಗಾಪುರ್ ಕಂಪೆನಿಗೆ ಗಾಲಿ ರೆಡ್ಡಿ ಕೋಟ್ಯಾಂತರ ಡಾಲರ್‌ಗಳ ಮೊತ್ತದ ಅದಿರನ್ನು ಕಳಿಸಿಕೊಟ್ಟ?


ಇಂಥ ಅನೇಕ ಪ್ರಶ್ನೆಗಳಿಗೆ ಗಾಲಿ ಜನಾರ್ದನ ರೆಡ್ಡಿಯ ಬಳಿ ಉತ್ತರಗಳೇ ಇರಲಿಲ್ಲ. ಮಾರುಕಟ್ಟೆಯಲ್ಲಿ ಅದಿರಿನ ಧಾರಣೆ ದಿನೇದಿನೇ ಏರುಗತಿಯಲ್ಲಿದ್ದ ಸಂದರ್ಭದಲ್ಲಿ ತಾನು ನಷ್ಟ ಮಾಡಿಕೊಂಡು ತೀರ ಕಮ್ಮಿ ರೇಟಿಗೆ ಅದಿರನ್ನು ರಫ್ತು ಮಾಡಿದ ಜನಾರ್ದನ ರೆಡ್ಡಿಯ ಉದ್ದೇಶ ತೆರಿಗೆ ಕದಿಯುವುದರ ಹೊರತಾಗಿ ಮತ್ತೊಂದಾಗಿರುವುದು ಸಾಧ್ಯವೇ ಇರಲಿಲ್ಲ. ತನ್ನ ವ್ಯಾಪಾರ ವೃದ್ಧಿಸುತ್ತದೆ ಎಂದೋ, ಇದರಿಂದ ತನಗೆ ಹೊಸ ಹೊಸ ಗಿರಾಕಿಗಳು ದಕ್ಕುತ್ತಾರೆಂದೋ ರೆಡ್ಡಿ ಹೇಳಿಕೆಯೇ ನಿಜವಾಗಿದ್ದರೆ ಯಾಕೆ ಹೊಸ ಹೊಸ ಕಂಪೆನಿಗಳು ಆತನ ಅದಿರು ಖರೀದಿಸಲು ಮುಂದೆ ಬರಲಿಲ್ಲ?

ಈ ಎಲ್ಲಾ ಕಳ್ಳಾಟಗಳನ್ನು ಲೆಕ್ಕ ಹಾಕಿಯೇ ಇನ್‌ಕಮ್ ಟ್ಯಾಕ್ಸ್ ಇಲಾಖೆ ಇದೊಂದು ಶುದ್ಧ ತೆರಿಗೆ ವಂಚನೆಯೆಂದು ನಿರ್ಧರಿಸಿದೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕಲೆ ಹಾಕುತ್ತಿದೆ. ಆ ಪ್ರಕಾರವೇ ಶಿಕ್ಷೆ ವಿಧಿಸಿದ ಪಕ್ಷದಲ್ಲಿ ಕದ್ದ ತೆರಿಗೆ ಪ್ರಮಾಣದ 300 ಪಟ್ಟು ದಂಡ ವಿಧಿಸಬಹುದು. ದಂಡದ ಮೊತ್ತದ ಜಪ್ತಿಗೆಂದು ಗಾಲಿ ರೆಡ್ಡಿಯ ಆಸ್ತಿಯನ್ನೂ ಜಪ್ತಿ ಮಾಡಿಕೊಳ್ಳಬಹುದು. ಜೊತೆಗೆ ಜೈಲು ಶಿಕ್ಷೆಯನ್ನೂ ವಿಧಿಸಬಹುದು. ಕದ್ದದ್ದು 86.42 ಕೋಟಿ ಮೊತ್ತದ ಸರ್ಕಾರಿ ರೊಕ್ಕ- ಆದರೆ ಕೇಂದ್ರ ಸರ್ಕಾರ ಮಾತ್ರ ಆದ್ಯಾವ ಉದ್ದೇಶಕ್ಕೆ ಇನ್ನೂ ಮೀನಾಮೇಷ ಎಣಿಸುತ್ತಿದೆಯೊ?

ಒಬ್ಬ ಜನಪ್ರತಿನಿಧಿಯಾಗಿ ಈ ರೀತಿ ತೆರಿಗೆ ಕದ್ದು ಸಿಕ್ಕಿಬಿದ್ದ ಗಾಲಿ ಜನಾರ್ದನ ರೆಡ್ಡಿಯ ಎಮ್ಮೆಲ್ಲೇಗಿರಿಯನ್ನೂ ಈ ಒಂದೇ ಕಾರಣಕ್ಕೆ ನಿಕಾಲಿ ಮಾಡುವ ಅಧಿಕಾರ ಕೂಡ ಕೇಂದ್ರ ಸರ್ಕಾರಕ್ಕಿದೆ. ಇನ್ನೂ ಮನಸ್ಸು ಮಾಡಿದರೆ ಈ ಪಾಟಿ ಅದಿರನ್ನು ದೋಚಿದ್ದಾದರೂ ಎಲ್ಲಿಂದ ಎಂಬ ತನಿಖೆ ನಡೆಸಿಬಿಟ್ಟರೆ ಅದೇ ಮತ್ತೊಂದು ಅದಿರು ದರೋಡೆಯ ಕತೆಯಾಗುತ್ತದೆ. ತಾನು ಕರ್ನಾಟಕದಲ್ಲಿ ಯಾವುದೇ ಗಣಿಗಾರಿಕೆ ನಡೆಸುತ್ತಿಲ್ಲ ಎಂದು ಬಂಡಲ್ ಬಿಡುವ ಗಣಿ ರೆಡ್ಡಿ ಈ ಪಾಟಿ ಅದಿರನ್ನು ಎಲ್ಲಿಂದ ತಂದ? ಈ ಬಗ್ಗೆ ತನಿಖೆಯಾಗಲೇ ಬೇಕಲ್ಲವೆ?

• ರಾ.ಸೋಮನಾಥ್

ಜಸ್ಟೀಸ್ ಬಾಲಕೃಷ್ಣನ್ ಅಳಿಯನ ಜೊತೆ ಗಣಿರೆಡ್ಡಿ ಡೀಲ್?



ಬಾಲಕೃಷ್ಣನ್


ಸದ್ಯ ಭ್ರಷ್ಟಾಚಾರದ ಆರೋಪಕ್ಕೆ ಸಿಕ್ಕಿಬಿದ್ದ ಮಾಜಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ 2010ರ ಜನವರಿಯಲ್ಲಿ ತಾವು ನಿವೃತ್ತಿಯಾಗುವ ಹಿಂದಿನ ದಿನವೇ ಓಬಳಾಪುರಂ ಮೈನಿಂಗ್ ಕಂಪೆನಿಯ ಅಕ್ರಮಗಳ ಕುರಿತು ತೀರ್ಪಿತ್ತಿದ್ದು ಸರಿಯಷ್ಟೆ. ಸದರಿ ತೀರ್ಪಿನಲ್ಲಿ ಅಇಅ ಎಂದರೆ ಗಣಿ ಅಕ್ರಮಗಳ ವಿರುದ್ಧದ 'ಕೇಂದ್ರ ಉನ್ನತಾಧಿಕಾರ ಸಮಿತಿ'ಗೆ ಸುಪ್ರೀಂ ಕೋರ್ಟು ಎಲ್ಲಾ ಅಧಿಕಾರ ಕೊಟ್ಟು ಗಣಿ ಅಕ್ರಮಗಳ ವಿರುದ್ಧದ ಆದರ ಕಾರ್‍ಯಾಚರಣೆಗೆ ಚಾಲನೆ ನೀಡುತ್ತದೆ ಎಂದೇ ಎಲ್ಲರೂ ಲೆಕ್ಕ ಹಾಕಿದ್ದರು. ಆದರೆ ಕೆ.ಜಿ.ಬಾಲಕೃಷ್ಣನ್ ತಾವೂ ನಿವೃತ್ತಿಯಾಗುವ ಕೊನೇ ದಿನ ನೀಡಿದ ತೀರ್ಪಿನಿಂದಾಗಿ ಗಣಿರೆಡ್ಡಿಗಳಿಗೇ ಲಾಭವಾಯಿತು. ತೀರ್ಪು CECಯ ಕೈಕಟ್ಟಿ ಹಾಕಿತ್ತು, ರೆಡ್ಡಿಗಳ ಗಣಿ ಲೂಟಿಗೆ ಇದರಿಂದ ಮತ್ತಷ್ಟು ಅವಕಾಶ ಸಿಕ್ಕಂತಾಯ್ತು.

ಅವತ್ತು ನ್ಯಾಯಮೂರ್ತಿ ಬಾಲಕೃಷ್ಣನ್ ಅಳಿಯ ಶ್ರೀನಿಜನ್‌ನನ್ನು ಕಂಡು ಡೀಲು ಕುದುರಿಸಲೆಂದು ಕೇರಳಕ್ಕೆ ಜನಾರ್ದನ ರೆಡ್ಡಿ ಹೋಗಿದ್ದು ಇಡೀ ಗಣಿ ವಲಯಕ್ಕೆ ಗೊತ್ತಾಗಿತ್ತು. ಇವತ್ತು ಮಾಜಿ ನ್ಯಾಯಮೂರ್ತಿ ಬಾಲಕೃಷ್ಣನ್‌ರ ಅಳಿಯಂದಿರಾದ ಶ್ರೀನಿಜನ್, ಬೆನ್ನಿ ಮತ್ತು ಸಹೋದರ ಭಾಸ್ಕರನ್ ವಿರುದ್ಧ ಅಕ್ರಮ ಆಸ್ತಿ ಗಳಿಕೆಯ ಆರೋಪ ಕೇಳಿಬರುತ್ತಿದೆಯೆಂದರೆ, ಅದಕ್ಕೆ ಬಳ್ಳಾರಿಯ ಮೈನಿಂಗ್ ಮಾಫಿಯಾದ ಕಾಣಿಕೆಯೂ ಸಾಕಷ್ಟಿರಲೇಬೇಕು.



ಕರ್ನಾಟಕದ ಗಡಿಯನ್ನೇ ಬದಲಾಯಿಸಿ ಸಹಸ್ರಾರು ಕೋಟಿ ಮೊತ್ತದ ಅದಿರು ದೋಚಿದ್ದಕ್ಕೆ ಇವತ್ತಿಗೂ ಗಣಿ ರೆಡ್ಡಿಗಳಿಗೆ ಶಿಕ್ಷೆಯಾಗುತ್ತಿಲ್ಲ ಎಂದರೆ ಕನಿಷ್ಠ ನ್ಯಾಯಮೂರ್ತಿ ಬಾಲಕೃಷ್ಣನ್ ಅಳಿಯಂದಿರ ಆಸ್ತಿಯಾದರೂ ವೃದ್ಧಿಸಲೇಬೇಕಲ್ಲವೆ?

ಗಣಿ ಲೂಟಿಯ ಪಾಪಕೂಪದಲ್ಲಿ ಬಾಲಕೃಷ್ಣನ್ ಅಳಿಯಂದಿರ ಪಾಲೆಷ್ಟು? ●



ಫಾರಿನ್ ಪ್ರಾಜೆಕ್ಟು ಏನಾಯ್ತು ಭಟ್ರೆ?

"ಉನ್ನತ ವ್ಯಾಸಂಗಕ್ಕಾಗಿ ಅಬ್ರಾಡ್‌ಗೆ ಹೋಗ ಬೇಕಾಗಿರೋದರಿಂದ ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ"- ಹೀಗೊಂದು ಸಮಜಾಯಿಷಿ ಕೊಟ್ಟು ಎದ್ದುಹೋದವರು ವಿಶ್ವೇಶ್ವರ ಭಟ್. ಅದಾಗಿ ಈಗ ತಿಂಗಳು ಕಳೆದಿದೆ. ಒಂದಷ್ಟು ಮಂದಿ ಭಟ್ಟರು ವಿದೇಶಕ್ಕೆ ಹೋಗಿ ಪಟ್ಟು ಹಿಡಿದು ಓದುತ್ತಿದ್ದಾರೆ ಅಂದುಕೊಂಡಿದ್ದರೂ ಇರಬಹುದು.

ಆದರೆ ವಿಶ್ವೇಶ್ವರ ಭಟ್ಟರು ಕರ್ನಾಟಕ ಬಿಟ್ಟ ಸುದ್ದಿ ಈವರೆಗೂ ಬಂದಿಲ್ಲ. ಹಾಗಾದರೆ ಅವರೇನು ಮಾಡ್ತಿದ್ದಾರೆ ಅಂತೊಂದು ಪ್ರಶ್ನೆ ಏಳುವುದು ಸಹಜ. ಸದ್ಯ ಭಟ್ಟರ ಮುಂದೆ ಮಾಡಬಹುದಾದ ಯಾವ ಕೆಲಸಗಳೂ ಇಲ್ಲ. ಪ್ರತಾಪ ಸಿಂಹನೆಂಬ ಸೈಟು ಕಳ್ಳನೂ ಸೇರಿದಂತೆ ಒಂದು ಹಿಂಡು ಭಟ್ಟರೊಂದಿಗೇ ದಬ್ಬಿಸಿಕೊಂಡಿತ್ತಲ್ಲಾ? ಅವುಗಳದ್ದೂ ಇದೇ ಸ್ಥಿತಿ. ಆದರೆ ವಿಶ್ವೇಶ್ವರ ಭಟ್ಟರದ್ದು ಸುಮ್ಮನೆ ಕೂಡುವ ಜಾಯಮಾನವಲ್ಲ. ಆದುದರಿಂದಲೇ ವೆಬ್‌ಸೈಟೊಂದನ್ನ ತೆರೆದುಕೊಂಡು ಕಂಪ್ಯೂಟರಿನ ಮುಂದೆ ದುರಂತ ಮುದ್ರೆ ಹೊತ್ತು ಕೂತಿರುವ ವದಂತಿಗಳಿವೆ.

ಅಲ್ಲಿಗೆ ವಿಶ್ವೇಶ್ವರ ಭಟ್ ಹುಬಿಬಿಟ್ಟ ವಿದೇಶ, ಉನ್ನತ ವ್ಯಾಸಂಗಗಳೆಲ್ಲಾ ಓದುಗರನ್ನು ಯಾಮಾರಿಸುವ ಸ್ಕೀಮೆಂಬುದು ಸ್ಪಷ್ಟವಾಗಿದೆ. ಅವರ ಈಗಿನ ಸ್ಥಿತಿಯೇ ಟೈಮ್ಸ್ ಗ್ರೂಪ್‌ನಿಂದ ಹೀನಾಯವಾಗಿ ಹೊರ ದಬ್ಬಿಸಿಕೊಂಡಿದ್ದನ್ನು ಸಾರಿ ಹೇಳುತ್ತಿದೆ. ಆದರೆ ಹ್ಯಾಗಾದರೂ ಮಾಡಿ ಮತ್ತೆ ಮುಖ್ಯವಾಹಿನಿಗೆ ಬರುವ ಕಸರತ್ತುಗಳು ಭಟ್ಟರ ಟೀಮಿನಿಂದ ಅವಿರತವಾಗಿ ನಡೆಯುತ್ತಿದೆ.

ಅದರಲ್ಲಿ ಹೊಸಾ ದಿನ ಪತ್ರಿಕೆ ಆರಂಭಿಸುವ ಪ್ರಾಜೆಕ್ಟ್ ಪ್ರಮುಖವಾದುದು. ಭಟ್ಟರು ತಮ್ಮ ಭಾವೀ ಕೂಸಿಗೆ ತಮ್ಮದೇ ಹೆಸರನ್ನು ಸಂಕ್ಷಿಪ್ತಗೊಳಿಸಿ ಪೋಣಿಸಿ ಅದರೆದುರು ಕರ್ನಾಟಕವನ್ನ ಕುಕ್ಕಿ ಖುಷಿ ಪಡಹತ್ತಿದ್ದಾರೆ. ಅಂದಹಾಗೆ ಪತ್ರಿಕೆಯ ಹೆಸರು 'ವಿಶ್ವ ಕರ್ನಾಟಕ'ವಂತೆ! ಇನ್ನುಳಿದದ್ದು ದುಡ್ಡಿನ ಕಥೆ. ವಿಜಯ ಕರ್ನಾಟಕವನ್ನು ನಂಬರ್ ಒನ್ ಪಟ್ಟಕ್ಕೇರಿಸಿದ್ದ ಭಟ್ಟರು ಜಾತ್ಯತೀತವಾಗಿ ಮಠಗಳನ್ನು, ಸ್ವಾಮೀಜಿಗಳನ್ನು ಓಲೈಸಿಕೊಂಡಿದ್ದು ಕಣ್ಣ ಮುಂದಿನ ಸತ್ಯ. ಇದೀಗ ಅದೆಲ್ಲದರ ಬಾಬತ್ತಿನಿಂದಲೇ ಪತ್ರಿಕೆ ಹೊರಡಿಸುವ ಸನ್ನಾಹದಲ್ಲಿದ್ದಾರೆ. ಇದಕ್ಕೆ ಲಿಂಗಾಯತ ಹಾಗೂ ಬ್ರಾಹ್ಮಣ ಸ್ವಾಮಿಗಳು ಮನಸಾರೆ ಸಹಕರಿಸಲು ಒಪ್ಪಿಕೊಂಡಿರುವ ಸುದ್ದಿಗಳೂ ಇವೆ.

ಇದೆಲ್ಲ ಏನೇ ಇದ್ದರೂ ಭಟ್ಟರ ಪಟಾಲಂ ತೀರಾ ಕಂಗಾಲಾಗಿರುವುದು ನಿಜ. ಟೈಮ್ಸ್ ಗ್ರೂಪ್ ಹೊರದಬ್ಬಿದಾಗ ಇವರೆಲ್ಲರೊಳಗೂ 'ಏನ್ ಮಾಡ್ತೀವಿ ನೋಡ್ತಿರಿ' ಅಂತೊಂದು ಹುಮ್ಮಸ್ಸಿದ್ದದ್ದು ಹೌದು. ಅದರ ಭರದಲ್ಲೇ ಕೆಲವರು 'ನಾವು ಬಸ್ಸಿಳಿದದ್ದೇ ವಿಮಾನ ಹತ್ತಕ್ಕೆ' ಅಂತ ಹೂಂಕರಿಸಿದ್ದರೇ, ಪ್ರತಾಪ ಸಿಂಹನೆಂಬ ಸಿಂಗಳೀಕವಂತೂ 'ದೊಡ್ಡ ಮಟ್ಟದಲ್ಲಿ ವಾಪಾಸಾಗ್ತೀವಿ' ಅಂತೆಲ್ಲಾ ನರಿಯಂತೆ ಊಳಿಟ್ಟಿತ್ತು. ಆದರೀಗ ಈ ಟೀಮಿನ ಮುಂದೆ ಯಾವ 'ದೊಡ್ಡ' ಪ್ರಾಜೆಕ್ಟುಗಳೂ ಇದ್ದಂತಿಲ್ಲ. ಇರುವ ಒಂದಷ್ಟು ಐಟಮ್ಮುಗಳೂ ವರಖತ್ತಾಗುವ ಲಕ್ಷಣಗಳಿಲ್ಲ. ಇನ್ನು ವಿಮಾನ ಹತ್ತುವ ಉತ್ಸಾಹದಲ್ಲಿದ್ದವರ ಮುಖ ಯಾವುದೋ ಸ್ಟೇಷನ್ನಿನಲ್ಲಿ ಎರೋಪ್ಲೇನ್ ಹತ್ತಿ ಪರ್ಕತ್ತಿಸಿಕೊಂಡು ಬಂದವರಂತೆ ಬಾಡಿ ಬೆಂಡಾಗಿದೆ!

ಒಟ್ಟಾರೆಯಾಗಿ ಹೇಳಿದ ಸುಳ್ಳು, ಮಾಡಿದ ಪಾಪ ಕಾರ್ಯಗಳೆಲ್ಲ ಒಗ್ಗಟ್ಟಾಗಿ ಅಟಕಾಯಿಸಿಕೊಂಡಂತಿದೆ. ಅದನ್ನೆಲ್ಲ ಸಹಿಸಿಕೊಳ್ಳೋ ಶಕ್ತಿಯನ್ನು ಭಗವಂತ ವಿಶ್ವೇಶ್ವರ ಭಟ್ಟರಿಗೆ ಮತ್ತವರ ಪಟಾಲಂಗೆ ಕರುಣಿಸಲಿ!

ಮಾದಿಗ ದಂಡೋರದ ದಂಡಪಿಂಡ ರಾಮಭಕ್ತ ಶಂಕ್ರಪ್ಪನ ಕೋಮು ಪಿತ್ಥ!

ಸಮಾಜವಾದದ ಸೋಗು ಕೊಡುತ್ತಲೇ ಆಂತರಿಕವಾಗಿ ಕೋಮುವ್ಯಾಧಿ ಅಂಟಿಸಿಕೊಂಡ ಮಂದಿ ಬಹಳಷ್ಟಿದ್ದಾರೆ. ಇಂಥವರ ದೆಸೆಯಿಂದಲೇ ಅದೆಷ್ಟೋ ಸಮಾಜಮುಖಿ ಹೋರಾಟಗಳು ಹಳ್ಳ ಹಿಡಿದ ಕಥೆಯೂ ಬಹಳಷ್ಟಿದೆ. ಸದ್ಯ ಶತಮಾನಗಳ ದೌರ್ಜನ್ಯವನ್ನು ಹತ್ತಿಕ್ಕುವ ಉದ್ದೇಶದಿಂದ ಜೀವ ಪಡೆದ ಮಾದಿಗ ದಂಡೋರ ಸಂಘಟನೆಯೂ ಅಂತಹುದೇ ಒಂದು ಡೋಲಾಯಮಾನ ಸ್ಥಿತಿ ತಲುಪಿದೆ. ಮಾದಿಗನ ದೇಹ, ಆರೆಸ್ಸೆಸ್ ಮಿದುಳು ಹಾಗೂ ಗುಳ್ಳೆನರಿಯಂಥ ಮನಸ್ಸು ಹೊಂದಿರುವ ಶಂಕ್ರಪ್ಪನೆಂಬಾತ ಅದಕ್ಕೆ ಮೂಲಕಾರಣ.

ಮಾದಿಗ ದಂಡೋರದ ರಾಜ್ಯ ಮುಖಂಡನಾಗಿದ್ದ ಶಂಕ್ರಪ್ಪನನ್ನ ಈ ಸಂಘಟನೆಯ ಮುಖ್ಯ ನಾಯಕ ಮಂದಕೃಷ್ಣ ಮಾದಿಗ ಹೊರ ದಬ್ಬಿದ್ದಾರೆ. ಅದು ಸಮಾಧಾನದ ವಿಷಯವಾದರೂ ಇದೀಗ ಮಾದಿಗ ನಾಯಕನೆಂಬ ಪಟ್ಟ ಬಿಟ್ಟು ಕೊಡಲಾರದ ಶಂಕ್ರಪ್ಪ ತನ್ನದೇ ಸಂಘಟನೆ ಮಾಡಿಕೊಂಡಿದ್ದಾನೆ. ಜೊತೆಗೆ ಮಾದಿಗ ಸಮುದಾಯದ ಭೂಮಿಕೆಯಲ್ಲಿ ನಿಂತೇ ಹಲವಾರು ಯಡವಟ್ಟುಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಮೈಸೂರಿನಲ್ಲಿ ನಡೆದ ಬಿಜೆಪಿ ಸಮಾರಂಭವೊಂದರಲ್ಲಿ ಪಾಲ್ಗೊಂಡಿದ್ದ ಈತ 'ಮೊದಲು ರಾಮಮಂದಿರ ನಿರ್ಮಾಣವಾಗಲಿ ಹೊರಗಿನ ಸಮಸ್ಯೆಗಳನ್ನು ಬೇಗ ಬಗೆಹರಿಸಿ, ಒಳಗಿನವುಗಳನ್ನು ಆಮೇಲೆ ನೋಡಿಕೊಳ್ಳೋಣ' ಎಂಬರ್ಥದಲ್ಲಿ ಒದರಾಡಿದ್ದಾನೆ!

ದುರಂತವೆಂದರೆ ತಾನು ನೀಡಿದ ದರಿದ್ರ ಹೇಳಿಕೆ ಇಡೀ ಮಾದಿಗ ಸಮುದಾಯದ ಧ್ವನಿ ಎಂಬಂತೆ ಬಿಂಬಿಸಿಕೊಂಡಿದ್ದಾನೆ. ದಮನಿತ ವರ್ಗವನ್ನು ತಣ್ಣಗೆ ಕೊಲ್ಲುವ ಅಜೆಂಡಾ ಹೊಂದಿರುವ ಅವಿವೇಕಿ ಬಿಜೆಪಿಗಳೂ ಸಹ ಇದರಿಂದ ಥ್ರಿಲ್ ಆಗಿವೆಯಲ್ಲದೆ; ಶಂಕ್ರಪ್ಪನೆಂಬ ದಂಡಪಿಂಡವನ್ನ ಎದುರಿಗಿಟ್ಟುಕೊಂಡು ತಾವು ದಲಿತ ಸ್ನೇಹಿಗಳಂತ ತೋರಿಸಿಕೊಳ್ಳಲು ಹೆಣಗಾಡಿವೆ.

ಮಾದಿಗ ದಂಡೋರವೆಂಬ ಸಂಘಟನೆ ಆ ಸಮುದಾಯವನ್ನು ಜಾತಿವಾದ ಹಾಗೂ ಕೋಮುವಾದದ ಬೆಂಕಿಯಿಂದ ಪಾರು ಮಾಡಲೆಂದೇ ಹುಟ್ಟಿರುವಂತಹುದು. ಇಂಥಾ ಸಂಘಟನೆಯ ಮುಖಂಡನಾಗಿದ್ದಾತ ಬಿಜೆಪಿಯೊಂದಿಗೆ ಗುರುತಿಸಿಕೊಳುತ್ತಾನೆಂದರೆ, ಅದರ ಪ್ರಮುಖ ಅಜೆಂಡಾ ಆಗಿರುವ ರಾಮಮಂದಿರ ನಿರ್ಮಾಣದ ಪರ ವಕಾಲತ್ತು ವಹಿಸುತ್ತಾನೆಂದರೆ, ಖಂಡಿತವಾಗಿಯೂ ಆತ ವಂಚಕನೆಂದೇ ಅರ್ಥ.

ಈ ಶಂಕ್ರಪ್ಪನೂ ಅದೇ ಜಾಯಮಾನದವನು. ಯಡ್ಡಿ ಸರ್ಕಾರದ ಸಮಾಜ ಕಲ್ಯಾಣ ಸಚಿವ ನಾರಾಯಣಸ್ವಾಮಿಯ ಭಾಮೈದನಾದ ಈತ ಪ್ರಸ್ತುತ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಉದ್ಯೋಗಿ. ಆಂಧ್ರಪ್ರದೇಶದಲ್ಲಿ ಕಾವು ಪಡೆದಿದ್ದ ಮಾದಿಗ ದಂಡೋರ ಸಂಘಟನೆ 1996ರ ಹೊತ್ತಿಗೆ ಕರ್ನಾಟಕಕ್ಕೂ ಅಡಿಯಿರಿಸಿತ್ತು. ಇಂತಹುದೊಂದು ಸಂಘಟನಾತ್ಮಕ ಶಕ್ತಿಯ ಅವಶ್ಯಕತೆ ಕರ್ನಾಟಕದ ಮಾದಿಗ ಸಮುದಾಯಕ್ಕೂ ಇತ್ತು. ಆದರೆ ವಂಚಕ ಶಂಕ್ರಪ್ಪ ಅದು ಹೇಗೋ ಸಂಘದ ಪ್ರಧಾನ ಕಾರ್ಯದರ್ಶಿಯಾದ, ಬಳಿಕ ರಾಜ್ಯ ಮುಖಂಡನೂ ಆದ.

ಇಂಥಾ ಶಂಕ್ರಪ್ಪ ದಮನಿತ ಸಮುದಾಯದಿಂದ ಬಂದವನಾದರೂ ಪಕ್ಕಾ ಆರೆಸ್ಸೆಸ್ ಮನಸ್ಥಿತಿಯವನು. ಲಾಗಾಯ್ತಿನಿಂದಲೂ ಕಾಲಕಾಲಕ್ಕೆ ಆರೆಸ್ಸೆಸ್ ಬೈಠಕ್ಕುಗಳಲ್ಲಿ ಲತ್ತೆ ಹೊಡೆಯದಿದ್ದರೆ ಅನ್ನಾಹಾರಗಳ ಮೇಲೂ ಆಸಕ್ತಿ ಕಳೆದುಕೊಳ್ಳುತ್ತಿದ್ದವನು ಶಂಕ್ರಪ್ಪ. ಇಂಥವನು ತನ್ನ ಸ್ವಹಿತಾಸಕ್ತಿಗಳಿಗೋಸ್ಕರ ಸಂಘಟನೆಯನ್ನು ಒಂದಷ್ಟು ಕಡೆ ಬಲಪಡಿಸಿದನೆ ಹೊರತು ಮಾದಿಗ ಸಮುದಾಯಕ್ಕೆ ಕೀಲುಬುಗಾಸಿನ ಪ್ರಯೋಜನವೂ ಆಗಲಿಲ್ಲ.

ಶಂಕ್ರಪ್ಪನ ಅಡ್ನಾಡಿತನಗಳಿಂದಾಗಿ ಘನ ಉದ್ದೇಶಗಳೊಂದಿಗೆ ಸಂಘಟನೆ ಸೇರಿದ್ದ ಅನೇಕರು ಭ್ರಮನಿರಸನಗೊಂಡರು. ಅಂತಹ ಅಸಹನೆಗಳ ಕಾರಣದಿಂದಾಗಿಯೆ ಮಾದಿಗ ಮೀಸಲಾತಿ ಹೋರಾಟ ಸಮಿತಿ ಎಂಬ ನಿಜವಾದ ಸಂಘಟನೆ ಅಸ್ತಿತ್ವಕ್ಕೆ ಬಂತು. ನೈಜ ಕಳಕಳಿಯಿದ್ದವರೆಲ್ಲಾ ಅದಕ್ಕೆ ಸೇರಿಕೊಂಡರೆ ಶಂಕ್ರಪ್ಪನ ಹಿಂದಿದ್ದದ್ದು ಭಟ್ಟಂಗಿಗಳ ದಂಡು ಮಾತ್ರ. ಇನ್ನು ತೀರಾ ಹಳ್ಳಿಗಾಡುಗಳಲ್ಲಿ ಶಂಕ್ರಪ್ಪನ ವಂಚನೆಯ ಪರಿಚಯವಿರದ ಒಂದಷ್ಟು ಮಂದಿ ಅಮಾಯಕರಿದ್ದರೂ ಇರಬಹುದು.

ಈತ ಯಾವತ್ತೂ ಕೂಡಾ ಮಾದಿಗರ ಸಂಕಟಗಳ ಬಗ್ಗೆ ಆಳವಾಗಿ ಚಿಂತಿಸಿದವನಲ್ಲ. ಅಷ್ಟಕ್ಕೂ ಒಂದು ಸಂಘಟನೆ ಕಟ್ಟುವ, ಪಟ್ಟು ಹಿಡಿದು ಮುನ್ನಡೆಯುವ ಕೆಚ್ಚು ಈತನಿಗಿಲ್ಲ. ಅಷ್ಟಕ್ಕೂ ನಿಯತ್ತಿನ ಪರಿಚಯವೂ ಈತನಿಗಿರುವಂತಿಲ್ಲ. ಯಾಕೆಂದರೀತ ಸಂಘಟನೆ ಆರಂಭವಾದಾಗಿನಿಂದಲೂ ವೇದಿಕೆಯನ್ನೇರಿ ಶೋಷಣೆ ಅದೂ ಇದೂ ಅಂತೆಲ್ಲ ಒದರಾಡಿ ನಂತರ ಅದಕ್ಕೆ ಕಾರಣಾದವರ ಬೈಠಕ್ಕುಗಳಲ್ಲಿ ಜಾಂಡಾ ಹೂಡುತ್ತಿದ್ದವನು. ಸಂಘಟನೆಯ ಭೂಮಿಕೆಯಿಂದ ರಾಜಕೀಯ ನಿರ್ಧಾರ ತೆಗೆದುಕೊಳ್ಳುವ ಸಂದರ್ಭಗಳು ಬಂದಾಗ ಬಿಜೆಪಿಯತ್ತಲೇ ಒಲವು ತೋರಿಸುತ್ತಾ ಬಂದ ಶಂಕ್ರಪ್ಪ ಇದೀಗ ಪೂರ್ತಿಯಾಗಿ ಅದಕ್ಕೆ ಬಲಿ ಬಿದ್ದಿದ್ದಾನಷ್ಟೆ.

ಇದು ಬರೀ ಶಂಕ್ರಪ್ಪನ ಸುತ್ತ ಸುತ್ತುವ ವಿಚಾರವಾಗಿದ್ದರೆ ಅದು ಅವನ ಕರ್ಮ ಅಂತ ಸುಮ್ಮನಾಗಬಹುದಿತ್ತೇನೋ. ಆದರಿದು ಒಬ್ಬನ ತೆವಲಿಗೆ ಇಡೀ ಸಮುದಾಯ ಬಲಿಯಾಗುವ, ಒಂದಿಡೀ ಹೋರಾಟದ ಆಶಯಗಳೆಡೆಗೇ ಗುಮಾನಿ ಹುಟ್ಟುವಂಥ ಬೆಳವಣಿಗೆ. ಶಂಕ್ರಪ್ಪ ಬಿಜೆಪಿ ಆಮಿಷಗಳಿಗೆ ಬಲಿಬಿದ್ದೇ ಈ ರೀತಿ ಬೊಗಳಿದ್ದಾನೆ. ಆದರೆ ಬಿಜೆಪಿಯ ಘಟಿಂಗರು ಇಡೀ ಮಾದಿಗ ಸಮುದಾಯವೇ ತನ್ನೊಂದಿಗಿದೆ ಎಂಬಂತೆ ಪೋಸು ಕೊಟ್ಟಿದ್ದಾರೆ. ಆ ಸಮುದಾಯದ ಬೆರಳೆಣಿಕೆಯಷ್ಟು ಮಂದಿಯೂ ಶಂಕ್ರಪ್ಪನ ಜೊತೆಗಿಲ್ಲ ಎಂಬುದು ವಾಸ್ತವ. ಅದು ಆ ಸಮುದಾಯದ ವಿವೇಕವೂ ಹೌದು.

ಇಂಥಾ ನಿರ್ಲಜ್ಜ ಆಸಾಮಿಯಿಂದಾಗಿ ಮಾದಿಗ ದಂಡೋರವೇ ಹೆಸರು ಕೆಡಿಸಿಕೊಳ್ಳುತ್ತಿದೆ ಎಂಬ ವಿಚಾರ ಅದರ ಸಂಸ್ಥಾಪಕರಾದ ಆಂಧ್ರದ ಮಂದಕೃಷ್ಣ ಮಾದಿಗರಿಗೆ ತಡವಾಗಿ ಅರ್ಥವಾದಂತಿದೆ. ಇತ್ತೀಚೆಗೆ ಆಂಧ್ರದಿಂದ ಕರ್ನಾಟಕಕ್ಕೆ ಬಂದಿದ್ದ ಅವರು ಶಂಕ್ರಪ್ಪನನ್ನ ಹೊರದಬ್ಬಿ ಪಾವಗಡ ಶ್ರೀರಾಂ ಎಂಬಾತನನ್ನ ಆ ಸ್ಥಾನದಲ್ಲಿ ಕೂರಿಸಿದ್ದಾರೆ.

ಇದೀಗ ಬೇನಾಮಿ ಸಂಘಟನೆಯೊಂದನ್ನು ಕಟ್ಟಿಕೊಂಡು ಬಿಜೆಪಿ ಸೇವೆಯಲ್ಲಿ ಬ್ಯುಸಿಯಾಗಿರುವ ಶಂಕ್ರಪ್ಪ ನಾನೇ ಕರ್ನಾಟಕದ ಮಾದಿಗರ ನಾಯಕ ಅಂತೆಲ್ಲ ಪೋಜು ಕೊಡಲೆತ್ನಿಸುತ್ತಿದ್ದಾನೆ. ಈ ಹಿಂದೆ ಈತ ಮಾದಿಗ ದಂಡೋರವನ್ನು ಕಟ್ಟಿದ್ದು ತಾನೊಬ್ಬನೇ ಎಂಬಂತೆ ಮೆರೆದಾಡಿದ್ದ. ಆದರೆ ಸಂಘಟನೆಗೆ ಶ್ರಮಿಸಿದವರು ಅನೇಕರಿದ್ದಾರೆ. ಅವರೆಲ್ಲ ಈಗ ಮೂಲೆ ಗುಂಪಾಗಿದ್ದಾರೆ.

ಕೊನೆಯದಾಗಿ, ಮಾದಿಗ ಸಮುದಾಯಕ್ಕೆ ಶಂಕ್ರಪ್ಪ ಯಾವ ಸೀಮೆಯ ದೊಣ್ಣೆ ನಾಯಕನೂ ಅಲ್ಲ. ಈತ ಯಾವುದೇ ವೇದಿಕೆಯಲ್ಲಿ ನಿಂತು ಏನೇ ಒದರಾಡಿದರೂ ಅದು ಮಾದಿಗರ ಧ್ವನಿ ಅಂತ ಯಾರೂ ಭಾವಿಸಬೇಕಿಲ್ಲ. ●

'ಇದು ಮಾದಿಗ ಸಮುದಾಯದ ಅನಿಸಿಕೆಯಲ್ಲ'

-ಎಲ್. ಹನುಮಂತಯ್ಯ



ನಿಖರವಾಗಿ ಹೇಳಬೇಕೆಂದರೆ, ಮಾದಿಗ ಸಮುದಾಯ ಬಿಜೆಪಿ ಪಕ್ಷದ ಜೊತೆಗಿಲ್ಲ. ಕೋಮುವಾದಿ ಚಿಂತನೆಗಳ ಪಕ್ಷಕ್ಕೆ ಆ ಸಮುದಾಯದ ಬೆಂಬಲವಿಲ್ಲ. ರಾಮಮಂದಿರ ನಿರ್ಮಾಣವೆಂಬುದು ಮಾದಿಗ ಸಮಾಜದ ಆದ್ಯತೆಯ ವಿಚಾರವಲ್ಲ. ಈ ಜನಾಂಗ ಯಾವ ಕಾರಣಕ್ಕೂ ಮಂದಿರ ನಿರ್ಮಾಣ ಮಾಡುವವರತ್ತ ಒಲವು ಹೊಂದುವುದಿಲ್ಲ. ಇದು ಹಿಂದಿನಿಂದಲೂ ಅಸ್ಪೃಶ್ಯತೆ, ಜಾತಿ ಪದ್ಧತಿಯ ಬೆಂಕಿಯಲ್ಲಿ ಬೇಯುತ್ತಾ ಬಂದ ಸಮುದಾಯ. ಆದುದರಿಂದಲೇ ಆ ಅನಿಷ್ಟಗಳ ವಿರುದ್ಧದ ಹೋರಾಟ ಮಾದಿಗರಲ್ಲಿ ರಕ್ತಗತವಾಗಿದೆ. ರಾಮಮಂದಿರದ ಕುರಿತಾದ ಹೇಳಿಕೆ ಮಾದಿಗ ಸಮುದಾಯದ ಅನಿಸಿಕೆಯಲ್ಲ, ಅದು ವೈಯಕ್ತಿಕ ಮಟ್ಟದ ಹಾಗೂ ಸ್ವಹಿತ ಸಾಧನೆಯ ಹೇಳಿಕೆ.

ಸಿಪಿಐ ಬಿರಾದಾರ್ ನಂಬಿದ ಹುಡುಗಿಯೀಗ ಹುಚ್ಚಿ!

ಧಾರವಾಡ ವಿದ್ಯಾಗಿರಿ ಠಾಣೆಯ ಸಿಪಿಐ ವಿಜಯ್ ಬಿರಾದಾರ್ ಪೂರ್ತಿ ಬೆತ್ತಲಾಗಿದ್ದಾನೆ. ಕಳೆದ ಸಂಚಿಕೆಯಲ್ಲಿ 'ಪತ್ರಿಕೆ' ಪ್ರಕಟಿಸಿದ ವರದಿ ಸಾಹೇಬರ ಪೌರುಷವನ್ನೆಲ್ಲ ಜನರಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿದೆ. ಇದನ್ನು ತಡೆಯಲು ಬಿರಾದಾರ್ ವಿಪರೀತ ಬಂಡಾಟ ನಡೆಸಿದ್ದ. ಪೇದೆಗಳನ್ನು ಅಂಗಡಿಗಳಿಗೆ ಅಟ್ಟಿ ಹುಬ್ಬಳ್ಳಿ-ಧಾರವಾಡ ನಗರಗಳ ಅಷ್ಟೂ ಪತ್ರಿಕೆ ಕದಿಯುವ ಸರ್ಕಸ್ಸು ನಡೆಸಿದ. ಆದರೂ ಜನ ಓದುವುದನ್ನು ತಡೆಯುವಲ್ಲಿ ವಿಫಲನಾದ.

ಇದೀಗ ಬಿರಾದಾರನ ಕಚ್ಚೆಹುರುಕು ವೃತ್ತಾಂತದ ಪದರುಗಳು ಬೆಚ್ಚಿಬೀಳುವಂತೆ ಬಿಚ್ಚಿಕೊಳ್ಳುತ್ತಿವೆ. ಅವುಗಳೆಲ್ಲ ಬಿರಾದಾರ್ ಖಾಕಿ ತೊಟ್ಟ ಬಳಿಕ ಹೆಂಗಳೆಯರ ಬೇಟೆಗಿಳಿದಿಲ್ಲ, ಬದಲಾಗಿ ಹೆಣ್ಣುಬಾಕತನ ಆತನ ಚಾಳಿಯೆಂಬುದನ್ನು ಸಾರಿ ಹೇಳುತ್ತಿವೆ. ಅಂಥ ಕಂತೆ ಕಂತೆ ಭಾನಗಡಿಗಳಲ್ಲಿ ಒಂದು ಕಥೆ ಮಾತ್ರ ತೀರಾ ಕರುಣಾಜನಕವಾಗಿದೆ. ಅದು ಬಿರಾದಾರ ಬರೀ ಹೆಣ್ಣುಬಾಕನಲ್ಲ, ಕಟುಕನೂ ಹೌದೆಂಬುದಕ್ಕೆ ಪುರಾವೆಯಂತಿದೆ. ವಿಚಾರವೇನೆಂದರೆ, ಈತನಿಂದ ವಂಚನೆಗೊಳಗಾದ ಹೆಣ್ಣು ಮಗಳೊಬ್ಬಳು ಅಕ್ಷರಶಃ ಹುಚ್ಚಿಯಾಗಿಬಿಟ್ಟಿದ್ದಾಳೆ!



ಆಕೆ ಗುಳೇದಗುಡ್ಡ ನಿವಾಸಿ ಸುಭಾಷಿಣಿ. ಇಲ್ಲಿನ ಬಡ ಶಿಕ್ಷಕರೊಬ್ಬರ ಮಗಳಾದ ಈಕೆ ಬಿರಾದಾರನಿಗೆ ಬಲಿ ಬಿದ್ದದ್ದು ಕಾಲೇಜು ದಿನಗಳಲ್ಲಿ. ಆಗ ಶ್ರೀಮಂತರ ಮನೆ ಮಗ ಬಿರಾದಾರನೂ ಕಾಲೇಜು ವಿದ್ಯಾರ್ಥಿ. ಇವರಿಬ್ಬರೂ ಧಾರವಾಡದಲ್ಲಿ ಡಿಗ್ರಿ ವ್ಯಾಸಂಗ ಮಾಡುತ್ತಲೇ ಹತ್ತಿರಾದವರು. ಆಗಿನಿಂದಲೇ ಹುಡುಗೀರನ್ನು ಪಳಗಿಸಿಕೊಳ್ಳೋ ಕಲೆ ಕರಗತವಾಗಿಸಿಕೊಂಡಿದ್ದ ಬಿರಾದಾರ್ ಸುಭಾಷಿಣಿಯನ್ನು ನಿರಾಯಾಸವಾಗಿ ಬಲೆಗೆ ಕೆಡವಿಕೊಂಡಿದ್ದ.

ಸುಭಾಷಿಣಿ ವಯೋಸಹಜ ಆಸೆಯಿಂದ ನಿಷ್ಕಲ್ಮಷವಾಗಿ ಬಿರಾದಾರ್‌ನನ್ನು ಪ್ರೀತಿಸಿದರೆ, ಈ ಆಸಾಮಿ ನಿಧಾನವಾಗಿ ಆಕೆಯನ್ನು ತನ್ನ ತೆವಲಿಗೆ ಬಳಸಿಕೊಳ್ಳುತ್ತಾ ಬಂದ. ಈ ಹುಡುಗಿ ಬಿರಾದಾರ್ ತನ್ನನ್ನು ಮದುವೆಯಾಗುತ್ತಾನೆಂದೇ ನಂಬಿಕೊಂಡಿದ್ದಳು. ತೀರಾ ಈತನ ಮನೆಯವರೊಂದಿಗೂ ಸಲುಗೆಯಿರಿಸಿಕೊಂಡಿದ್ದಳು. ಆದರೆ ಈ ನಡುವೆಯೆ ಬಿರಾದಾರ ಈ ಭಾಗದ ರಾಜಕಾರಣಿಯೊಬ್ಬರ ಮಗಳನ್ನು ಮದುವೆಯಾಗಲು ತನ್ನ ಕುಟುಂಬಿಕರಿಗೆ ಒಪ್ಪಿಗೆ ನೀಡಿಬಿಟ್ಟಿದ್ದ. ಮದುವೆಯೂ ಆಯಿತು. ಮಗೂವೂ ಹುಟ್ಟಿತು. ಆದರೆ ಸುಭಾಷಿಣಿಯೊಂದಿಗಿನ ಸಂಬಂಧವನ್ನು ಮಾತ್ರ ಹಾಗೇ ಮುಂದುವರೆಸಿಕೊಂಡು ಹೋಗಿದ್ದ. ಈ ವಿಚಾರ ಇತ್ತೀಚೆಗೆ ಬಿರಾದಾರನ ಹೆಂಡತಿಗೂ ಗೊತ್ತಾಗಿ, ಸಂಬಂಧಿಕರ ನಡುವೆಯೂ ಸುದ್ದಿಯಾಗಿ ಬಳಿಕ ಬಿರಾದಾರ್ ಸುಭಾಷಿಣಿಯಿಂದ ಮೆಲ್ಲಗೆ ದೂರಾಗಲು ಶುರುವಿಟ್ಟ.

ಇದರ ಸುಳಿವು ಸಿಕ್ಕಿದ್ದೇ ಸುಭಾಷಿಣಿ ತತ್ತರಿಸಿ ಹೋದಳು. ಬಿರಾದಾರ್ ಬೇರೆ ಮದುವೆಯಾದುದನ್ನೂ ತಡೆದುಕೊಂಡು ಆತನೊಂದಿಗೇ ಅನಧಿಕೃತ ಬದುಕು ಕಂಡುಕೊಂಡಿದ್ದ ಆಕೆ ನಿಜಕ್ಕೂ ಕಂಗಾಲಾದಳು. ಈ ಕುರಿತಾಗಿ ಇಬ್ಬರ ನಡುವೆ ಜಗಳಗಳೂ ನಡೆದವು. ಬಡತನದ ಬೇಗೆಯಲ್ಲೇ ನರಳುತ್ತಿದ್ದ ಆಕೆ ಕೊನೆಗೆ ಹತಾಶಳಾಗಿ ದೈನ್ಯತೆಯಿಂದ ಬೇಡಿಕೊಂಡಿದ್ದೂ ಆಯಿತು. ಯಾವುದಕ್ಕೂ ಬಿರಾದಾರನೆಂಬ ಕಟುಕನ ಮನಸ್ಸು ಕರಗಲಿಲ್ಲ. ಈಕೆಯನ್ನು ನಡು ನೀರಲ್ಲಿ ಕೈ ಬಿಟ್ಟು ಹೊಸಾ ಬೇಟೆಯ ಉತ್ಸಾಹಕ್ಕೆ ಬಿದ್ದ.

ಆದರೆ 2010 ಫೆಬ್ರವರಿ ಹೊತ್ತಿನಲ್ಲಿ ಸುಭಾಷಿಣಿ ಬಿರಾದಾರನ ವಂಚನೆಗಳ ವಿರುದ್ಧ ಬಹಿರಂಗವಾಗಿ ತಿರುಗಿಬಿದ್ದಳು. ಪೊಲೀಸರಿಗೆ, ಮುಖಂಡರುಗಳಿಗೆ ವಿಷಯ ತಿಳಿಸುವುದಾಗಿಯೂ ಹೆದರಿಸಿದಳು. ತನ್ನ ಕಾಮಕಾಂಡಗಳು ಬಿಚ್ಚಿಕೊಳ್ಳುತ್ತವೆಂಬ ಹೆದರಿದ ಸಾಹೇಬ ಖಾಕಿ ಒದ್ದೆ ಮಾಡಿಕೊಂಡು ಬೇರೆಯದೇ ಕಸರತ್ತಿಗಿಳಿದ. ಅದರನ್ವಯ ಫೆಬ್ರವರಿ ತಿಂಗಳಲ್ಲೇ ಸ್ಟಾರ್ ಹೋಟೆಲ್ ಒಂದರಲ್ಲಿ ಒಂದಷ್ಟು ಪರಿಚಿತ ರಾಜಕೀಯ ಮುಖಂಡರನ್ನು ಗುಡ್ಡೆ ಹಾಕಿಕೊಂಡ ಬಿರಾದಾರ್ ಸುಭಾಷಿಣಿಯೊಂದಿಗೆ ಮಾತುಕತೆ ನಡೆಸಿದ. ಇದು ಐದು ಲಕ್ಷದ ಪರಿಹಾರ ಸುಭಾಷಿಣಿಯ ಕೈ ಸೇರುವಂತೆ ಮಾಡುವಲ್ಲಿ ಯಶಸ್ವಿಯಾಯಿತು.


ಬಿರಾದಾರನನ್ನು ಜೀವದಂತೆ ಹಚ್ಚಿಕೊಂಡಿದ್ದ ಸುಭಾಷಿಣಿ ಹಣದಿಂದ ತೃಪ್ತಿ ಹೊಂದುವಂಥ ಮನಸ್ಥಿತಿ ಹೊಂದಿರಲಿಲ್ಲ. ಯಾಕೆಂದರೆ ಆಕೆ ಆದಾಗಲೇ ಎಲ್ಲವನ್ನೂ ವಂಚಕನಿಗೆ ಅರ್ಪಿಸಿಕೊಂಡಾಗಿತ್ತು. ಈ ಮಾನಸಿಕ ತೊಳಲಾಟದಿಂದಲೇ ಆಕೆ ಹುಬ್ಬಳ್ಳಿ-ಧಾರವಾಡ ಪೊಲೀಸ್ ಉನ್ನತಾಧಿಕಾರಿಗಳಿಗೆ ದೂರೊಂದನ್ನು ನೀಡಿದಳು. ಬಿರಾದಾರನ ಪೊಲೀಸ್ ಪವರ್ ಮತ್ತು ಆತನ ಫ್ಯಾಮಿಲಿಯ ರಾಜಕೀಯ ಲಿಂಕುಗಳಿಂದಾಗಿ ಆಕೆಯ ಹೋರಾಟಗಳೆಲ್ಲ ಅರಣ್ಯ ರೋದನವಾಗಿ ಬದಲಾಯ್ತು.

ಇದೆಲ್ಲದರಿಂದಾಗಿ ಸುಭಾಷಿಣಿಯೀಗ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾಳೆ. ಗಾಯದ ಮೇಲೆ ಬರೆಯೆಂಬಂತೆ ತಂದೆಯೂ ತೀರಿಕೊಂಡಿದ್ದಾರೆ. ಮರ್ಯಾದಸ್ಥ ಕುಟುಂಬವೊಂದರಿಂದ ಬಂದ ಈಕೆಯೀಗ ಬಿರಾದಾರನ ಹೆಸರೆತ್ತಿದರೆ ತಿರುಗಿ ಬೀಳುತ್ತಾಳೆ. ಆದರೆ ಆಕೆಯ ಅಸಹಾಯಕತೆ ಬಿರಾದಾರನನ್ನು ಬದುಕಿಸಿದೆ. ಬಿರಾದಾರನ ವಂಚನೆಯ ದೆಸೆಯಿಂದಾಗಿ ಚೆಂದಗೆ ಬದುಕಬೇಕಿದ್ದ ಸುಭಾಷಿಣಿ ಹುಚ್ಚು ಹಿಡಿಸಿಕೊಂಡಿದ್ದಾಳೆ. ಇದೀಗ ಮನೆ ಮಗಳ ಪರಿಸ್ಥಿತಿ ಈ ರೀತಿಯಾಗಿ ನೆರೆಹೊರೆಯವರ ಮೂದಲಿಕೆ ತಾಳಲಾರದೆ ಸುಭಾಷಿಣಿಯ ಕುಟುಂಬ ಊರನ್ನೇ ಬಿಟ್ಟಿದೆ.


ಕಾಮುಕ ಬಿರಾದಾರನ ಖಾತೆಯಲ್ಲಿ ಇಂಥ ಅದೆಷ್ಟು ಕುರುಹುಗಳಿವೆಯೋ? ತನ್ನ ತೆವಲಿಗೆ ಅಮಾಯಕ ಹುಡುಗೀರ ಬದುಕನ್ನೇ ಬಲಿ ಬೇಳಿಸುವ ಈತನಿಗೆ ಯಾವ ಶಿಕ್ಷೆಯೂ ಇಲ್ಲವೇ? ●

ಕರಾವಳಿ: ಪಂಚಾಯ್ತಿ ಫೈಟಿಂಗ್ ಫಲಿತಾಂಶದ ಪಾಠವೇನು?


• ನಹುಶ


ಪೇಜಾವರ ಸ್ವಾಮಿ

ಕರಾವಳಿಯ ಮೂರು ಜಿಲ್ಲೆಯ ಪಂಚಾಯ್ತಿ ಚುನಾವಣೆ ಫಲಿತಾಂಶ ಎರಡು ಥರ ಬಂದಿದೆ! ಸಂಘಪರಿವಾರದ ಹರಾಮಿ ಹಿಂದೂತ್ವದ ಪ್ರಯೋಗ ಶಾಲೆಯಂತಾಗಿರುವ ಕರಾವಳಿಯ ಉದ್ದಗಲಕ್ಕೆ ಬಿಜೆಪಿಯೇ ಗೆಲ್ಲುತ್ತದೆಂಬುದು ಸಾಮಾನ್ಯ ಕಲ್ಪನೆಯಾಗಿತ್ತು. ಚೆಡ್ಡಿ-ಕಾವಿ ಪಡೆ 'ಧರ್ಮಕಾರಣ' ಪ್ರಯೋಗಿಸಿ ಜನರನ್ನು ದಿಕ್ಕೆಡಿಸಿ ಮತ ಪಡೆಯುವ ಷಡ್ಯಂತ್ರ ಇಂಥದೊಂದು ಭಾವನೆಯನ್ನು ಸಹಜವಾಗೇ ಮೂಡಿಸಿತ್ತು. ಈ ಭಯಾನಕ ನಿರೀಕ್ಷೆ ದಕ್ಷಿಣ ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಜವಾಗಿದೆ; ಆದರೆ ಉತ್ತರ ಕನ್ನಡದಲ್ಲಿ ಮತದಾರ ಧರ್ಮೋನ್ಮಾದಕ್ಕೆ ಒಳಗಾಗದೆ ಸಂಯಮದಿಂದ ಮತ ಚಲಾಯಿಸಿದ್ದರಿಂದ ಬಿಜೆಪಿ ಬೋರಲಾಗಿ ಬಿದ್ದಿದೆ!!


ಸೊರಕೆ

ಉತ್ತರ ಕನ್ನಡದಲ್ಲಿ ಆಡಳಿತಾರೂಢ ಬಿಜೆಪಿ ಹೇಗಾದರೂ ಮಾಡಿ ಜಿಪಂ-ತಾಪಂ ಗದ್ದುಗೆ ವಶಪಡಿಸಿಕೊಳ್ಳಬೇಕೆಂಬ ಹಠದಿಂದ ಮಾಡಬಾರದ ತಂತ್ರ-ತರಲೆ ಮಾಡಿತ್ತು. ಆದರೆ ಜಿಲ್ಲಾ ಬಿಜೆಪಿ ಯಜಮಾನರಾದ ಮಂತ್ರಿ ಕಾಗೇರಿ ಮಾಣಿ ಮತ್ತು ಸಂಸದ ಅನಂತ್ಮಾಣಿಗಳ ಚೆಂದದ ಮುಖದ ಹಿಂದಡಗಿದ್ದ ಅನಾಹುತಕಾರಿ ಬ್ರಾಹ್ಮಣಿಕೆ-ಸ್ವಾರ್ಥ-ಸ್ವಾಹಾ ತೀಟೆ ಮತ್ತು ಸೋಗಲಾಡಿತನದ ವಿಕಾರರೂಪ ಸ್ಪಷ್ಟವಾಗಿ ಮತದಾರರಿಗೆ ಕಾಣಿಸಿತ್ತು. ಈ ಪಾಪಿ ಬಿಜೆಪಿಗಳಿಗಿಂತ ಪಾಳೆಗಾರ ದೇಶಪಾಂಡೆಯ ಕಾಂಗ್ರೆಸ್ಸಿಗರೇ ಅದೆಷ್ಟೋ ಬೆಟರ್ ಎಂಬ ತೀರ್ಮಾನಕ್ಕೆ ಉತ್ತರ ಕನ್ನಡಿಗರು ಮತದಾನದ ಹೊತ್ತಿಗೆ ಬಂದುಬಿಟ್ಟಿದ್ದರು. ಹೀಗಾಗಿ ಮಾಣಿದ್ವಯರು ಯಥೇಚ್ಛವಾಗಿ ಹಣ-ಹೆಂಡ-ಕೋಮು ವಿಷ ಹಂಚಿದರೂ ಬಿಜೆಪಿಗೆ ಗೆಲ್ಲಲಾಗಲೇ ಇಲ್ಲ.


ಕಲ್ಲಡ್ಕ ಪ್ರಭಾಕರ ಭಟ್ಟ


ಜಯಪ್ರಕಾಶ್ ಹೆಗ್ಡೆ

ದಗಲುಬಾಜಿ ಮಂತ್ರಿ ಕಾಗೇರಿಗಾಗಲಿ, ಸೋಗಲಾಡಿ ಸಂಸದ ಅನಂತ್ಮಾಣಿಗಾಗಲಿ ಜನಪರ ನೀತಿ-ನಿಯತ್ತು, ನಾಯಕತ್ವದ ಗುಣಧರ್ಮ ಯಾವುದೂ ಇಲ್ಲ. ಎಲ್ಲ ಧರ್ಮ ಸಾಯಲಿ, ಹಿಂದೂ ಧರ್ಮದೊಳಗಿನ ಎಲ್ಲ ಜಾತಿಗಳವರನ್ನು ಸಮಾನ ಧೋರಣೆಯಿಂದ ನೋಡಿದವರೂ ಈ ವಿಪ್ರೋತ್ತಮರಲ್ಲ. ಸ್ವಜೇಣೋದ್ಧಾರ ಸಕತ್ತಾಗಿ ಮಾಡಿಕೊಂಡಿರುವ ಈ ಹೈಗರ ವಟುಗಳಲ್ಲಿ ಜಿಲ್ಲೆಯ ಅಭಿವೃದ್ಧಿಯ ಸಣ್ಣ ಪರಿಕಲ್ಪನೆಯೂ ಇಲ್ಲ. ಬಿಜೆಪಿಯೊಳಗಂತೂ ಈ ಹಾರವರ ಹಾರಾಟ ಅತಿಯಾಗಿ ಶೂದ್ರ ಚೆಡ್ಡಿಗಳು ಕಂಗಾಲಾಗಿ ಹೋಗಿದ್ದರು. ಮಾಜಿ ಮಂತ್ರಿ ಹಾಲಿ ಸಾಬೂನು ಕಾರ್ಖಾನೆ ಅಧ್ಯಕ್ಷ ಶಿವಾನಂದ ನಾಯ್ಕ ಅಬ್ರಾಹ್ಮಣರ ಮುಖಂಡತ್ವ ವಹಿಸಿಕೊಂಡಿದ್ದರೆ, ಬ್ರಾಹ್ಮಣರಿಗೆ ಕಾಗೇರಿ-ಅನಂತ್ಮಾಣಿಗಳೇ ಲೀಡರಾಗಿದ್ದರು.

ಈ ಒಳಕಿತ್ತಾಟ ಅದೆಷ್ಟು ಜೋರಾಗಿ ಬಿಜೆಪಿಯಲ್ಲಿ ನಡೆದಿತ್ತೆಂದರೆ, ಹಣ-ಹೆಂಡ-ಹಿಂದೂತ್ವ ಇದ್ಯಾವುದೂ ಪಂಚಾಯ್ತಿ ಇಲೆಕ್ಷನ್‌ನಲ್ಲಿ ವರ್ಕ್‌ಔಟ್ ಆಗದಷ್ಟು. ಕಾಗೇರಿ-ಅನಂತ್ಮಾಣಿ ಶಿರಸಿಯ ತಮ್ಮ ಬ್ರಾಹ್ಮಣ ಸಾಮ್ರಾಜ್ಯದಲ್ಲಿ ಕುಳಿತು ತಮಗೆ ಬೇಕಾದವರಿಗೆ ಟಿಕೆಟ್ ಕೊಡುವ, ಬೇಕಾದವರ ಮುಗಿಸುವ ತೀರ್ಮಾನ ತೆಗೆದುಕೊಂಡರು. ಬಿ-ಫಾರ್ಮ್ ಹಂಚಿಕೆಯಲ್ಲಿ ದೊಡ್ಡ ರಾದ್ಧಾಂತವೇ ಆಗಿಹೋಯ್ತು. ಭಟ್ಕಳ, ಹೊನ್ನಾವರ, ಕಾರವಾರ, ಅಂಕೋಲಾ; ಸಿದ್ಧಾಪುರದಲ್ಲಿ ಅಧಿಕೃತ ಕ್ಯಾಂಡಿಡೇಟ್‌ಗಳ ವಿರುದ್ಧ ಬಂಡಾಯ ಭುಗಿಲೆದ್ದಿತ್ತು. ಈ ಭಿನ್ನಮತವನ್ನೆಲ್ಲ ಹಿಂದೂತ್ವ-ಧರ್ಮಕಾರಣ ತಂತಾನೆ ಕಂಟ್ರೋಲ್ ಮಾಡುತ್ತದೆಂಬ ಭಂಡತನದಲ್ಲೇ ಮಾಣಿದ್ವಯರು ಉಳಿದುಕೊಂಡರು.

ಒಂದು ಕಾಲದ ತನ್ನ 'ಕರ್ಮಭೂಮಿ' ಭಟ್ಕಳದಲ್ಲೇ ಅನಂತ್ಮಾಣಿ ಹೇಳ ಹೆಸರಿಲ್ಲದಂತೆ ಮಣ್ಣುಮುಕ್ಕಿದ್ದಾನೆ. ಅಲ್ಲೀಗ ಏನಿದ್ದರೂ ಆತನ ವೈರಿ ಸ್ಥಳೀಯ ಬಹುಸಂಖ್ಯಾತ ದೀವರ ಕುಲತಿಲಕ ಶಿವಾನಂದ ನಾಯ್ಕನದೇ ದರ್ಬಾರು. ಕಾರವಾರ-ಅಂಕೋಲೆಯಲ್ಲಿ 'ಅನರ್ಹ' ಅಸ್ನೋಟಿಕರ್ ಬಿಜೆಪಿಗೆ ಸಮಾಧಿ ಕಟ್ಟಿಹೋಗಿದ್ದಾನೆ. ಹೀಗಾಗಿ ಇಲ್ಲಿ ಕಾಂಗ್ರೆಸ್‌ನ ಸತೀಶ್ ಸೈಲ್ ಹಿಂಬಾಲಕರ ಕಲರವ ಶುರುವಾಗಿದೆ. ಕಾಗೇರಿಯ ಶಿರಸಿ-ಸಿದ್ಧಾಪುರಗಳಲ್ಲಿ ಬಿಜೆಪಿ ಇದ್ದೂ ಇಲ್ಲದಂತಾಗಿದೆ. ಶಿರಸಿಯಲ್ಲಿ ತಾಪಂ, ಮೂರು ಜಿಪಂ ಸ್ಥಾನ ಗೆದ್ದಿರುವ ಕಾಗೇರಿ ಸಿದ್ಧಾಪುರದಲ್ಲಿ ಜನರಿಂದ ತಿರಸ್ಕೃತನಾಗಿದ್ದಾನೆ! ಕರಾವಳಿ ಮತ್ತು ಹಳಿಯಾಳ ಮುಂಡಗೋಡ್-ಜೋಯಿಡಾದಲ್ಲಿ ಬಿಜೆಪಿ ಬರ್ಬಾದ್ ಆಗಿಹೋಗಿದೆ. ಕರಾವಳಿ ಭಾಗದ ಜನರಿಗೆ ಅನ್ಯಾಯ ಮಾಡಿ ತನ್ನ ಹೈಗರ ಹೆಡ್‌ಕ್ವಾಟರ್ಸ್ ಶಿರಸಿಯನ್ನು ಜಿಲ್ಲೆಯಾಗಿಸಲು ಕಾಗೇರಿ ಮಾಡಿದ ಕಾರಮತ್ತಿಗೆ ತಕ್ಕ ದಂಡ ತೆತ್ತಿದ್ದಾನೆ. ಈ ಕಾಗೇರಿಗಾಗಲಿ, ಅನಂತ್ಮಾಣಿಗಾಗಲಿ ಜಿಲ್ಲಾ ಮಟ್ಟದ ಇಮೇಜ್ ಇಲ್ಲ, ನಾಯಕತ್ವದ ಯೋಗ್ಯತೆ ಇಲ್ಲವೆಂಬುದನ್ನು ಪಂಚಾಯ್ತಿ ಫೈಟಿಂಗ್‌ನಲ್ಲಿ ಸಾಬೀತಾಗಿದೆ. ಕಾಗೇರಿಗೆ ಒಂಚೂರು ಶಿರಸಿಯಲ್ಲಾದರೂ ಉಸಿರು ಇದೆ; ಅನಂತ್ಮಾಣಿಗೆ ಜಿಲ್ಲೆಯ ಯಾವ ಮೂಲೆಯಲ್ಲೂ ಮೂರು ಕಾಸಿನ ಕಿಮ್ಮತ್ತಿಲ್ಲ. ಈತನ ಕಮ್ಯುನಲ್ ಕಸರತ್ತುಗಳೆಲ್ಲ ಸವಕಲಾಗಿ ಹೋಗಿದೆ!

ಜಿಲ್ಲೆಯ ಜನರಿಗೆ ಬಿಜೆಪಿ ಬ್ರಾಹ್ಮಣರ ಬೂಟಾಟಿಕೆ ನಿಸ್ಸಂದಿಗ್ಧವಾಗಿ ಸಾಬೀತಾಗಿರುವುದು ಕಾಂಗ್ರೆಸ್‌ಗೆ ಲಾಭ ಮಾಡಿದೆ. ಬಿಜೆಪಿ ಭೂಪರ ಭಂಡತನ, ಜನದ್ರೋಹ, ಭಿನ್ನಮತವನ್ನೆಲ್ಲ ಕಾಂಗ್ರೆಸ್‌ನ ಪಾಳೆಗಾರ ಆರ್.ವಿ. ದೇಶಪಾಂಡೆ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಮೂರ್‍ನಾಲ್ಕು ಸುತ್ತು ಹೊಡೆದು ಗಟ್ಟಿ ಕ್ಯಾಂಡಿಡೇಟ್‌ಗಳನ್ನೇ ಹುಡುಕಿ ಕಣಕ್ಕಿಳಿಸಿದ್ದರು. ಅಲ್ಲಲ್ಲಿ ಇದ್ದ ಭಿನ್ನಮತ ತಹಬಂದಿಗೆ ತಂದು ಬಿಜೆಪಿ ಮಣಿಸಲು ತನ್ನ ಪಡೆಗೆ ಅಗತ್ಯ 'ಶಸ್ತ್ರಾಸ್ತ್ರ' ಪೂರೈಕೆ ಮಾಡಿದ್ದರು. ಇದಕ್ಕಿಂತಲೂ ಹೆಚ್ಚಾಗಿ ಸ್ವಪಕ್ಷದೊಳಗಿನ ಮ್ಯಾಗಿ ಬಣವನ್ನು ಹೇಳಹೆಸರಿಲ್ಲದಂತೆ ಮಾಡಿ ಇಡೀ ಪಾರ್ಟಿಯಲ್ಲಿ ಪ್ರಭುತ್ವ ಸಾಧಿಸಿದ್ದರು. ಮ್ಯಾಗಿ ರಾಜ್ಯಪಾಲರಾಗಿ ತೊಲಗಿದ ನಂತರ ಒಂಥರಾ ಅನಾಥಪ್ರಜ್ಞೆಯಲ್ಲಿ ಬಳಲಾಡುತ್ತಿದ್ದ ಆಕೆಯ ಬಣ ದೇಶಪಾಂಡೆ ಪ್ರಹಾರ ತಡೆಯಲಾಗದೇ ಅವಸಾನವಾಗಿದೆ.

ಜಿಪಂ ತಾಪಂ ಫಲಿತಾಂಶ


ಒಂದಂತೂ ಖರೆ. ಮ್ಯಾಗಿ ಅದೆಷ್ಟೇ ಪ್ರಭಾವಿ ಆಗಿರಲಿ; ದಿಲ್ಲಿ ದೊರೆಸಾನಿಯ ಸಖಿಯೇ ಆಗಿರಲಿ, ಈಕೆ ಕೋಟಿ-ಕೋಟಿ ಹಣ ತಂದು ಅಭಿವೃದ್ಧಿಗೆ ಸುರಿದಿರಲಿ. ಆಕೆ ಜನ ನಾಯಕಿ ಮಾತ್ರ ಅಲ್ಲ. ಆಕೆಗೆದಕ್ಷಿಣ ಕನ್ನಡ ಜಿಲ್ಲೆಯ ನಾಡಿನ ಬಡಿತ ಈ ಒಂದೂವರೆ ದಶಕದ ಜಿಲ್ಲಾ ರಾಜಕಾರಣದಲ್ಲಿ ಅರ್ಥವೇ ಆಗಿಲ್ಲ. ಆಕೆಯ ಸುತ್ತಲಿರುವವರೂ ಚಾಡಿಕೋರರೇ ಹೊರತು ಜನಪರ ಕಳಕಳಿಯ ರಾಜಕಾರಣಿಗಳಲ್ಲ. ಹಾಗೆಯೇ ಮ್ಯಾಗಿ ತನ್ನ ನಂಬಿದವರಿಗೆ ದೇಶಪಾಂಡೆಗೆ ಸೆಡ್ಡು ಹೊಡೆದು ರಕ್ಷಿಸಿದ್ದಾಗಲಿ, ಬೆಳೆಸಿದ್ದಾಗಲಿ ಇಲ್ಲ. ರವಿನಾಯ್ಕ, ದೀಪಕ್ ಹೊನ್ನಾವರ, ವೋಂಟೆ ಫರ್ನಾಂಡಿಸ್, ರಾಮಾ ಮೊಗೇರನಂಥ ಗೋಲ್‌ಮಾಲ್ ಲೇವಾದೇವಿದಾರ ಕಟ್ಟಿಕೊಂಡು ಓಡಾಡಿದ ಮ್ಯಾಗಿ ಕಾಂಗ್ರೆಸ್‌ನಲ್ಲಿ ಗ್ಯಾಂಗ್‌ವಾರ್ ಸೃಷ್ಟಿಸಿದರೇ ಹೊರತು ಪಾರ್ಟಿ ಉದ್ಧಾರಕ್ಕೆ ರಾಗ-ದ್ವೇಷ ಮರೆತು ಕೆಲಸ ಮಾಡಲಿಲ್ಲ; ದಿಲ್ಲಿಯಲ್ಲಿದ್ದ 'ಶಕ್ತಿ' (ಇದು ಇದ್ದಿದ್ದು ಅನುಮಾನ) ಬಳಸಿ ತಂಟೆಕೋರ ದೇಶಪಾಂಡೆಯ ಮಟ್ಟಹಾಕಿ ಭಿನ್ನಮತ ಕೊನೆಗಾಣಿಸಲೂ ಇಲ್ಲ, ಕೋಮುವಾದಿ ಬಿಜೆಪಿಗೆ ಸೆಡ್ಡು ಹೊಡೆಯುವ ತಂತ್ರಗಾರಿಕೆಯೂ ಆಕೆಗಿರಲಿಲ್ಲ.

ಪಾರ್ಟಿ ಕಟ್ಟುವ ಕೆಲಸದಲ್ಲಿ ಹುಂಬಿ ಮ್ಯಾಗಿಗಿಂತ ದಾದಾಗಿರಿಯ ದೇಶಪಾಂಡೆಯೇ ಬೆಟರ್. ಆತ ದುಷ್ಟ-ಭ್ರಷ್ಟ-ಮೇಲ್ವರ್ಗದ ಫ್ಯೂಡಲ್ ದರ್ಪದವರು, ಎಲ್ಲ ನಿಜ. ಆದರೆ ಅಷ್ಟೇ ಸಮರ್ಥ ಸಂಘಟಕ. ದಣಿವರಿಯದ ದೈತ್ಯ ಕೆಲಸಗಾರ. ಎದುರಾಳಿಯನ್ನು ಮೇಲೇಳದಂತೆ ಹಣಿವ ತಾಕತ್ತುದಾರ. ಈ ಗುಣ-ಅವಗುಣಗಳ ನಡುವೆಯೇ ಆತನೂ ದಿಲ್ಲಿ ಕಾಂಗ್ರೆಸ್‌ನ ಪವರ್ ಬ್ರೋಕರ್‌ಗಳ ಸಖ್ಯ ಕುದುರಿಸಿಕೊಂಡಿದ್ದಾರೆ. ಈ ಕಾಂಟ್ಯಾಕ್ಟುಗಳಿಂದ ಮ್ಯಾಗಿಯ ಪುಂಗಿ ಬಂದ್ ಮಾಡಿದ್ದಾರೆ. ದೇಶಪಾಂಡೆಯ ಹೊಡೆತಗಳ ತಾಳಲಾರದೆ ಮ್ಯಾಗಿ ತನ್ನ ನಿಷ್ಠಾವಂತರನ್ನು ನಡುನೀರಲ್ಲಿ ಬಿಟ್ಟು ಉತ್ತರಾಖಂಡದ ರಾಜಭವನದ ಹೊಕ್ಕಿ ಕುಳಿತಿರುವಂತಾಗಿದೆ. ಮ್ಯಾಗಿ ಜಿಲ್ಲೆಯ ಹೊಸಿಲು ದಾಟಿದ್ದೇ ತಡ, ದೇಶಪಾಂಡೆ ಆಕೆ ಮತ್ತೆ ಉತ್ತರ ಕನ್ನಡ ಕಾಂಗ್ರೆಸ್‌ನಲ್ಲಿ ಕೈಚಳಕ ನಡೆಸಲಾಗದಂತೆ 'ದಿಗ್ಬಂಧನ' ಮಾಡಿಬಿಟ್ಟ! ಇಡೀ ಜಿಲ್ಲಾ ಪಕ್ಷವನ್ನೇ ಕಬ್ಜಾ ಮಾಡಿಕೊಂಡುಬಿಟ್ಟ.


ಮ್ಯಾಗಿ ತೊಲಗಿದ್ದು ಅಥವಾ ದೇಶಪಾಂಡೆ ಪಾರ್ಟಿಯಲ್ಲಿ ಪಾರಮ್ಯ ಸಾಧಿಸಿದ್ದು ಜಿಲ್ಲಾ ಕಾಂಗ್ರೆಸ್‌ಗೆ ಹೊಸ ಚೈತನ್ಯ ನೀಡಿತು. ಇಬ್ಬರು ನಾಯಕರ ನಡುವೆ ದಿಕ್ಕೆಟ್ಟಿದ್ದ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆಯ ಹಾವಳಿ ಕಮ್ಮಿಯಾಯ್ತು. ದೇಶಪಾಂಡೇ ಮಾತೇ ಜಿಲ್ಲಾ ಕಾಂಗ್ರೆಸ್‌ನಲ್ಲಿ ಅಂತಿಮವಾಯ್ತು. ಹೀಗಾಗಿ ಪಕ್ಷದ ಕಾರ್ಯಕರ್ತರು ಚುರುಕಾದರು. ದೇಶಪಾಂಡೆಯ ಹೆಡ್‌ಮಾಸ್ತರಿಕೆಯಲ್ಲಿ ಸಂಘಟಿತವಾಯ್ತು. ಆತ ಸೂಚಿಸಿದ ಅಭ್ಯರ್ಥಿಗಳ ಬಗ್ಗೆ ಎಷ್ಟೇ ಅಸಮಾಧಾನವಿದ್ದರೂ ತೋರಿಸಿಕೊಳ್ಳದೆ ಕೆಲಸ ಮಾಡಿದರು. ಸಣ್ಣದೊಂದು ಮ್ಯಾಗಿ ನಿಷ್ಠರ ಬಣ ಬಂಡೆದ್ದರೂ ಕಾಂಗ್ರೆಸ್‌ಗೆ ದೊಡ್ಡ ಹಾನಿಯಾಗಲಿಲ್ಲ. ಕಾಂಗ್ರೆಸ್ ಬರೋಬ್ಬರಿ 22 ಜಿಪಂ ಸ್ಥಾನ, ಹನ್ನೊಂದರಲ್ಲಿನ 5 ತಾಪಂಗಳನ್ನು ಗೆಲ್ಲಲು ದೇಶಪಾಂಡೆಯ ಏಕಚಕ್ರಾಧಿಪತ್ಯವೇ ಕಾರಣ.


ಅಲ್ಲಿಗೆ ಜಿಲ್ಲಾ ಕಾಂಗ್ರೆಸ್‌ಗೆ ಈ ಪಂಚಾಯ್ತಿ ಇಲೆಕ್ಷನ್ ಒಂದು ಸ್ಪಷ್ಟ ಪಾಠ ಹೇಳಿದೆ. ಅದೆಂದರೆ ದೂರದೃಷ್ಟಿ ಕೊರತೆ, ತಿಕ್ಕಲುತನಗಳ ಮ್ಯಾಗಿ ಜಿಲ್ಲಾ ಕಾಂಗ್ರೆಸ್‌ನಲ್ಲಿ ಮೂಗು ತೂರಿಸದಿದ್ದರೆ ದೇಶಪಾಂಡೆ ಕಾಂಗ್ರೆಸ್‌ಗೆ ಗತವೈಭವ ತರಬಲ್ಲರು. ಕಾಗೇರಿ- ಅನಂತ್ಮಾಣಿಗಳ ಬಿಜೆಪಿಯ ಬೂಟಾಟಿಕೆ ಬಯಲುಗೊಳಿಸುವ ತಂತ್ರಗಾರಿಕೆ ಗೊತ್ತಿರುವುದು ದೇಶಪಾಂಡೆಗೇ ಹೊರತು ಮ್ಯಾಗಿಗಲ್ಲ. ಹಾಗೆಯೇ ಬಿಜೆಪಿಗೆ ಜಿಲ್ಲೆಯಲ್ಲಿ ಬೇಸ್ ಇಲ್ಲ, ಕಾಂಗ್ರೆಸ್ಸಿಗರ ಕಿತ್ತಾಟವೇ ಬಿಜೆಪಿಗೆಯ ಬಲವೇ ಹೊರತು ಜನ ಬೆಂಬಲ ಇಲ್ಲ; ಬಿಜೆಪಿಯ ಅನಂತ್ಮಾಣಿ-ಕಾಗೇರಿ ಮಾಣಿಗಳ ಭೋಗತ 'ಧರ್ಮಕಾರಣ'ದ ಮಂಕುಬೂದಿ ನಿಷ್ಕ್ರಿಯವಾಗಿಸಲು ಜಿಲ್ಲಾ ಕಾಂಗ್ರೆಸ್‌ಗೆ ಒಬ್ಬನೇ ನಾಯಕಬೇಕೆಂಬ ಸಂದೇಶ ಪಂಚಾಯ್ತಿ ಇಲೆಕ್ಷನ್ ಕಳಿಸಿದೆ. ಇದು ಮ್ಯಾಗಿಗೆ ಅರ್ಥವಾದರೆ ಸ್ಥಳೀಯ ಕಾಂಗ್ರೆಸಿಗರ ಪುಣ್ಯವಷ್ಟೆ!

ಅವಿಭಜಿತ ದಕ್ಷಿಣ ಕನ್ನಡ: ನಿವೃತ್ತಿಗೆ ಆದೇಶ



ಮೊಯ್ಲಿ

ಉಡುಪಿ ಮತ್ತು ದಕ್ಷಿಣ ಕನ್ನಡ ಎಂಬ ಅವಳಿ ಜಿಲ್ಲೆಯಲ್ಲಿ ಸಂಘ ಪರಿವಾರ ಏರಿಸಿದ್ದ ಕೋಮು ಅಮಲು ಇನ್ನೂ ಇಳಿದಿಲ್ಲ. ಈ ಮನುಷ್ಯ ವಿರೋಧಿ ನಶೆ ಇನ್ನಷ್ಟು ಏರುವ ಅನಾಹುತಕಾರಿ ಸಂಕೇತಗಳನ್ನು ಬಿತ್ತರಿಸಿದೆ. ಬಿಜೆಪಿಯ ರಾಜಗುರು ಪೇಜಾವರಸ್ವಾಮಿ, ಆರೆಸೆಸ್ ರಿಂಗ್‌ಮಾಸ್ಟರ್ ಡಾ. ಕಲ್ಲಡ್ಕ ಪ್ರಭಾಕರ ಭಟ್ಟರ ಹೆಡ್‌ಕ್ವಾಟರ್ಸ್ ಈ ಅವಿಭಜಿತ ದಕ್ಷಿಣ ಕನ್ನಡ. ಈ ಕಾವಿ-ಚೆಡ್ಡಿಗಳು ಉಕ್ಕಿಬಂದಾಗೆಲ್ಲ ಹಿಂದೂ ಸಮಾವೇಶ, ಕೋಮುಗಲಭೆ, ಚರ್ಚ್-ಮಸೀದಿ ಮೇಲೆ ದಾಳಿ, ಗೋ ಪ್ರಾಣ, ಹಿಂದೂ ಹೆಣ್ಣಿನ ಮಾನ ರಕ್ಷಣೆ..... ಎಂಬ ಸಂಘರ್ಷ ಸೃಷ್ಟಿಸುವ ಈಶ್ಯೂಗಳನ್ನು ತುಂಬ ನಾಜೂಕಾಗಿ ಜಿಲ್ಲೆಯ ಉದ್ದಗಲದಲ್ಲಿ ಪೋಷಿಸಿಕೊಂಡು ಬಂದಿದ್ದಾರೆ. ಇಲೆಕ್ಷನ್ ಯಾವುದೇ ಇರಲಿ, "ಹಿಂದೂ ಸಮಾಜೋತ್ಸವ" ಎಂಬ ಕಾವಿ-ಚೆಡ್ಡಿಗಳ ಬಿಜೆಪಿ ಪ್ರಚಾರ 'ಸಾಮಗ್ರಿ' ದಿಢೀರ್ ಸಿದ್ಧವಾಗಿಬಿಡುತ್ತದೆ. ದುರಂತವೆಂದರೆ, ಸಂಘ ಪರಿವಾರದ ಈ ಸಂಚು ಬುದ್ಧಿವಂತರ ನೆಲ ಉಡುಪಿ-ದಕ್ಷಿಣ ಕನ್ನಡದಲ್ಲಿ ವರ್ಕ್‌ಔಟ್ ಆಗುತ್ತಲೇ ಇದೆ.


ಆಸ್ಕರ್


ಪೂಜಾರಿ

ಬಿಜೆಪಿ ಭಂಡರ ಕುರ್ಚಿ ರಾಜಕಾರಣದ ಧರ್ಮಾಧಾರಿತ ತೆವಲಿಗೆ ಪೂರಕವಾಗಿ ಎರಡೂ ಜಿಲ್ಲಾ ಕಾಂಗ್ರೆಸ್‌ನಲ್ಲಿ ಕಿತ್ತಾಟ ನಡೆಯುತ್ತಿದೆ. ಸುಮಾರು ಒಂದೂವರೆ ದಶಕದ ಹಿಂದೆ ಆಸ್ಕರ್ ಫರ್ನಾಂಡಿಸ್, ವೀರಪ್ಪ ಮೊಯ್ಲಿ ಮತ್ತು ಜನಾರ್ದನ ಪೂಜಾರಿ ಎಂಬ ದಿಲ್ಲಿ ಲೆವೆಲ್ ಕಾಂಗ್ರೆಸ್ ಜಗಳಗಂಟರು ಪಾರ್ಲಿಮೆಂಟ್ ಇಲೆಕ್ಷನ್‌ನಲ್ಲಿ ಸೋಲಲು ಶುರು ಮಾಡಿದಾಗ ಕುಸಿಯಲಾರಂಭಿಸಿದ್ದ ಕಾಂಗ್ರೆಸ್ ಇವತ್ತಿಗೂ ಚೇತರಿಸಿಕೊಂಡಿಲ್ಲ. ಜನಪರ ನೀತಿ-ನಿಲುವುಗಳಿಲ್ಲದ, ಸಂಘಟನಾ ಸಾಮರ್ಥ್ಯವಿಲ್ಲದ ಈ ಔಟ್‌ಡೇಟೆಡ್ ಮುದುಕರ ದುರಾಸೆಯ ಕಿತ್ತಾಟ ಎರಡು ದಶಕದ ಹಿಂದೆಯೇ ಕೋಮು ವಿಷ ಬೀಜ ಬಿತ್ತಿ ಕುರ್ಚಿ ಬೆಳೆಯುವ ಆಸೆಯಲ್ಲಿದ್ದ ಕಲ್ಲಡ್ಕನಂಥ 'ಮತೋನ್ಮತ್ತ'ರಿಗೆ


ರಘುಪತಿ


ಪ್ರಮೋದ್ ಮಧ್ವರಾಜ್

ಅಡಿಗಡಿಗೆ ಅನುಕೂಲ ಕಲ್ಪಿಸಿತು. ಇವತ್ತು ಅವಿಭಜಿತ ದಕ್ಷಿಣ ಕನ್ನಡದಲ್ಲೇನಾದರೂ ಬಿಜೆಪಿ ಸೈತಾನ ಶಕ್ತಿಯಾಗಿ ಬೆಳೆದಿದ್ದರೆ, ಅದು ಕಲ್ಲಡ್ಕ-ಪೇಜಾವರ ಪಡೆಯ ಪರಾಕ್ರಮದಿಂದಲ್ಲ, ಬದಲಿಗೆ ಕಾಂಗ್ರೆಸ್‌ನ ಆಸ್ಕರ್- ಮೊಯ್ಲಿ-ಪೂಜಾರಿ ಎಂಬ ಸೊಕ್ಕು ಪುಢಾರಿಗಳ ಮೃದು ಹಿಂದೂತ್ವದಿಂದಷ್ಟೇ.

ಈಗಾಗಿರುವ ಪಂಚಾಯ್ತಿ ಇಲೆಕ್ಷನ್‌ನಲ್ಲೂ ಯಥಾ ಪ್ರಕಾರ ಕಾಂಗ್ರೆಸ್‌ನ ಹೇತ್ಲಾಂಡಿ ಲೀಡರ್‌ಗಳ ದೌರ್ಬಲ್ಯ ಕೋಮುವಾದಿ ಚೆಡ್ಡಿ-ಕಾವಿ "ಲೋಕೋದ್ಧಾರಕ"ರ ಪ್ರಾಬಲ್ಯ ರಿಪೀಟಾಗಿದೆ. ಚುನಾವಣೆ ಎದುರಾದಾಗಲೂ ಮೊಯ್ಲಿ-ಆಸ್ಕರ್-ಪೂಜಾರಿ-ಸೊರಕೆ-ರಮಾನಾಥ್ ರೈ ಸಂಘಟಿತ ಹೋರಾಟ ಮಾಡಲಿಲ್ಲ. ಒಂದೆಡೆ ಕುಳಿತು ಸ್ಟ್ರೆಟಜಿ ಹೆಣೆಯಲಿಲ್ಲ. ತಂತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಬಿಡಿ, ಕನಿಷ್ಠ ಸ್ವತಾಲ್ಲೂಕುಗಳಲ್ಲೂ ವೈಯಕ್ತಿಕ ತಾಕತ್ತು ತೋರಿಸಲಿಕ್ಕೆ ಈ ದಿಲ್ಲಿ ಹೈಕಮಾಂಡ್ ಆಶ್ರಯಿತರಿಂದಾಗಿಲ್ಲ. ಉಡುಪಿ ಅಸೆಂಬ್ಲಿ ಕ್ಷೇತ್ರದಲ್ಲಿ ಯುವ ನಾಯಕ ಪ್ರಮೋದ್ ಮಧ್ವರಾಜ್, ಕಾರ್ಕಳದಲ್ಲಿ ಸಜ್ಜನ-ಜನಪರ ಶಾಸಕ ಗೋಪಾಲ ಭಂಡಾರಿ ಮಾಡಿದಂಥ ಪ್ರಾಮಾಣಿಕ ಪ್ರಯತ್ನ ಇನ್ನೆಲ್ಲಿಯೂ ನಡೆಯಲಿಲ್ಲ. ತಂತಮ್ಮ ಊರಲ್ಲೇ ನೆಲೆ-ಬೆಲೆ ಇಲ್ಲದ ಈ ಸ್ವಯಂಘೋಷಿತ ನಾಯಕರಿಗೆ ಕೋಮುವಾದಿ ಚೆಡ್ಡಿಗಳ ಬಣ್ಣ ಬಯಲಾಗಿಸಲಾಗಲಿ, ಯಡ್ಡಿ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರ ಎತ್ತಿಯಾಡಲಾಗಲಿ ಅದ್ಹೇಗೆ ಸಾಧ್ಯವಾದೀತು? ಪಾಪಿ ಬಿಜೆಪಿಗಳಿಗೆ ಜನರ ಬಲಿ ಪಡೆಯುವ ಪಾತಕ ರಾಜಕಾರಣಕ್ಕೆ ಕೊಳಕು ಕಾಂಗ್ರೆಸ್ಸಿಗರೇ ಟ್ರ್ಯಾಕ್ ಕ್ಲಿಯರ್ ಮಾಡಿಕೊಟ್ಟಂತಾಗಿತ್ತು.

ಈ ಕಾಂಗ್ರೆಸ್ ಮನೆಹಾಳರಿಗೆ ಬಿಜೆಪಿ ಗೆದ್ದರೂ ಪರವಾಗಿಲ್ಲ ತಮ್ಮ ಸ್ವಪಕ್ಷದ ಶತ್ರು ಅಳಿಯಬೇಕೆಂಬುದೇ ಪ್ರಮುಖ ಅಜೆಂಡಾ. ಉಡುಪಿಯಲ್ಲಿ ಸ್ವಯಂಘೋಷಿತ ಪುಣ್ಯವಂತರ ಪಾರ್ಟಿಯ ಶಾಸಕ ರಘುಪತಿ ಭಟ್‌ಗೆ ಹೆಂಡತಿ ಕೊಂದು ಪಾಪ ಸುತ್ತಿಕೊಂಡಿದ್ದು, ಆತನ ಜನವಿರೋಧಿ ಕೋಮು ಭಂಡಾಟವನ್ನೆಲ್ಲ ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ಚೆನ್ನಾಗಿ ಬಳಸಿಕೊಂಡು ಪ್ರಚಾರ ನಡೆಸಿದ್ದರು. ಜತೆಗೆ ಪ್ರಮೋದ್ ಅಸೆಂಬ್ಲಿಯಲ್ಲಿ ಸೋತರೂ ಜನಸಂಪರ್ಕದಿಂದ ವಿಮುಖನಾಗದೇ ಕೈಲಾದ ಸಹಾಯ-ಕೆಲಸ ಮಾಡುತ್ತಲೇ ಇದ್ದರು. ಇದು ಜಿಪಂ-ತಾಪಂ ಇಲೆಕ್ಷನ್‌ನಲ್ಲಿ ಫಲ ನೀಡಿದೆ. ಬಿಜೆಪಿಯ ಶಾಸಕ ಭಟ್ಟ ಲಕ್ಷ-ಲಕ್ಷ ಹರಿಸಿದರೂ ಪ್ರಮೋದ್‌ನ ಜಾದೂ ಎದುರು ಆತನಿಗೆ ತಲೆ ಎತ್ತಲಾಗಲಿಲ್ಲ. ನಾಲ್ಕು ಜಿಪಂ ಕ್ಷೇತ್ರದಲ್ಲಿ ಒಂದೇ ಒಂದು ಭಟ್ಟನಿಗೆ ದಕ್ಕದಂತೆ ಪ್ರಮೋದ್ ಕಾಂಗ್ರೆಸ್ ಬುಟ್ಟಿಗೆ ಹಾಕಿದ್ದಾರೆ. ಉಡುಪಿ ಅಸೆಂಬ್ಲಿ ಸೆಗ್ಮೆಂಟಿನ ತಾಪಂ ಕ್ಷೇತ್ರದಲ್ಲೂ ಸಾಧನೆ ಮಾಡಿದ್ದಾರೆ.

ಇಂಥ ನಾಯಕತ್ವದ ಗುಣಲಕ್ಷಣ ಇರುವ ಇನ್ನಿಬ್ಬರು ಕಾಂಗ್ರೆಸ್‌ನಲ್ಲಿದ್ದಾರೆ. ಒಬ್ಬ ಕಾರ್ಕಳದ ಸೌಮ್ಯ ಕೆಲಸಗಾರ ಗೋಪಾಲ ಭಂಡಾರಿ, ಇನ್ನೊಬ್ಬ ಮಾಜಿ ಮಂತ್ರಿ ಜಯಪ್ರಕಾಶ್ ಹೆಗ್ಡೆ. ಕೋಮುವಾದಿಗಳ ಕೌಂಟರ್ ಮಾಡುವುದರ ಜತೆ ಜನಪರವಾಗಿ ವರ್ತಿಸುವ ಮ್ಯಾನರ್ಸ್ ಇವರಿಗಿದೆ. ಇನ್ನುಳಿದ ಬೈಂದೂರಿನ ಗೋಪಾಲ ಪೂಜಾರಿ, ಕುಂದಾಪುರದ ಪ್ರತಾಪಚಂದ್ರ ಶೆಟ್ಟಿ (ಈತ ಕೆಲಸಕ್ಕೆ ಬಾರದ ಎಮ್ಮೆಲ್ಸಿ), ಕಾಪುದ ಕೆಟ್ಟನಾಲಿಗೆಯ ವಸಂತ ಸಾಲಿಯಾನ್, ಮೂಡಬಿದರೆ ಶಾಸಕ ದಗಲ್‌ಬಾಜಿಯ ಚಂದ್ರಜೈನ್, ಬಂಟ್ವಾಳದ ಎಡವಟ್ಟು ಶಾಸಕ ರಮಾನಾಥ್ ರೈ, ಪುತ್ತೂರಿನ ನರಿಯಣ್ಣ ವಿನಯಕುಮಾರ್ ಸೊರಕೆ, ಬೆಳ್ತಂಗಡಿಯ ನಿತ್ರಾಣಗೊಂಡಿರುವ ಶಾಸಕ ವಸಂತ ಬಂಗೇರಾ... ವಗೈರೆಗಳು, ವೇಸ್ಟ್‌ಬಾಡಿಗಳು. ಜಿಪಂ-ತಾಪಂನಲ್ಲಿ ಇವರೆಲ್ಲ ಗೆದ್ದಿರುವ 'ಸ್ಥಾನ' ಇವರ 'ಮಾನ' ಸಾಬೀತು ಪಡಿಸುತ್ತಿದೆ. ಉಳ್ಳಾಲದ ಶಾಸಕ ಯು.ಟಿ. ಖಾದರ್ ಎಂಬ ಕ್ರಿಯಾಶೀಲ ಯುವಕ ಕೊಂಚ ಪರವಾಗಿಲ್ಲ.

ಜಿಪಂ-ತಾಪಂ ಟಿಕೆಟ್ ಹಂಚಿಕೆಯಲ್ಲಿ ದ.ಕ. ಜಿಲ್ಲಾ
ಂಗ್ರೆಸ್ ಅಧ್ಯಕ್ಷ ರಮಾನಾಥ್ ರೈ ಎಂಬ ಜಡಭರತ
ಾರ ಮಾತೂ ಕೇಳದೆ ತನಗೆ ತೋಚಿದಂತೆ ಯದ್ವಾತದ್ವಾ
ಕೆಟ್ ಹಂಚಿದ್ದು ಬಿಜೆಪಿಗೆ ವರವಾಯ್ತು, ಮೊದಲೇ
ನ್ನೂ ಎರಡು-ಮೂರು ಇಲೆಕ್ಷನ್‌ಗೆ ಆಗುವಷ್ಟು ಕೋಮು
ಜಕಾರಣ ಈಗಲೇ ಮಾಡಿಟ್ಟಿರುವ ದಕ್ಷಿಣಕನ್ನಡದ ಚೆಡ್ಡಿ
ುರರ ಷಡ್ಯಂತ್ರ ಗೊತ್ತಿದ್ದೂ ಜಾಣ ಪೂಜಾರಿ, ರಮಾನಾಥ್
. ಸೊರಕೆ, ಮೊಯ್ಲಿ ಇಲ್ಲಿ ಎಡವಿದ್ದಾರೆ. ಇವರಿಗೆ
ಮಾಜಿಕ ನ್ಯಾಯ, ಪಾರ್ಟಿ ಹಿತ, ಸೆಕ್ಯೂಲರ್ ರಾಜಕಾರಣ
ತ ತಂತಮ್ಮ ವೈಯಕ್ತಿಕ ಈರ್ಷೆ-ದ್ವೇಷ-ಸ್ವಾರ್ಥವೇ ಮುಖ್ಯ
ಗಾಗಿ ಕಾಂಗ್ರೆಸ್ ಹಳ್ಳ ಹಿಡಿದಿದೆಯಿಲ್ಲಿ.

ಈ ಜಿ.ಪಂ.-ತಾ.ಪಂ.ನ ಗ್ರಾಮ ಸಮರದ ರಿಸಲ್ಟ್
ಂಗ್ರೆಸ್ಸಿಗರಿಗೆ ಮತ್ತು ಬಿಜೆಪಿಗೆ ಸ್ಪಷ್ಟ ಸಂದೇಶ ಒಂದನ್ನು
ಾನಿಸಿದೆ. ಕಾಂಗ್ರೆಸ್ಸಿಗರಿಗೆ ಕೆಲಸಕ್ಕೆ ಬಾರದ ಪೀಡೆಗಳಾದ
ಜಾರಿ-ಆಸ್ಕರ್-ಮೊಯ್ಲಿ-ರಮಾನಾಥ್ ರೈ, ಗೋಪಾಲ
ಜಾರಿ, ಪ್ರತಾಪ ಚಂದ್ರ ಶೆಟ್ಟಿ ವಗೈರೆಗಳಿಗೆ ಕಡ್ಡಾಯ
ೃತ್ತಿ ನೀಡಲು ಮತದಾರ ಆದೇಶಿಸಿದ್ದಾನೆ. ಇದನ್ನು
ಂಗ್ರೆಸ್ ಹೈಕಮಾಂಡ್ ಮತ್ತು ಕಾಂಗ್ರೆಸ್‌ನ ಸ್ಥಳೀಯ
ಡನೇ ಹಂತದ ಲೀಡರ್‌ಗಳು ಗಂಭೀರವಾಗಿ ಪರಿಗಣಿಸ
ದ್ದರೆ ಕಾಂಗ್ರೆಸ್‌ಗೆ ಉಳಿಗಾಲವಿಲ್ಲ. ಹಾಗೇ ಬಿಜೆಪಿಗೂ
ದು ಪಾಠ ಮತದಾರರು ಕಲಿಸಿದ್ದಾರೆ. ನೈತಿಕತೆ, ಜನಪರ
ೀರಣೆಯಿಲ್ಲದ ರಕ್ತಪಿಪಾಸು ರಾಜಕಾರಣದಿಂದ ಬಹಳ
ಅಧಿಕಾರ ಹಿಡಿದಿಟ್ಟುಕೊಳ್ಳಲಾಗದು. ಈಗ
ರುವುದು ಕಾಂಗ್ರೆಸಿಗರ ದೌರ್ಬಲ್ಯದ ಲಾಭವೇ ಹೊರತು
ಮನ್ನಣೆ ಅಲ್ಲ ಎಂದು ಮತದಾರ ಹೇಳಿದ್ದಾನೆ.

ಇದಕ್ಕೆ ದಕ್ಷಿಣ ಕನ್ನಡ 'ಗೊಳ್ತ ಮಜಲು' ಮತ್ತು
ಡುಪಿ ಜಿಲ್ಲೆಯ ಪ್ರಾಪರ್ ಉಡುಪಿ ಕ್ಷೇತ್ರದ ಫಲಿತಾಂಶವೇ
. ಈ 'ಗೊಳ್ತ ಮಜಲು' ಬಂಟ್ವಾಳ ತಾಲ್ಲೂಕಿನ
ಂ ಕ್ಷೇತ್ರ. ಇದರಲ್ಲಿ ಕಲ್ಲಡ್ಕರಂಥ ಕಮ್ಯುನಲ್ ಸೆನ್‌ಸೇಟಿವ್
ೇಶದಿಂದ ಕರಾವಳಿಯ ಆರ್‌ಎಸ್‌ಎಸ್ ಡಾನ್ ಕಲ್ಲಡ್ಕ
ಾಕರ ಭಟ್ಟರ ಹೋಮ್ ಕಾನ್‌ಸ್ಟುಯೆನ್ಸಿ ಬೇರೆ. ಇಲ್ಲಿ
ಜೆಪಿ ಸೋತಿದ್ದೇ ಇಲ್ಲ. ಜಿಲ್ಲಾ ಪಂಚಾಯ್ತಿಯ ಎಲ್ಲ
ದಲ್ಲಿ 34 ಕಾಂಗ್ರೆಸ್ ಪಡೆದಿದ್ದ ದಿನದಲ್ಲೂ ಇಲ್ಲಿ
ಜೆಪಿಯೇ ದರ್ಬಾರ ನಡೆಸಿತ್ತು. ಇಲ್ಲಿಂದ ಗೆದ್ದಿದ್ದ ಚೆಡ್ಡಿ
ಂ ಸದಸ್ಯ-ಹಾಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಪದ್ಮನಾಭ
ಟ್ಟಾರಿ ಎಂಬ 'ಗೊಳ್ತ' ದರ್ಜಿ ಮುಂದೆ ಶಾಸಕನೂ
ದ್ದ. ಆದರೆ ಈ ಬಾರಿ ಮಾಜಿ ಭೂಗತ ಡೀವಿ
ೇಶ್ ಮಲ್ಲಿ ತಂದೆ, ಮಾಜಿ ಜಿಪಂ ಸದಸ್ಯ ಸದಾನಂದ
ಲ್ಲಿ ಕಾಂಗ್ರೆಸ್‌ನಿಂದ ನೆಗೆದು ಬಿಜೆಪಿಯಿಂದ ಸ್ಪರ್ಧಿಸಿ
ಳ್ತಮಜಲಿನಲ್ಲಿ ಸೋತಿದ್ದಾರೆ. ಭಾರೀ ವಿರೋಧದ
ುವೆಯೂ ಮಲ್ಲಿಗೆ ಟಿಕೆಟ್ ಕೊಟ್ಟಿದ್ದ ಕಲ್ಲಡ್ಕ ಭಟ್ಟಂಗಿದು
ಗಳೇ ಮಾಡಿರುವ ಮುಖಭಂಗ. ಕೋಮು
ಲೇರಿಸಿ ಏನೇ ಮಾಡಿದರೂ ನಡೆಯುತ್ತದೆಂಬ ಧೂರ್ತ
ೀಚನೆಯ ಭಟ್ಟ ಕೋಮುವಾದ ಕಿತಾಪತಿಗೆ ಜನ
ಟ್ಟಿರುವ ಎಚ್ಚರಿಕೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ. ಬಿಜೆಪಿ
ಪಾನಕ್ಕೆ ಇದೇ ಗೊಳ್ತಮಜಲು ಬೀಜವಾದೀತಾ?

ಹಾಗೆಯೇ ಉಡುಪಿಯಲ್ಲಿ ಶಾಸಕ ಭಟ್ಟನ ಪಾಪದ
ವೇ ಕೋಮು ಪುಣ್ಯಕ್ಕಿಂತ ಹೆಚ್ಚಿರುವುದು ಸಾಬೀತಾಗಿದೆ.
ುಪಿಯ 25 ಜಿಪಂ ಕ್ಷೇತ್ರದಲ್ಲಿ ಬಿಜೆಪಿ 16 ಕಡೆ
ದೆ. ಆದರೆ ಭಟ್ಟನಿಗೆ ತನ್ನ ಕ್ಷೇತ್ರದಲ್ಲಿ ಒಂದೇ ಒಂದು
ು ಗೆಲ್ಲಿಸಲಾಗಲಿಲ್ಲ. ತಾ.ಪಂ.ನಲ್ಲಿ ಬಿಜೆಪಿ ಅಧಿಕಾರ
ದರೂ ಉಡುಪಿಯ ಅಸೆಂಬ್ಲಿ ಕ್ಷೇತ್ರದಲ್ಲಿ ಭಟ್ಟನ
ಡಾಟದಿಂದ ಕುಸಿದಿದೆ. ಈ ಭ್ರಷ್ಟ
ಬಾಬ್ದಾರಿ-ಕಚ್ಚೆಹರುಕ ಭಟ್ಟನಿಗೆ ಜನ ಅದೆಂಥ ಪಾಠ
ದ್ದಾರೆಂಬುದಕ್ಕೆ 'ಕೊಕ್ಕರ್ಣೆ' ತಾಪಂ ಕ್ಷೇತ್ರ ಫಲಿತಾಂಶ
ಹೇಳುತ್ತಿದೆ. ಡಾ. ಸುನೀತಾ ಶೆಟ್ಟಿ ಎಂಬ ಜನಪರ
ತದು ಅಭಿವೃದ್ಧಿ ಮೆಂಟಾಲಿಟಿಯ ಹೆಂಗಸಿನ ವಿರುದ್ಧ
ಕಳ್ಳ ಸಾಗಾಣಿಕೆದಾರ ಆದರ್ಶ ಶೆಟ್ಟಿ ಎಂಬಾತನನ್ನು
ಅಖಾಡಕ್ಕೆ ಇಳಿಸಿದ್ದ. ಕಳ್ಳ ದುಡ್ಡು ಭಟ್ಟ ಶೆಟ್ಟಿ
ತಿಯೇ ಹರಿಸಿದ್ದರು. ಲಕ್ಷಾಂತರ ರೂ. ಖರ್ಚು
ದಿದರೂ ಸುನಿತಾ ಶೆಟ್ಟಿ ಮತ್ತಾಕೆಯ ಗಂಡ ಕೆಂಜೂರು
ಾನಂದ ಶೆಟ್ಟಿಯ ಶುದ್ಧ ಚಾರಿತ್ರ್ಯದ ಎದುರು ನಿಲ್ಲಲಿಕ್ಕೇ
ಲ್ಲ. ಶಾಸಕತ್ವ ಅಧಿಕಾರವನ್ನೆಲ್ಲಾ ಬಳಸಿ ಈ ತಾಪಂ
ದ ಇಲೆಕ್ಷನ್ ಪ್ರತಿಷ್ಠೆಯಾಗಿ ಸ್ವೀಕರಿಸಿದ್ದ ಭಟ್ಟನ ಅಸಲಿ
ಾರ ಅನಾವರಣ ಆಗಿದೆ. ಕಳ್ಳರ-ಕೋಮುವಾದಿಗಳ
ಗರ್ಲ್‌ಗಳ ಗೆಳೆಯ ಭಟ್ಟನೆಂಬುದು ಜನರಿಗೀಗ
ಯಾಗಿ ಹೋಗಿದೆ. ಒಂದಂತೂ ಖರೆ. ಕಾಂಗ್ರೆಸ್‌ನ
ಕೈ ಬಾರದ -ಹಳೆ ಅಲಿಗಳನ್ನು ರಿಟೈರ್ ಮಾಡಿಸಿ
ಬರ್ ಯುವಕರ ಕೈಗೆ ಕಾಂಗ್ರೆಸ್ ಕೊಟ್ಟರೆ ಬಿಜೆಪಿಯ
ೂತ್ಸವ ಅಟ್ಟಹಾಸ ತಂತಾನೆ ಕಮ್ಮಿಯಾಗುತ್ತದೆಂಬುದನ್ನು
ಳಿಯ ಪಂಚಾಯ್ತಿ ಫೈಟಿಂಗ್ ಸಾಬೀತು ಮಾಡಿದೆ.
ರಾಳಿಯ ದೌರ್ಬಲ್ಯದಿಂದ ಬಿಜೆಪಿ ಮೆರೆಯುತ್ತಿದೆಯೇ
ತು ಅದಕ್ಕೆ ಜನಮನ್ನಣೆ ಇಲ್ಲವೆಂಬುದೂ ಸಾಬೀತಾಗಿದೆ.
ಮುಶಕ್ತಿ ಬಿಟ್ಟರೆ ಸಂಸದ ಸದಾನಂದ ಗೌಡ, ನಳಿನ
ು, ಇನ್ನಿತರ ಚೆಡ್ಡಿ ಶಾಸಕರು ದೊಡ್ಡಸೊನ್ನೆ ಎಂಬುದೂ
ಯಾಗಿದೆ. ಜಿಲ್ಲೆಯ ಹಿತಕ್ಕಾಗಿ-ಇಷ್ಟು ದಿನ
ರ-ಅಂತಸ್ತು ಕಂಡಿರುವ ಮೊಯ್ಲಿ-ಪೂಜಾರಿ-ಆಸ್ಕರ್-
ನಾಥ್ ರೈ, ಸೊರಕೆ, ಗೋಪಾಲ ಪೂಜಾರಿ-ಪ್ರತಾಪ
, ಶೆಟ್ಟಿ ಸ್ವಯಂ ವಿಆರ್‌ಎಸ್ ತೆಗೆದುಕೊಳ್ಳುವರಾ?
ಶಾವಿ-ಚೆಡ್ಡಿಗಳ ಕುರ್ಚಿಕಾರಣ, ಧರ್ಮಕಾರಣದಿಂದ
ನ್ನರುವ ಅವಿಭಜಿತ ದಕ್ಷಿಣ ಕನ್ನಡಿಗರ ಗೋಳಿನ
ಾಡು!!

ಮಂಡ್ಯ: ಮೆರೆದ ಜಾತಿ ರಾಜಕೀಯ
ಅಳಿದ ಯಡ್ಡಿ ಮಾನ!

ಹಳೆ ಮೈಸೂರು ಪ್ರಾಂತ್ಯದ ಮಂಡ್ಯದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಮತ್ತೊಮ್ಮೆ ಜಾತಿ ರಾಜಕೀಯ ಮೇಲುಗೈ ಸಾಧಿಸಿದೆ. ಹಳೆಯ ಮೈಸೂರು ಪ್ರಾಂತ್ಯದಲ್ಲಿ ಬಿಜೆಪಿ ತನ್ನ ನೆಲೆ ಕಂಡುಕೊಂಡು ತಳವೂರುವ ಪ್ರಯತ್ನದಲ್ಲಿ ನಡೆಸಿದ ಅಕ್ರಮಗಳು, ಹರಿಸಿದ ಹಣದ ಹೊಳೆ ಎಲ್ಲವೂ ಹೊಳೆಯಲ್ಲಿ ಹುಣಸೆಹಣ್ಣು ತೇಯ್ದಂತಾಗಿದೆ. ಮಂಡ್ಯ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಖಾತೆಯನ್ನು ತೆರೆದೇ ತೀರುತ್ತೇವೆಂದು ಕಿರುಚಿಕೊಳ್ಳುತ್ತಿದ್ದ ಸಿಎಂ ಯಡ್ಡಿ, ಉಸ್ತುವಾರಿ ಸಚಿವ ಆರ್.ಅಶೋಕ್ ಮತ್ತು ಡಿಫ್ಯಾಕ್ಟೋ ಉಸ್ತುವಾರಿ ಮಂತ್ರಿ ಶಾಸಕ ಅಶ್ವಥನಾರಾಯಣ ಗೌಡರಾದಿಯಾಗಿ ಎಲ್ಲರಿಗೂ ಮುಖಭಂಗವಾಗಿದೆ.



ಅಂಬರೀಶ್

ಚುನಾವಣಾ ಪ್ರಚಾರಕ್ಕೆ ಸಾಕ್ಷಾತ್ ಸಿಎಂ ಯಡಿಯೂರಪ್ಪನವರೇ ಖುದ್ದು ಮಂಡ್ಯಕ್ಕೆ ಧಾವಿಸಿ 'ಮಂಡ್ಯ ನನ್ನ ತವರು ಜಿಲ್ಲೆ, ನನ್ನ ಗೆಲುವಿನ ಯಾತ್ರೆ ಇಲ್ಲಿಂದಲೇ ಶುರುವಾಗಬೇಕು' ಎಂದೆಲ್ಲಾ ಬೇಡಿಕೊಂಡರೂ ಈ ಬಾರಿ ಜಿಲ್ಲಾ ಪಂಚಾಯತ್‌ನಲ್ಲಿ ಒಬ್ಬೇ ಒಬ್ಬ ಸದಸ್ಯನನ್ನೂ ಆಯ್ಕೆಮಾಡದೆ, ಕನಿಷ್ಠ ಖಾತೆಯನ್ನೂ ಸಹ ತೆರೆದುಕೊಳ್ಳಲಾಗಿಲ್ಲ. ಅದರಲ್ಲೂ ಕಳೆದ ಎಮ್ಮೆಲ್ಲೆ ಚುನಾವಣೆಯಲ್ಲಿ ಜೆಡಿಎಸ್‌ನ ಶಾಸಕ ಎಂ.ಶ್ರೀನಿವಾಸ್ ವಿರುದ್ಧ ಬಿಜೆಪಿ ಕ್ಯಾಂಡಿಡೇಟ್ ಆಗಿ ಸೋತಿದ್ದ ವಿದ್ಯಾ ನಾಗೇಂದ್ರರನ್ನ ಗೆಲ್ಲಿಸಿಕೊಂಡು ಮರ್ಯಾದೆಯನ್ನ ಉಳಿಸಿಕೊಳ್ಳಲು ಪಟ್ಟಪಾಡು ಅಷ್ಟಿಷ್ಟಲ್ಲ.

ಜಿಪಂ ತಾಪಂ ಫಲಿತಾಂಶ

ಕಾಂಗ್ರೆ ತನ್ನೆಲ್ಲಾ ಶಕ್ತಿ ಪ್ರದರ್ಶನ ಮಾಡಿ ಹರೆಯದ-ಮುದಿಯ ನಾಯಕರನ್ನ ಸೇರಿಸಿ, ಅವರನ್ನೆಲ್ಲ ಕರೆಸಿ ಪ್ರಚಾರ ಮಾಡಿದರೂ ಸಹ ಎರಡನೆಯ ಸ್ಥಾನಕ್ಕಷ್ಟೇ ಸೀಮಿತವಾಗಿದೆ. ಕಾಂಗ್ರೆನಿಂದ ಬಿ ಫಾರಂ ಪಡೆದಿದ್ದ ಅಂಬರೀಶರ ಪರಮಶಿಷ್ಯ ಹನಕೆರೆ ಶಶಿ ತನ್ನ ಹೆಂಡತಿಯನ್ನೇ ನಾಮಿನೇಷನ್ ಮಾಡದೆ ಬಿಜೆಪಿಗೆ ಸಹಾಯ ಮಾಡಲು ಯತ್ನಿಸಿದ. ಇದು ಕಾಂಗ್ರೆಸ್‌ನ ಸ್ಥಿತಿ. ವಿದ್ಯಾ ತನ್ನ ಗಂಡ ದಿವಂಗತ ಸಾರಾಯಿ ನಾಗಣ್ಣ ಮಾಡಿಟ್ಟ ಹಣವನ್ನೆಲ್ಲಾ ಹಂಚಿದರೂ ಸಹ ಗೆಲ್ಲಲಾಗಲೇ ಇಲ್ಲ. ಇದಕ್ಕೆ ಕಾರಣ ನಾಗೇಂದ್ರನ ಸಹೋದರ ಹೆಚ್.ಪಿ.ಮಹೇಶ್ ತನ್ನ ಅತ್ತಿಗೆಯನ್ನೇ ಸೋಲಿಸಿ ತಾನು ಮುಂದಿನ ಎಮ್ಮೆಲ್ಲೆ ಕ್ಯಾಂಡಿಡೇಟ್ ಆಗುವ ಕನಸು ಕಾಣುತ್ತಿದ್ದಾನೆ ಎಂದು ಬಿಜೆಪಿಯೊಳಗಿರುವ ಗುಸುಗುಸು.


ಅಂಬರೀಶ್ ವಿರುದ್ಧ ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯರ ಸರಣಿ ಪತ್ರಿಕಾಗೋಷ್ಠಿಗಳು ಈ ಬಾರಿಯ ಚುನಾವಣೆಗಳಲ್ಲಿ ಜನರಿಗೆ ಮನರಂಜನೆ ನೀಡಿದವು. ಅಷ್ಟು ಮಾತ್ರವಲ್ಲ, ಮಾಜಿ ಕೇಂದ್ರ ಸಚಿವ, ಮೂರು ಬಾರಿ ಸಂಸದನಾಗಿ ಮೆರೆದಿದ್ದ ಅಂಬಿಗೆ ಕಳೆದ ಎಮ್ಮೆಲ್ಲೆ ಚುನಾವಣೆಯಲ್ಲೇ ಸರಿಯಾಗಿ ಮುಖಭಂಗವಾಗಿತ್ತು. ಈಗ ಜಿಪಂ ಮತ್ತು ತಾಪಂ ಚುನಾವಣೆ ಫಲಿತಾಂಶವೂ ಅಂಬರೀಷ್‌ಗೆ ಮುಟ್ಟಿ ನೋಡಿಕೊಳ್ಳುವಂತೆ ಮಾಡಿದೆ. ರವೀಂದ್ರ ತನ್ನ ಶಕ್ತಿಯನ್ನೆಲ್ಲಾ ಹಾಕಿ, ಹಾಲಿ ಶಾಸಕ ರಮೇಶ್‌ಬಾಬುವಿನ ಹುಟ್ಟೂರು ಅರಕೆರೆಯಲ್ಲಿ ರಾಮೇಗೌಡನ್ನು ಜಿಪಂಗೂ, ನಾಲ್ಕು ತಾಪಂ ಸದಸ್ಯರನ್ನ ಪಕ್ಷೇತರ ಅಭ್ಯರ್ಥಿಗಳಾಗಿ ಗೆಲ್ಲಿಸಿಕೊಂಡಿದ್ದಾರೆ. ಇದು ಅಂಬಿಗೂ ಮತ್ತು ಮುಂದಿನ ಎಮ್ಮೆಲ್ಲೆಯಾಗುವ ಕನಸು ಕಾಣುತ್ತಿರುವ ರಸ್ತೆ ದರೋಡೆಕೋರ ಅಶೋಕ್ ಖೇಣಿಯ 'ಬಾಲ'ಕ ಸಚ್ಚಿಗೆ ಸರಣೀ ಮುಖಭಂಗವನ್ನು ಮತ್ತೊಮ್ಮೆ ಮಾಡಿದೆ. ಹಾಗಾಗಿ ಎಂಪಿಯಾಗಲಿಕ್ಕಾಗದ, ಎಂಎಲ್‌ಎನೂ ಆಗಲಿಕ್ಕಾಗದ ಮಾಜಿ ಕೇಂದ್ರ ಸಚಿವ, ಮಂಡ್ಯದ ಗಂಡು ಅಂಬರೀಷ್ ಈಗ ಪಂಚಾಯತ್ ಲೆವೆಲ್‌ನಲ್ಲೂ ಸೋತಂತಾಗಿದೆ.


ಪುಟ್ಟಣ್ಣಯ್ಯ


ಜೆಡಿಎಸ್‌ಅನ್ನ ಸಮಾನ ಶತ್ರು ಎಂದು ಪರಿಗಣಿಸಿರುವ ರೈತ ಸಂಘ ಯಾವ ಅಳುಕೂ ಇಲ್ಲದೆ ಕಾಂಗ್ರೆ ಜೊತೆ ಬಹಿರಂಗವಾಗಿ ಹೊಂದಾಣಿಕೆ ಮಾಡಿಕೊಂಡಿತು. ಅಂಬರೀಷ್ ಜೊತೆ ಬಹಿರಂಗ ಪ್ರಚಾರದಲ್ಲೂ ಭಾಗವಹಿಸಿದ ಪುಟ್ಟಣ್ಣಯ್ಯ ಇದು ರೈತಸಂಘಕ್ಕೆ ಅನಿವಾರ್ಯವಾಗಿತ್ತು ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಅದು ಪಾಂಡವಪುರದಲ್ಲಿ ಜಿಪಂನ ಕೆಂಪೂಗೌಡನನ್ನ ಗೆಲ್ಲಿಸಿಕೊಳ್ಳುವ ಮತ್ತು ತಾಪಂನಲ್ಲಿ ಜೆಡಿಎಸ್‌ಗೆ ಅಧಿಕಾರ ಕೈತಪ್ಪುವ ಮಟ್ಟಿಗೆ ವರ್ಕ್‌ಔಟ್ ಆಗಿದೆ. ಆದರೆ ಮುಂದಿನ ದಿನಗಳಲ್ಲಿ ರೈತಸಂಘದ ಕಾರ್ಯಕರ್ತರು ಕಾಂಗ್ರೆಸ್‌ನ ಕಾರ್ಯಕರ್ತರಾಗಲು ಇದು ಹೆಬ್ಬಾಗಿಲು ತೆರೆದಿದೆ ಎಂಬುದನ್ನು ಅವರು ಅರ್ಥ ಮಾಡಿಕೊಂಡಂತಿಲ್ಲ. ಇದು ರೈತಸಂಘವನ್ನು ಕಾಂಗ್ರೆ ಜೊತೆ ವಿಲೀನ ಮಾಡಿದರೆ ಮುಂದಿನ ಚುನಾವಣೆಯಲ್ಲಿ ಪುಟ್ಟಣ್ಣಯ್ಯ ಸಿ.ಎಸ್.ಪುಟ್ಟರಾಜು ವಿರುದ್ಧ ಗೆಲ್ಲಬಹುದು ಅಂತೆಲ್ಲಾ ವ್ಯಂಗ್ಯವಾಡುತ್ತಿರುವುದರ ಮಟ್ಟಿಗೆ ತಲುಪಿದೆ.

ಮಾಜಿ ಸಿಎಂ, ಹಾಲಿ ಕೇಂದ್ರ ಸಚಿವ ಎಸ್.ಎಂ.ಕೃಷ್ಣ ಮಂಡ್ಯಕ್ಕೆ ಬಂದು ಬಹಿರಂಗ ಭಾಷಣ ಮಾಡಿದ್ದು ಬಿಟ್ಟರೇ ಮತ್ತೆ ಹಿಂತಿರುಗಿಯೂ ನೋಡಲಿಲ್ಲ. ತನ್ನ ಮಗ ಮಧುನನ್ನು ಬಿಜೆಪಿಯಿಂದ ಎಮ್ಮೆಲ್ಸಿ ಮಾಡಿ ಮತ್ತೆ ಕಾಂಗ್ರೆ ಜೊತೆ ಕೂಡಾವಳಿ ಮಾಡಿಕೊಂಡ ಮಾಜಿ ಸಂಸದ ಹಾಲಿ ಗಾಂಧಿವಾದಿ ಜಿ. ಮಾದೇಗೌಡ, ಮಾಜಿ ಸಚಿವ ಆತ್ಮಾನಂದರಾದಿಯಾಗಿ ದೊಡ್ಡ ನಾಯಕರೆಲ್ಲಾ ಬಹಿರಂಗವಾಗಿ ಒಂದಾದಂತೆ ಕಾಣಿಸಿಕೊಂಡರೂ ಸಹ ಅದು ಮದ್ದೂರು ತಾಲ್ಲೂಕಿನಲ್ಲಷ್ಟೇ ಪ್ರಭಾವ ಬೀರಿದ್ದು ಬಿಟ್ಟರೆ ಮಿಕ್ಕೆಲ್ಲಾ ಕಡೆ ಇವರಿಂದೇನು ಗಿಟ್ಟಿಲ್ಲ.

ಅಂಬರೀಷ್‌ರ ಸಕಲ ಗುಣಗಳನ್ನೂ ಹೊತ್ತಿರುವ ಅವರ ಪರಮಶಿಷ್ಯ ಎಚ್.ಬಿ.ರಾಮು ಕಳೆದ ಚುನಾವಣೆಯಲ್ಲಿ ಆಶ್ಚರ್ಯಕರವಾಗಿ ಜೆಡಿಎಸ್ ಸೇರಿದ್ದರು.


ಮಹೇಶ್


ಅಂಬರೀಷ್‌ಗೆ ಟಿಕೆಟ್ ಅನುಮಾನ ಇದ್ದುದರಿಂದ ಸೇರಿಕೊಂಡಿದ್ದಾರೆ ಅಂದುಕೊಂಡಿದ್ದವರ ಮಾತು ಸುಳ್ಳಾಗುವಂತೆ, ಅಂಬಿಗೇ ಟಿಕೆಟ್ ಸಿಕ್ಕಾಗಲೂ ಆತ ವಾಪಸ್ ಬರಲಿಲ್ಲ. ಆದರೆ ಈ ಸಾರಿ ಇದ್ದಕ್ಕಿದ್ದಂತೆ ಒಂದು ದಿನ ಬೆಳಗ್ಗೆ ಅಂಬರೀಷ್ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು. ಆದರೆ ಅದೇ ದಿನ ಸಂಜೆ ಮತ್ತೆ ರಾಮು ಜೆಡಿಎಸ್‌ಗೆ ಹಿಂತಿರುಗಿದರು!


ಚಲುವರಾಯ

ಪಕ್ಷೇತರನಾಗಿ ಗೆದ್ದು ಬಿಜೆಪಿಗೆ ಬೆಂಬಲಿಸಿ ಸಚಿವನಾಗಿ, ನಂತರ ನಾಟಕೀಯವಾಗಿ ಜೆಡಿಎಸ್ ಜೊತೆ ಕಾಣಿಸಿಕೊಂಡು ಶಾಸಕ ಸ್ಥಾನದಿಂದಲೇ ಅನರ್ಹಗೊಂಡ ಮಳವಳ್ಳಿಯ ನರೇಂದ್ರಸ್ವಾಮಿ ಬೆಂಬಲಿಗರಿಗೆ ಕಾಂಗ್ರೆ ಟಿಕೆಟ್ ಕೊಟ್ಟದ್ದು ಹಲವರಿಗೆ ಆಶ್ಚರ್ಯವನ್ನುಂಟುಮಾಡಿತ್ತು. ಇದರಿಂದ ಕಾಂಗ್ರೆಸ್ ತಾಲೂಕು ಪಂಚಾಯತಿಯ ಅಧಿಕಾರದ ಗದ್ದುಗೆಯ ಸಮೀಪಕ್ಕೆ ಬಂದು ನಿಂತಿದೆ. ಮಾಜಿ ಶಾಸಕ ಅನ್ನದಾನಿ ಜೆಡಿಎಸ್‌ನಿಂದ ಜಾಕ್ರಿಯಾ ಖಾನ್ ಎಂಬ ಮುಸ್ಲಿಂ ವ್ಯಕ್ತಿಯನ್ನು ಜಿಪಂ ಪ್ರವೇಶ ಮಾಡಿಸಿರುವುದರ ಜೊತೆಗೆ ಜೆಡಿಎಸ್ ಹೆಚ್ಚುಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದರೂ ತಾಪಂ ತಪ್ಪಿಸಿಕೊಂಡು ಕೈ ಪಾಲಾಗಿದೆ.


ವಿದ್ಯಾ

ರಾಜ್ಯದ ಸಿಎಂ ಯಡ್ಡಿಯವರ ತವರೂರಿರುವ ಕಡೆಯಾದರೂ ಒಂದು ಜಿಪಂ ಖಾತೆಯನ್ನಾದರೂ ತೆರೆಯಲಾಗಿಲ್ಲ. ಅವರ ಹುಟ್ಟೂರು ಬೂಕನಕೆರೆಯಲ್ಲಿ ಬಿಜೆಪಿಯದ್ದು ಮೂರನೇ ಸ್ಥಾನ. ಆದ್ದರಿಂದಲೇ ಬಿಜೆಪಿಯ ನಾಯಕರುಗಳು ನಾಪತ್ತೆಯಾಗಿದ್ದಾರೆನ್ನುವ ಸುದ್ದಿಯಿದೆ. ಇದು ಕಾಂಗ್ರೆನ ಹಾಲಿ ಜಿಲ್ಲಾಧ್ಯಕ್ಷ ಕೆ.ಆರ್.ಪೇಟೆಯ ಶಾಸಕ ಚಂದ್ರಶೇಖರ್ ಇದ್ದೂ ಇಲ್ಲದಂತಾಗಿ ಜೆಡಿಎಸ್‌ನ ಕ್ಯಾಂಡಿಡೇಟ್‌ಗಳನ್ನ ಗೆಲ್ಲಿಸಿಕೊಂಡು ಮಾಜಿ ಸ್ಪೀಕರ್ ತನ್ನ ಅಸ್ತಿತ್ವ ಉಳಿಸಿಕೊಂಡಿದ್ದಾರೆ.



ಎಂ.ಶ್ರೀನಿವಾಸ್

ಸಂಸದ ಚಲುವರಾಯಸ್ವಾಮಿಯವರ ತವರು ಕ್ಷೇತ್ರ ನಾಗಮಂಗಲದಲ್ಲಿ ಜೆಡಿಎಸ್- ಕಾಂಗ್ರೆಸ್‌ಗಳು ಪಾಲು ಹಂಚಿಕೊಂಡಿವೆ. ಇಲ್ಲಿನ ಪುರಾತನ ನಾಯಕ ಶಿವರಾಮೇಗೌಡ ಬಿಜೆಪಿಗೆ ಒಂದು ಜಿಪಂ ಸೀಟನ್ನೂ ಗೆಲ್ಲಿಸಲಾಗಿಲ್ಲ. ತಾಲೂಕು ಪಂಚಾಯತಿ ಜೆಡಿಎಸ್ ಪಾಲಾಗಿದೆ.

ಯಡ್ಡಿಯ ವಿರುದ್ಧ ಕುಮಾರಸ್ವಾಮಿ ಸೆಟೆದು ನಿಂತಿದ್ದು, ಗ್ರಾಮಾಂತರ ಭಾಗದ ಒಕ್ಕಲಿಗರಿಗೆ ಬಿಜೆಪಿಯ ವಿರುದ್ಧ ಸ್ಪಷ್ಟ ನಿಲುವು ತಳೆಯಬೇಕಾದ ಸಿಗ್ನಲ್ಲುಗಳನ್ನು ರವಾನಿಸಿದೆ ಎನ್ನಲಾಗುತ್ತಿದೆ. ಆ ರೀತಿಯಲ್ಲಿ ಇದು ಜಾತಿ ರಾಜಕೀಯಕ್ಕೆ ಅನುಸಾರವಾಗಿ ನಡೆದ ಚುನಾವಣೆಯೇ ಆಗಿದೆ. ಇನ್ನು ಎಸ್.ಎಂ.ಕೃಷ್ಣ ಮತ್ತು ಮಾದೇಗೌಡರ ಬೆಂಬಲವನ್ನೂ ಹೊತ್ತುಕೊಂಡು ಚುನಾವಣೆಯ ಉಸ್ತುವಾರಿ ತೆಗೆದುಕೊಂಡಿದ್ದ ಅಂಬರೀಷ್ ಹೆಚ್ಚಿನದ್ದೇನನ್ನೂ ಸಾಧಿಸಲಾಗಿಲ್ಲ. ಇದು ಈ ಸಾರಿಯ ಮಂಡ್ಯ ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ಹೊರಗಿಟ್ಟಿರುವ ಸಂಗತಿಗಳಾಗಿವೆ.

• ಲಕ್ಷ್ಮಣ್

ಜಿಪಂ–ತಾಪಂ ಸೋತರೂ ಗೆದ್ದ ಯಡ್ಡಿ




ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಯ ಫಲಿತಾಂಶದ ಬಳಿಕ ಮುಖ್ಯಮಂತ್ರಿ ಯಡಿಯೂರಪ್ಪನ 'ತಲೆದಂಡ' ಖಂಡಿತ ಎಂಬುದು ಬಿಜೆಪಿ ಭಿನ್ನಮತೀಯ ಶಾಸಕರ ನಂಬಿಕೆಯಾಗಿತ್ತು. ಆದರೆ ಯಡ್ಡಿಯ "ಫಲಿತಾಂಶ ಬಂದನಂತರ ಭಿನ್ನಮತೀಯರನ್ನು ನಮ್ಮ ನಾಯಕ ಯಡ್ಡಿ ಹಿಸುಕಿಹಾಕುತ್ತಾರೆ ನೋಡಿ" ಎಂದೇ ಅಬ್ಬರಿಸುತ್ತಿದ್ದರು. ಹೀಗೆ ಎರಡೂ ಬಣಗಳ ವಿಭಿನ್ನ ವರಸೆ ಮಾತುಗಳನ್ನು ಕೇಳಿ ಫಲಿತಾಂಶ ಬಂದ ನಂತರ 'ಬಿಜೆಪಿ ಪಕ್ಷಕ್ಕೇ ಆಪರೇಷನ್' ಆದರೂ ಆಗಬಹುದು ಎಂಬುದೇ ಹಲವರ ನಿರೀಕ್ಷೆಯಾಗಿತ್ತು. ಈ ಮಧ್ಯೆ ಪಕ್ಷದೊಳಗೆ ಯಡ್ಡಿ ರೆಬೆಲ್‌ಸ್ಟಾರ್ ಮಾದರಿಯಲ್ಲಿ ಹೈಕಮಾಂಡ್‌ಗೆ ಎದುರು ನಿಂತಿದ್ದರಿಂದ ತತ್ತರಿಸಿದ್ದ ದೆಹಲಿ ನಾಯಕರು ಕೂಡಾ ಈ ಚುನಾವಣೆಯ ಫಲಿತಾಂಶಕ್ಕಾಗಿ ಕಾದು ಕುಳಿತಿದ್ದರು.

ಆದರೆ ಚುನಾವಣಾ ಫಲಿತಾಂಶ ಬಿಜೆಪಿಯ ನಾಯಕರಿಗೆ, ದೆಹಲಿ ನಾಯಕರಿಗೆ, ಭಿನ್ನ ಮತೀಯರಿಗೆ, ಪಕ್ಷದೊಳಗಿನ ತುಂಡು ನಾಯಕರಿಗೆ .... ಹೀಗೆ ಎಲ್ಲರಿಗೂ ನಿರಾಶೆ ತಂದಿಟ್ಟಿದೆ. ಒಮ್ಮೆ ಫಲಿತಾಂಶ ಬಂದನಂತರ 'ಸಮರ ಸಿದ್ಧ' ಎಂದೇ ಭಾವಿಸಿದ್ದ ಎಲ್ಲರೂ ಈಗ ತಮ್ಮ ಅಸ್ತ್ರಗಳನ್ನು ಅಡಗಿಸಿಟ್ಟು, ಸ್ವತಂತ್ರವಾಗಿ 'ಕದನ ವಿರಾಮ' ಘೋಷಿಸಿದ್ದಾರೆ. ಹೀಗಾಗಿ ಮತ್ತೊಂದು ಭಿನ್ನಮತೀಯ ಚಟುವಟಿಕೆ ಆರಂಭವಾಗುವ ಅಪಾಯದಿಂದ ಮುಖ್ಯಮಂತ್ರಿ ಯಡಿಯೂರಪ್ಪ ಕೂದಲೆಳೆಯಿಂದ ಪಾರಾಗಿದ್ದಾರೆ.

30 ಜಿ.ಪಂ. ಸ್ಥಾನಗಳಲ್ಲಿ 18 ಸ್ಥಾನವನ್ನು ಗೆದ್ದೇ ಗೆಲ್ಲುತ್ತೇವೆ ಎಂಬ ಆತ್ಮವಿಶ್ವಾಸದಲ್ಲಿದ್ದ ಯಡ್ಡಿ ಫಲಿತಾಂಶ ಬಂದನಂತರ "ನನಗೆ ಇದು ತೃಪ್ತಿ ತಂದಿಲ್ಲ" ಎಂದು ಹೇಳಿದ್ದಾರೆ. ಆಳುವ ಪಕ್ಷ ಕನಿಷ್ಠವೆಂದರೂ ಅರ್ಧಕ್ಕಿಂತ ಹೆಚ್ಚು ಸ್ಥಾನಗಳನ್ನು ಈ ಚುನಾವಣೆಯಲ್ಲಿ ಗೆಲ್ಲಬೇಕಿತ್ತು. ಆಗ ಮಾತ್ರ ಆಡಳಿತ ಪಕ್ಷದ ನಾಯಕರು ಎದೆಯುಬ್ಬಿಸಿ ಬೀಗಲು ಸಾಧ್ಯ. ಆದರೆ ಯಡ್ಡಿ ಪಾಲಿಗೆ ದಕ್ಕಿದ್ದು ಕೇವಲ 12 ಜಿಲ್ಲಾ ಪಂಚಾಯಿತಿಗಳು!

ಸಂಖ್ಯಾದೃಷ್ಟಿಯಿಂದ ಹೇಳುವುದಾದರೆ ಕೇವಲ ಬಳ್ಳಾರಿಯಲ್ಲಿ ಮಾತ್ರ ಈ ಹಿಂದೆ ಬಿಜೆಪಿ ಅಧಿಕಾರದಲ್ಲಿತ್ತು. ಒಂದರ ಸ್ಥಾನದಿಂದ 12ಕ್ಕೆ ಏರಿರುವುದು ಸಾಧನೆಯೆಂದೇ ಯಡ್ಡಿ ಬಡಾಯಿ ಕೊಚ್ಚಿಕೊಳ್ಳಬಹುದು. ವಾಸ್ತವವಾಗಿ ಕನಿಷ್ಠ 15 ಸ್ಥಾನಗಳನ್ನು ಗೆದ್ದಿದ್ದರೂ ಪಕ್ಷದ ಮೇಲಿನ ಯಡಿಯೂರಪ್ಪನ ಹತೋಟಿ ಹೆಚ್ಚುತ್ತಿತ್ತು. ಅಷ್ಟೇ ಅಲ್ಲ, 'ಇದೆಲ್ಲಾ ಸಾಧ್ಯವಾಗಿದ್ದು ನನ್ನ ನಾಮಬಲದಿಂದಲೇ' ಎಂದು ಹೈಕಮಾಂಡಿಗೆ ಮನವರಿಕೆ ಮಾಡಿಕೊಡಬಹುದಿತ್ತು.

ಇದರ ಜೊತೆಜೊತೆಗೆ ಯಡ್ಡಿಯ ತವರು ಜಿಲ್ಲೆ ಶಿವಮೊಗ್ಗೆಯಲ್ಲಿ ಕೇವಲ ಒಂದು ಸ್ಥಾನದ ಅಂತರದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದಿರುವುದು ಯಡ್ಡಿ ಚಿಂತೆಗೆ ಕಾರಣವಾಗಿದೆ. ಯಡ್ಡಿ, ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪ



'ಬಳ್ಳಾರಿಯಲ್ಲಿ ಆಪರೇಷನ್ ಕಮಲ...

ಮತ್ತು ಲೋಕಸಭಾ ಸದಸ್ಯ ರಾಘವೇಂದ್ರ..... ಈ ತ್ರಿಮೂರ್ತಿಗಳ ಸಂಗಮದ ಶಿವಮೊಗ್ಗದಲ್ಲೇ ಬಿಜೆಪಿ ಕೂದಲೆಳೆಯಲ್ಲಿ ಮಾನ ಉಳಿಸಿಕೊಂಡಿದೆ.

ಯಡ್ಡಿಗೆ ಶಿವಮೊಗ್ಗದ ಮತಬಾಂಧವರ ಮೇಲೆ ಎಷ್ಟೊಂದು ವಿಶ್ವಾಸ ಇತ್ತೆಂದರೆ ಆ ಜಿಲ್ಲೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರದಿದ್ದರೆ ತಾನು ತನ್ನ ಜೀವಿತಾವಧಿಯಲ್ಲಿ ಮತ್ತೊಮ್ಮೆ ಶಿವಮೊಗ್ಗಕ್ಕೆ ಎಂದೆಂದಿಗೂ ಕಾಲಿಡುವುದಿಲ್ಲ ಎಂದು ಶಪಥ ಮಾಡಿ ಮತದಾರರ ಮೇಲೆ ಸೆಂಟಿಮೆಂಟ್ ಪ್ರಯೋಗ ಮಾಡಿದ್ದರು. ಆದರೆ ಅಲ್ಲಿನ ಮತದಾರರು ಕೇವಲ ಒಂದು ಸ್ಥಾನದ ಅಂತರದಿಂದ ಬಿಜೆಪಿಯನ್ನು ಗೆಲ್ಲಿಸಿರುವುದು ಆ ಜಿಲ್ಲೆಯಲ್ಲಿ ಯಡ್ಡಿಯ ವರ್ಚಸ್ಸು ಇಳಿಮುಖವಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಹಾಗಂತ ಈ ಚುನಾವಣೆಯ ಸೋಲಿನ ಜವಾಬ್ದಾರಿಯನ್ನು ಯಡ್ಡಿಯ ಹೆಗಲಿಗೇರಿಸಲು ಯಾರೂ ತಯಾರಿಲ್ಲ. ಇದಕ್ಕೆ ಮುಖ್ಯ ಕಾರಣ ಬಹುತೇಕ ಎಲ್ಲಾ ನಾಯಕರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸೋಲಿನ ರುಚಿಯನ್ನು ಕಂಡಿರುವುದು. ಉದಾಹರಣೆಗೆ ಯಡ್ಡಿ ವಿರುದ್ಧ ಬಂಡಾಯದ ಬಾವುಟವನ್ನು ಹಾರಿಸುವ ಶಕ್ತಿಯನ್ನು ಹೊಂದಿರುವ ಬಳ್ಳಾರಿಯ ರೆಡ್ಡಿ ಸಹೋದರರ ಸ್ಥಿತಿ ಯಡ್ಡಿಗಿಂತಲೂ ಚಿಂತಾಜನಕವಾಗಿದೆ. ಚುನಾವಣೆ ಫಲಿತಾಂಶ ಬಂದಾಗ ಆ ಜಿಲ್ಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸಮಬಲವಾಗಿ ಸ್ಥಾನ ಗೆದ್ದುಕೊಂಡಿದ್ದವು. ಅದೊಂದು ರೀತಿಯಲ್ಲಿ ಬಳ್ಳಾರಿಯ ರೆಡ್ಡಿ ಸಹೋದರರ ಡೌನ್‌ಫಾಲ್‌ನ ಸಂಕೇತದಂತಿತ್ತು. ಈ ಹಿಂದೆ ಇಡೀ ರಾಜ್ಯದಲ್ಲಿ 65 ಶಾಸಕರನ್ನು ಗೆಲ್ಲಿಸಿದ್ದೇವೆ ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದ ರೆಡ್ಡಿ ಸಹೋದರರಿಗೆ ಒಂದು ಜಿಲ್ಲಾ ಪಂಚಾಯತಿಯಲ್ಲಿ ಅಧಿಕಾರ ಉಳಿಸಿಕೊಳ್ಳಲು ಸಾಧ್ಯವಾಗದಿದ್ದದ್ದು ಅವರ ಕುಸಿದ ವರ್ಚಸ್ಸನ್ನು ತೋರಿಸುತ್ತದೆಯಲ್ಲವೇ?

ಆದರೆ ತಮ್ಮ ಪ್ರವೃತ್ತಿಗೆ ತಕ್ಕಂತೆ ರೆಡ್ಡಿಗಳು ಆಪರೇಷನ್ ಕಮಲ ಚಾಲೂಮಾಡಿ ಕಾಂಗ್ರೆಸ್‌ನ ಜಿ.ಪಂ. ಸದಸ್ಯೆ ನಾಗರತ್ನರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮುಖಾಂತರ ಗಣಿಧಣಿಗಳು ಬಳ್ಳಾರಿಯನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ತಮಾಷೆಯೆಂದರೆ ಯಡ್ಡಿಯನ್ನು ದೂಷಿಸಲು ಬಳ್ಳಾರಿ ಗಣಿಧಣಿಗಳಿಗೆ ಹೇಗೆ ನೈತಿಕ ಹಕ್ಕು ಇಲ್ಲವೋ ಹಾಗೆಯೇ ರೆಡ್ಡಿ ಸಹೋದರರನ್ನು ದೂಷಿಸಲು ಯಡ್ಡಿಗೂ ನೈತಿಕ ಹಕ್ಕು ಇಲ್ಲದಂತಾಗಿದೆ. ಇತ್ತ ಈಶ್ವರಪ್ಪ-ಯಡಿಯೂರಪ್ಪ-ರಾಘವೇಂದ್ರ ಸೇರಿ ಗಳಿಸಿದ್ದು 31ರಲ್ಲಿ 16 ಸ್ಥಾನಗಳು ಮಾತ್ರ. ಬಳ್ಳಾರಿಯಲ್ಲಿ ರೆಡ್ಡಿ ಸಹೋದರರು 36ರಲ್ಲಿ 18 ಸ್ಥಾನ ಅಂದರೆ ಶೇ. 50ರಷ್ಟು ಯಶಸ್ಸು ಪಡೆದಿದ್ದಾರೆ. ಅಂದರೆ ಯಡ್ಡಿ ಹಾಗೂ ರೆಡ್ಡಿ ಇಬ್ಬರ ಸಾಧನೆ-ಸೋಲು ಎರಡೂ ಸಮಸಮ ಎಂದಾಯಿತು.

ಒಂದು ವೇಳೆ ಯಡಿಯೂರಪ್ಪ ಶಿವಮೊಗ್ಗದಲ್ಲಿ ಭಾರೀ ಸೋಲನ್ನು ಕಂಡಿದ್ದರೆ ಖಂಡಿತವಾಗಿಯೂ ಭಿನ್ನಮತೀಯ ನಾಯಕರೆಲ್ಲಾ ಚಿಗುರಿಕೊಂಡು ಅವರ ಮೇಲೆ ಗದಾಪ್ರಹಾರ ಆರಂಭಿಸಿ ಮುಖ್ಯಮಂತ್ರಿ ಸ್ಥಾನ ದಿಂದ ಪದಚ್ಯುತಿ ಮಾಡುವಲ್ಲಿ ಯಶಸ್ವಿ ಯಾಗುತ್ತಿದ್ದರೋ ಏನೋ? ಅದೇರೀತಿ ತನ್ನ ಪಾಲಿಗೆ ಯಾವಾಗಲೂ ದುಃಸ್ವಪ್ನರಾಗಿರುವ ರೆಡ್ಡಿ ಸಹೋದರರು ಚುನಾವಣೆಯಲ್ಲಿ ಸೋಲನ್ನು ಕಂಡಿದ್ದೇ ಆದಲ್ಲಿ ಇದೇ ಸರಿಯಾದ ಸುಸಂದರ್ಭ ಎಂದು ಯಡ್ಡಿ ಅವರನ್ನು ಸಂಪೂರ್ಣವಾಗಿ ಮಟ್ಟಹಾಕುತ್ತಿದ್ದ ರೆಂಬುದರಲ್ಲಿ ಸಂಶಯವಿಲ್ಲ. ಆದರೆ ಸದ್ಯಕ್ಕೆ ಇಬ್ಬರೂ ಸಮಾನ ದುಃಖಿಗಳಾಗಿರುವುದರಿಂದ ಅಂತಹ ಯಾವುದೇ ಚಟುವಟಿಕೆ ಸಾಧ್ಯವಿಲ್ಲ. "ನೀ ನನಗಿದ್ದರೆ... ನಾ ನಿನಗೆ... ನೆನಪಿರಲಿ ಇದು ನಮ್ಮೊಳಗೆ..." ಎಂಬ ಅಲಿಖಿತ ಒಪ್ಪಂದ ಮಾಡಿಕೊಂಡು ಯಡ್ಡಿ ಮತ್ತು ರೆಡ್ಡಿ ಈಗ ತೆಪ್ಪಗಿದ್ದಾರೆ.

ಈ ಚುನಾವಣೆಯಿಂದ ಬಿಜೆಪಿಯ ದ್ವಿತೀಯ ದರ್ಜೆಯ ನಾಯಕರ ಬಣ್ಣ ಕೂಡಾ ಬಯಲಾಗಿದೆ. ಅಂದರೆ ಮುಖ್ಯಮಂತ್ರಿಯಿಂದ ಹಿಡಿದು ಭಿನ್ನಮತೀಯ ನಾಯಕರ ಸಮೇತ ಬಹುತೇಕ ಎಲ್ಲಾ ಮಂತ್ರಿಗಳ ಮಾನ ಕೂಡಾ ಈ ಚುನಾವಣೆಯಲ್ಲಿ ಹರಾಜಾಗಿದೆ. ಉದಾಹರಣೆಗೆ, ದೇವೇಗೌಡ ಮತ್ತು ಕುಮಾರಸ್ವಾಮಿ ನಂತರ ತಾನೇ ಜನಪ್ರಿಯ ಒಕ್ಕಲಿಗ ನಾಯಕ ಎಂದು ಭಾವಿಸಿದ್ದ ಮಂಡ್ಯ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಿದ್ದ ಗೃಹ ಸಚಿವ ಅಶೋಕ್‌ಗೆ ಆ ಜಿಲ್ಲೆಯಲ್ಲಿ ದೊಡ್ಡ ಮುಖಭಂಗವಾಗಿದೆ. ಯಾಕೆಂದರೆ ಇಡೀ ಮಂಡ್ಯ ಜಿಲ್ಲೆಯಲ್ಲಿ ಒಂದೇ ಒಂದು ಅಭ್ಯರ್ಥಿಯನ್ನು ಕೂಡಾ ಗೆಲ್ಲಿಸಲು ಅಶೋಕ್‌ನಿಂದ ಸಾಧ್ಯವಾಗಿಲ್ಲ. ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ ಅಶೋಕ್ ಶೂನ್ಯಕ್ಕೆ ಔಟ್ ಆಗಿದ್ದಾರೆ!

ಅದೇ ರೀತಿ ಬೆಂಗಳೂರು ದಕ್ಷಿಣ ಕ್ಷೇತ್ರದ ಜವಾಬ್ದಾರಿ ವಹಿಸಿಕೊಂಡಿದ್ದ ಅಶೋಕ್‌ಗೆ ಇಲ್ಲೂ ಕೂಡಾ ಜಯಲಕ್ಷ್ಮಿ ಒಲಿದಿಲ್ಲ. ಹೀಗಾಗಿ ಉಪಮುಖ್ಯಮಂತ್ರಿಯಾಗುವ ಕನಸು ಕಂಡಿದ್ದ ಅಶೋಕ್ ಈಗ ಸದ್ಯಕ್ಕೆ ಯಡ್ಡಿ-ರೆಡ್ಡಿಗಳಿಂತಲೂ ಹತಾಶರಾಗಿದ್ದಾರೆ.

ಮೊನ್ನೆ ಮೊನ್ನೆಯಷ್ಟೇ ಮಂತ್ರಿಯಾಗಿದ್ದ ರಾಮದಾಸ್ ತನ್ನ ತವರು ಜಿಲ್ಲೆ ಮೈಸೂರಿನಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದೇ ತರುತ್ತೇನೆಂದು ಶಪಥ ಮಾಡಿ ಕ್ಷೇತ್ರದುದ್ದಕ್ಕೂ ಸಿಕ್ಕಾಪಟ್ಟೆ ಪ್ರವಾಸ ಮಾಡಿದ್ದರು. ಆದರೆ ರಾಮದಾಸ್ 46ರಲ್ಲಿ ಪಕ್ಷಕ್ಕೆ ಕೇವಲ 8 ಸ್ಥಾನಗಳನ್ನು ಮಾತ್ರ ಗಳಿಸಿ ಕೊಡುವಲ್ಲಿ ಯಶಸ್ಸು ಕಂಡಿದ್ದಾರೆ. ಅಲ್ಲಿಗೆ ಮೈಸೂರಿನ ಯುವರಾಜನಾಗಿ ಮೆರೆಯುವ ಹಂಬಲದಲ್ಲಿದ್ದ 'ರಾಮ ದಾಸ್' ಈಗ ಸದ್ಯಕ್ಕೆ 'ಯಡ್ಡಿದಾಸ್' ಆಗಿದ್ದಾರೆ.



ಚಿಕ್ಕಮಗಳೂರಿನಲ್ಲಿ ಬಿಜೆಪಿ ಸಂಭ್ರಮ

ಶ್ರೀರಾಮುಲುಗೂ ಯಡಿಯೂರಪ್ಪ ರಾಯಚೂರು ಮತ್ತು ರಾಮನಗರ ಜಿಲ್ಲೆಗಳ ಉಸ್ತುವಾರಿ ನೀಡಿದ್ದರು. ರಾಮನಗರದಲ್ಲಿ ಅವರು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಜೊತೆ ಹೊಡೆದಾಡಿಕೊಳ್ಳಲಿ ಎಂಬುದೇ ಯಡ್ಡಿಯ ಹಿಡನ್ ಅಜೆಂಡಾ ಆಗಿತ್ತು. ಹಾಗಾಗಿ ರಾಮನಗರವನ್ನು ಶ್ರೀರಾಮುಲು ಅಧಿಕೃತವಾಗಿ ಒಪ್ಪಿಕೊಳ್ಳಲೇ ಇಲ್ಲ. ಆದರೆ ರಾಯಚೂರಿನಲ್ಲಿ 35 ಸ್ಥಾನಗಳಲ್ಲಿ ರಾಮುಲು ಗಿಟ್ಟಿಸಿದ್ದು ಕೇವಲ 11 ಸ್ಥಾನಗಳನ್ನು ಮಾತ್ರ!

ಯಡ್ಡಿಯ ಸಂಪುಟದಲ್ಲಿ 'ಅತ್ಯಂತ ಸಂಘಟಿತ ಕಾರ್ಯಕರ್ತೆ ಮತ್ತು ದಕ್ಷ ಮಂತ್ರಿ' ಎಂಬ ಹೆಗ್ಗಳಿಕೆಯನ್ನು ಸಂಪಾದಿಸಿರುವ ಶೋಭಾ ಕರಂದ್ಲಾಜೆ ಕೂಡಾ ಈ ಬಾರಿ ಚುನಾವಣೆಯಲ್ಲಿ ಮತದಾರರ ಅವಕೃಪೆಗೆ ಒಳಗಾ ಗಿದ್ದಾರೆ. ಯಡ್ಡಿ ಆಕೆಗೆ ನೀಡಿದ್ದು ಸೇಫ್ ಜಾಗವಾದ ಚಿಕ್ಕಬಳ್ಳಾಪುರ. ಅಲ್ಲಿ ಕೇವಲ 27 ಸ್ಥಾನಗಳು ಮಾತ್ರ ಇವೆ. ಶೋಭ ಇಡೀ ಜಿಲ್ಲೆಯನ್ನು ನಾಲ್ಕುನಾಲ್ಕು ಬಾರಿ ಸುತ್ತುಹಾಕಿ ಸಖತ್ತಾಗಿ ಭಾಷಣ ಬಿಗಿದಿದ್ದರೂ ಕೊನೆಗೆ ಅವರಿಗೆ ದೊರೆತಿದ್ದು ಕೇವಲ ಒಂದೇ ಒಂದು ಸ್ಥಾನ!

ಯಡ್ಡಿಯ ಮತ್ತೊಬ್ಬ ಫೇವರಿಟ್ ಸಚಿವ ವಿ.ಸೋಮಣ್ಣ ಅವರಿಗೆ ವಹಿಸಿದ್ದು ಹಾಸನ ಮತ್ತು ತುಮಕೂರು ಜಿಲ್ಲೆಯ ಜವಾಬ್ದಾರಿ. ತುಮಕೂರಿನಲ್ಲಿ ಹೇಗಿದ್ದರೂ ಬಿಜೆಪಿಯ ಅಲೆಯಿದೆ; ಜೊತೆಗೆ ಅಪಾರ ಸಂಖ್ಯೆಯಲ್ಲಿ ಲಿಂಗಾಯತ ಮತಬಾಂಧವರು ಇರುವುದರಿಂದ ಅಲ್ಲಿ ಗೆಲುವು ಅಷ್ಟೊಂದು ಕಷ್ಟವಲ್ಲ ಎಂಬ ತೀರ್ಮಾನಕ್ಕೆ ಬಂದ ಸೋಮಣ್ಣ ತನ್ನ ಸಮಯ, ಜಾಣ್ಮೆ, ರಾಜಕೀಯ ಚತುರತೆ ಮತ್ತು ತನು-ಮನ-ಧನ ಎಲ್ಲವನ್ನು ಹಾಸನ ಜಿಲ್ಲೆಗೆ ಸಮರ್ಪಿಸಿದರು. ಹಾಸನದಲ್ಲಿ ಗೌಡರ ಪಾಳೆಗಾರಿಕೆಯನ್ನು ಮಟ್ಟಹಾಕಿ ಬಿಜೆಪಿಯನ್ನು ಗೆಲ್ಲಿಸಿ ಮುಖ್ಯಮಂತ್ರಿಯಿಂದ ಶಹಭ್ಭಾಸ್ ಎನಿಸಿಕೊಳ್ಳುವುದು ಸೋಮಣ್ಣನ ಒಂದಂಶದ ಕಾರ್ಯಕ್ರಮವಾಗಿತ್ತು. ಪಾಪ ಸೋಮಣ್ಣ ಅಲ್ಲೂ-ಇಲ್ಲೂ ಎರಡೂ ಕಡೆ ಸೋಲು ಕಂಡು ಈಗ ಸಪ್ಪೆ ಮುಖ ಹಾಕಿಕೊಂಡಿದ್ದಾರೆ.

ಈ ಘಟಾನುಘಟಿಗಳೇ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿ ಸೋಲು ಅನುಭವಿಸಿರುವಾಗ ಉಳಿದವರ ಸೋಲು ಅಷ್ಟೇನೂ ದೊಡ್ಡ ವಿಷಯವಾಗಿ ಅನಿಸುವುದಿಲ್ಲ.
ಉದಾಹರಣೆಗೆ ಯಾವತ್ತೂ ಮಾಸ್ ಲೀಡರ್ ಎನಿಸಿಕೊಳ್ಳದ ವಿಶ್ವೇಶ್ವರ ಹೆಗಡೆ ಕಾಗೇರಿ ತಮಗೆ ವಹಿಸಿದ್ದ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಪೂರ್ಣ ಮುಗ್ಗರಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಚಮತ್ಕಾರ ಮಾಡಲು ಹೊರಟ ಕರುಣಾಕರ ರೆಡ್ಡಿ ಮತದಾರರ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಅದೇರೀತಿ ಕೋಲಾರದಲ್ಲಿ ನಾರಾಯಣಸ್ವಾಮಿ ಬಿಜೆಪಿಯನ್ನು ಗೆಲ್ಲಿಸಲು ಭಗೀರಥ ಪ್ರಯತ್ನ ಮಾಡಿದರೂ ಅವರು ಸೋಲಿನ ಸರದಾರನೆನಿಸಿಕೊಂಡಿದ್ದಾರೆ. ಈ ಮಧ್ಯೆ ಅಬಕಾರಿ ಸಚಿವ ನರ್ಸ್ ರೇಣುಕಾಚಾರ್ಯ ಕೂಡಾ ಚುನಾವಣೆಯಲ್ಲಿ ಮತದಾರರಿಂದ ಹೊನ್ನಾಳಿ ಹೊಡೆತ ತಿಂದಿದ್ದಾನೆ.

ಒಟ್ಟಾರೆಯಾಗಿ ಈ ಚುನಾವಣೆಯ ನಂತರ ಮತ್ತೊಮ್ಮೆ ಗರಿಗೆದರಬಹುದೆಂಬ ನಿರೀಕ್ಷೆಯಲ್ಲಿದ್ದ ಭಿನ್ನಮತೀಯರ ಚಟುವಟಿಕೆಗಳು ಈಗಾಗಲೇ ಠುಸ್ ಆಗಿವೆ.

ಇನ್ನು ಬಿಜೆಪಿಯ ರಾಜ್ಯಾಧ್ಯಕ್ಷ ಈಶ್ವರಪ್ಪ ಚುನಾವಣೆಯ ಫಲಿತಾಂಶದ ನಂತರ ಮೌನಕ್ಕೆ ಶರಣಾಗಿದ್ದಾರೆ. ಪಕ್ಷದಿಂದ ಅನರ್ಹರಾದ ಶಾಸಕರು ಒಂದೇ ಒಂದು ಸ್ಥಾನವನ್ನು ಗೆಲ್ಲುವುದಿಲ್ಲವೆಂದು ಚುನಾವಣಾ ಸಂದರ್ಭದಲ್ಲಿ ಡಂಗೂರ ಭಾರಿಸಿದ್ದ ಈಶ್ವರಪ್ಪ ಈಗ ತುಟಿಪಿಟಿಕ್ ಎನ್ನುತ್ತಿಲ್ಲ.

ಇದೆಲ್ಲದರ ಮಧ್ಯೆ ಯಡ್ಡಿಯ ಹಿಂಬಾಲಕರು ಎನಿಸಿಕೊಂಡಿರುವ ಮತ್ತು ಜಾತಿಬಾಂಧವರು ಎಂಬ ಕಾರಣಕ್ಕೆ ಆಗಾಗ್ಗೆ ಭಿನ್ನಮತೀಯರ ಆಕ್ರೋಶಕ್ಕೆ ತುತ್ತಾಗಿರುವ ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ, ಉಮೇಶ್ ಕತ್ತಿ... ಮೊದಲಾದವರೆಲ್ಲಾ ತಮ್ಮ ಸ್ವಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿ ತಮ್ಮ ಸ್ಥಾನ ಮತ್ತು ನಿಷ್ಠೆ ಅಬಾಧಿತವಾಗದಂತೆ ನೋಡಿಕೊಂಡಿದ್ದಾರೆ. ಇದೇ ರೀತಿ ಭಾವಿ ಮುಖ್ಯಮಂತ್ರಿ ಎಂಬಂತೆ ಫೋಸು ಕೊಡುತ್ತಿದ್ದ ಜಗದೀಶ್ ಶೆಟ್ಟರ್ ಕೂಡಾ ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅಂದರೆ ಮತ್ತೊಮ್ಮೆ ಉತ್ತರ ಕರ್ನಾಟಕದ ಲಿಂಗಾಯತರೆಲ್ಲಾ ಯಡಿಯೂರಪ್ಪನ ಪಕ್ಷಕ್ಕೆ ಮತಹಾಕಿ ತಮ್ಮ ಜಾತಿ ನಿಷ್ಠೆಯನ್ನು ಪ್ರದರ್ಶಿಸಿದ್ದಾರೆ.

ಹಾಗೆಯೇ ಕಳೆದ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯ ಸಂದರ್ಭದಲ್ಲಿ ಯಾವುದೇ ಕಾರ್ಪೋರೇಟರ್‌ನನ್ನು ಗೆಲ್ಲಿಸಲಿಲ್ಲ ಎಂಬ ಕಾರಣಕ್ಕೆ ಯಡ್ಡಿಯ



ಬೆಂಗಳೂರಿನಲ್ಲಿ ಜೆಡಿಎಸ್ ಸಂಭ್ರಮ

ಕೆಂಗಣ್ಣಿಗೆ ತುತ್ತಾಗಿ ಮಂತ್ರಿ ಸ್ಥಾನ ಕಳೆದುಕೊಂಡಿದ್ದ ಲಿಂಬಾವಳಿ ಈ ಬಾರಿ ತನ್ನ ಮಹದೇವಪುರ ಕ್ಷೇತ್ರದಿಂದ ಅತ್ಯಂತ ಹೆಚ್ಚು ಸ್ಥಾನಗಳನ್ನು ಬಿಜೆಪಿಗೆ ಗೆಲ್ಲಿಸಿಕೊಡುವ ಮೂಲಕ ತನ್ನ ಜನಪ್ರಿಯತೆ ಮತ್ತು ಮತದಾರರ ಮೇಲಿನ ಹತೋಟಿಯನ್ನು ಸಾಬೀತುಪಡಿಸಿದ್ದಾರೆ. ಈ ಕಾರಣಕ್ಕೆ ಅರವಿಂದ ಲಿಂಬಾವಳಿ ತಮಗೆ ಮತ್ತೆ ಮಂತ್ರಿ ಸ್ಥಾನವನ್ನು ನೀಡುವಂತೆ ಡಿಮ್ಯಾಂಡ್ ಮಾಡುವ ಸಾಧ್ಯತೆ ಇದೆ.

ಅದೇರೀತಿ ಲೈಂಗಿಕ ಪ್ರಕರಣದಲ್ಲಿ ಸಿಲುಕಿಕೊಂಡು ತನ್ನ ಸ್ಥಾನವನ್ನು ಕಳೆದು ಕೊಂಡ ಹಾಲಪ್ಪ ಶಿವಮೊಗ್ಗ ಜಿಲ್ಲೆಯಲ್ಲಿ ಯಡ್ಡಿಯ ಮಾನವನ್ನು ಕಾಪಾಡಿದ್ದಾನೆ. ಸೊರಬದಲ್ಲಿ ಹಾಲಪ್ಪ ಬಿಜೆಪಿಗೆ ಭಾರಿ ಜಯ ದೊರಕಿಸಿಕೊಡದಿದ್ದಲ್ಲಿ ಮುಖ್ಯಮಂತ್ರಿ ಯಡ್ಡಿ ಅಧಿಕಾರ ತ್ಯಾಗ ಮಾಡಬೇಕಾದ ಪರಿಸ್ಥಿತಿ ಉದ್ಭವವಾಗುತ್ತಿತ್ತು. ಅಂತಹ ಒಂದು ನಾಚಿಕೆಯ ಪ್ರಸಂಗವನ್ನು ತಪ್ಪಿಸಿದ ಹಾಲಪ್ಪನವರಿಗೆ ಮುಖ್ಯಮಂತ್ರಿ ಯಡ್ಡಿ ಮತ್ತೆ ಮಂತ್ರಿ ಸ್ಥಾನ ನೀಡುತ್ತಾರೋ?

ಹೀಗಾಗಿ ವಿಧಾನ ಸಭೆ ಅಧಿವೇಶನ ಮುಗಿದನಂತರ ಸಚಿವ ಸಂಪುಟದಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡುವಂತಹ ಅನಿವಾರ್ಯ ರಾಜಕೀಯ ಪರಿಸ್ಥಿತಿಯನ್ನು ಯಡಿಯೂರಪ್ಪ ಎದುರಿಸಬೇಕಾಗಬಹುದು. ಅಲ್ಲಿಯತನಕ ಬಿಜೆಪಿ ಪಕ್ಷದೊಳಗಿನ ಭಿನ್ನಮತೀಯ ಚಟುವಟಿಕೆಗಳು ಎಂದಿನಂತೆ ತೆರೆಮರೆಯಲ್ಲೇ ನಡೆಯುತ್ತವೆಯೇ ವಿನಃ ಬಹಿರಂಗವಾಗುವ ಸಾಧ್ಯತೆಗಳು ತೀರಾ ಕಡಿಮೆ. ದೆಹಲಿಯಲ್ಲಿರುವ ಬಿಜೆಪಿ ವರಿಷ್ಠರು ಕೂಡಾ ಚುನಾವಣೆಯ ಫಲಿತಾಂಶದಿಂದ ಸಂತೋಷಪಡದಿದ್ದರೂ ಯಡ್ಡಿಯನ್ನು ಬದಲಾಯಿಸುವ ದುಸ್ಸಾಹಸಕ್ಕೆ ಮತ್ತೊಮ್ಮೆ ಕೈಹಾಕಲಾರರು ಎಂಬುದೇ ಸದ್ಯಕ್ಕೆ ಕೇಳಿಬರುತ್ತಿರುವ ಮಾತು.....

ಅಂದರೆ ಯಡ್ಡಿಯ ಅದೃಷ್ಟ ಈ ಚುನಾವಣೆಯಲ್ಲೂ ಕೆಲಸ ಮಾಡಿದೆ.

• ಸದಾಶಿವ ಶೆಣೈ

ದಾವಣಗೆರೆ: ಬಾಲಬಿಚ್ಚುತ್ತಿರುವ ಚೆಡ್ಡಿಗಳು

ಸಂಘಪರಿವಾರದ ಚೆಡ್ಡಿಗಳಿಗೆ ಅಧಿಕಾರದ ಪಿತ್ಥ ನೆತ್ತಿಗೇರಿ ಅದು ಒಸರಬಾರದ ಕಡೆಯಿಂದೆಲ್ಲಾ ಒಸರಲಾರಂಭಿಸಿದೆ. ಈ ಹಿಂದೆ ದಾವಣಗೆರೆಯಲ್ಲಿ ಚರ್ಚುಗಳ ಮೇಲೆ, ಕ್ರೈಸ್ತ ಪಾದ್ರಿಗಳ ಮೇಲೆ ಮತ್ತು ಕ್ರಿಶ್ಚಿಯನ್ ಧರ್ಮದ ಅನುಯಾಯಿಗಳ ಮೇಲೆ ಚೆಡ್ಡಿಗಳು ದಾಳಿಗಳನ್ನು ನಡೆಸಿದ್ದಲ್ಲದೆ ಚರ್ಚುಗಳಿಗೆ ಜಿಲ್ಲಾಡಳಿತದ ಮೂಲಕ ಬೀಗಮುದ್ರೆ ಹಾಕಿಸಿ ವಿಜಯೋತ್ಸವವನ್ನು ಆಚರಿಸಿದ್ದರು. ಆದರೆ ಆ ಸಂದರ್ಭದಲ್ಲೇ ಕರ್ನಾಟಕದ ಉಚ್ಚ ನ್ಯಾಯಾಲಯವು ಚೆಡ್ಡಿಗಳಿಗೆ ಕೊಟ್ಟ ಚಾಟಿಯೇಟಿನಿಂದಾಗಿ ಅವರೆಲ್ಲ ಸ್ವಲ್ಪಕಾಲ ಮುಕುಳಿ ಅದುಮಿಕೊಂಡು ಸುಮ್ಮನಾಗಿದ್ದರು.

ಆದರೆ ಇತ್ತೀಚೆಗೆ ಹಿಂದೂ ಸಮಾಜೋತ್ಸವ, ಹನುಮಂತ ಜಾಗರಣಾ ಯಾತ್ರೆ ಮುಂತಾದ ಜೀವವಿರೋಧಿ ಕಾರ್ಯಕ್ರಮಗಳನ್ನು ಆಚರಿಸಿದ್ದಲ್ಲದೆ, ಭೀಕರವಾದ ಫ್ಲೆಕ್ಸ್ ಹಾಗೂ ಹೋರ್ಡಿಂಗ್‌ಗಳನ್ನು ಪ್ರದರ್ಶಿಸಿ ಅಮಾಯಕ ಹಿಂದೂ ಯುವಜನತೆಯ ತಲೆಯೊಳಗೆ ಮತಾಂಧತೆಯ ಅಮಲನ್ನು ತುಂಬುವುದರ ಮೂಲಕ ಕೋಮುವಾದಿ ಚೆಡ್ಡಿಗಳು ಈಗ ಮತ್ತೆ ಬಾಲಬಿಚ್ಚಲಾರಂಭಿಸಿದ್ದಾರೆ. ಇತ್ತೀಚೆಗೆ ದಾವಣಗೆರೆಯಲ್ಲಿ ನಡೆದ ಎರಡು ಘಟನೆಗಳೇ ಇದಕ್ಕೆ ಸಾಕ್ಷಿಯಾಗಿವೆ.

ಘಟನೆ 1:
ಹಿಂದೂ ಮುಸ್ಲಿಮ್ ಗಲಾಟೆ

2010 ಡಿಸೆಂಬರ್ 21ರಂದು ದಾವಣಗೆರೆಯ ವಿನೋಬಾನಗರದ ಮಸೀದಿಯೊಂದರ ಮುಂದೆ ಮದುವೆ ದಿಬ್ಬಣದ ಜೊತೆಗೆ ಬಂದ ಟ್ರ್ಯಾಕ್ಟರೊಂದು ಡೀಸೆಲ್ ಖಾಲಿಯಾಗಿ ನಿಂತುಹೋಯಿತು. ಮದುವೆ ದಿಬ್ಬಣದಲ್ಲಿದ್ದ ಬಹುತೇಕರು ಉಚ್ಚಂಗಿದುರ್ಗದ ಕಲ್ಲು ಕ್ವಾರಿ ಮಾಲೀಕ ಚಂದ್ರಪ್ಪನವರ ಮಗನ ಮದುವೆಗೆ ಬಂದಿದ್ದ ಕ್ವಾರಿ ಕೂಲಿಯಾಳುಗಳಾಗಿದ್ದು ಮದುವೆಯಲ್ಲಿ ಕುಣಿದು-ಖುಷಿ ಅನುಭವಿಸಲು ಬಂದಿದ್ದರು. ಕುಡಿದ ಅಮಲಿನಲ್ಲಿದ್ದ ಅವರೆಲ್ಲ ಟ್ರ್ಯಾಕ್ಟರ್ ನಿಂತದ್ದೇ ತಡ, ಹಾಡುಗಳನ್ನು ಹಾಕಿಕೊಂಡು ಕುಚ್ಚಾಪಟ್ಟೆ ಕುಣಿಯಲು ಪ್ರಾರಂಭಿಸಿದರು. ಸುಮಾರು ಅರ್ಧಗಂಟೆಗಿಂತಲೂ ಹೆಚ್ಚುಕಾಲ ಇದೇ ನಡೆದು, ಟ್ರಾಫಿಕ್ ಜಾಮ್ ಆಗಿ ಅಲ್ಲಿದ್ದವರಿಗೆ ಇರಿಸುಮುರಿಸಾಯಿತು. ಮಸೀದಿ ಅಕ್ಕಪಕ್ಕದಲ್ಲಿದ್ದ ಮುಸ್ಲಿಂ ಯುವಕರಿಗೂ ಮತ್ತು ಮದುವೆ ದಿಬ್ಬಣದಲ್ಲಿದ್ದವರಿಗೂ ಮಾತಿನ ಚಕಮಕಿ ಪ್ರಾರಂಭವಾಗಿ ಮಸೀದಿ ಪಕ್ಕದ ಟೀ ಅಂಗಡಿಯ ಮುನ್ನ ಎನ್ನುವವನು ಟ್ರ್ಯಾಕ್ಟರ್ ಡ್ರೈವರ್‌ಗೆ ಕೈಯಿಂದ ಹೊಡೆದು ಗಾಯಗೊಳಿಸಿದನು. ತಕ್ಷಣ ಅಲ್ಲೇ ಇದ್ದ ಮುಸ್ಲಿಂ ಹಿರಿಯ ಮುಖಂಡರು ಹಲ್ಲೆ ಮಾಡಿದ ಮುನ್ನನನ್ನು ಥಳಿಸಿ ಸಮಾಧಾನಗೊಳಿಸಲೆತ್ನಿಸಿದರು. ಮದುವೆ ದಿಬ್ಬಣದಲ್ಲಿ ಕುಡಿದು ಕುಣಿಯುತ್ತಿದ್ದ ಯುವಕರು ಹಿಂದೂ ಸಂಘಟನೆಗಳೊಂದಿಗೆ ಯಾವುದೇ ಸಂಪರ್ಕ, ಸಂಬಂಧ ಹೊಂದಿರಲಿಲ್ಲವಾದರೂ, ಮುಸ್ಲಿಮರು ಹಿಂದೂಗಳ ಮೇಲೆ ದಾಳಿ ಮಾಡಿದ್ದಾರೆಂಬ ವದಂತಿಗಳು ವ್ಯಾಪಕವಾಗಿ ಹರಡಿದವು. ಆಗ ಸಂಘಪರಿವಾರದ ಕೋಮುವಾದಿಗಳು ಎಂಟ್ರಿ ಪಡೆದುಕೊಂಡು ಯಾರ್‍ಯಾರೋ ಬಡಪಾಯಿಗಳ ವಾಹನಗಳನ್ನು ಸುಟ್ಟುಹಾಕಿ ವಿಪರೀತವಾದ ಆತಂಕವನ್ನು ಸೃಷ್ಟಿಸಿ ಇಡೀ ಒಂದು ವಾರಗಟ್ಟಲೆ ದಾವಣಗೆರೆ ನಗರ ಕೋಮುಗಲಭೆಗೆ ತುತ್ತಾಗಿದೆ ಎನ್ನುವ ವಾತಾವರಣವನ್ನು ಸೃಷ್ಟಿಸಿದರು.

ಸಕಾಲದಲ್ಲಿ ಪೊಲೀಸರು ಮಧ್ಯಪ್ರವೇಶ ಮಾಡಿ ಕೋಮುವಾದಿಗಳ ಕುತಂತ್ರಗಳಿಗೆ ಬ್ರೇಕ್ ಹಾಕದೇ ಇದ್ದಿದ್ದರೆ ದಾವಣಗೆರೆ ನಗರ ಹೊತ್ತಿ ಉರಿಯುವ ಅಪಾಯವಿತ್ತು. ಆದರೆ ಇಲ್ಲಿನ ಪೊಲೀಸರು ನಡೆದ ಘಟನೆಯ ಕುರಿತು ಏಕಪಕ್ಷೀಯವಾಗಿ ವರ್ತಿಸಿದ್ದಾರೆ. ಆರೇಳು ಮಂದಿ ಮುಸ್ಲಿಂ ಯುವಕರ ಮೇಲೆ ಕೇಸು ದಾಖಲಿಸಿ ಜೈಲಿಗೆ ಕಳಿಸಿದ ಪೊಲೀಸರು 'ಇನ್ನೊಂದು ಗುಂಪಿನವರ ಮೇಲೂ ಕೇಸು ದಾಖಲಿಸುತ್ತೇವೆ' ಎಂದು ಬಾಯಿಮಾತಿನಲ್ಲಿ ಮಾತ್ರ ಹೇಳುತ್ತಿದ್ದಾರೆ.

ಘಟನೆ 2:
ಹಲ್ಲೆಗೊಳಗಾದ ಪಾಸ್ಟರ್ ಜೈಲಿಗೆ

2011 ಜನವರಿ 2ರ ರಾತ್ರಿ 8.30ರ ಹೊತ್ತಿಗೆ ದೇವರಾಜು ಅರಸು ಬಡಾವಣೆಯಲ್ಲಿ ಡೇರೆ ಹಾಕಿಕೊಂಡು ನಾಟಿ ಔಷಧಿ ಮಾರಾಟ ಮಾಡುವ ಕೃಷ್ಣಪ್ಪ ಎಂಬ ಆಂಧ್ರಪ್ರದೇಶ ಮೂಲದ ವ್ಯಕ್ತಿಯ ಕರೆಯ ಮೇರೆಗೆ ಪ್ರಾರ್ಥನೆ ಮಾಡಲು ದಾವಣಗೆರೆಯ ಐಜಾಕ್ ಎಂಬ ಪಾಸ್ಟರ್ ಹೋಗಿದ್ದಾರೆ. ಅಲ್ಲಿ ಪ್ರಾರ್ಥನೆ ನಡೆಯುತ್ತಿದ್ದದ್ದು ಅದು ಹೇಗೋ ಕೋಮುವಾದಿಗಳಿಗೆ ಗೊತ್ತಾಗಿ ಅವರೆಲ್ಲ ಗುಂಪುಕಟ್ಟಿಕೊಂಡು ಬಂದು ಅಲ್ಲೇ ವಾಸವಾಗಿದ್ದ ಬಸವರಾಜ ಎನ್ನುವವನನ್ನು ಐಜಾಕ್‌ರ ಮೇಲೆ ಹಲ್ಲೆ ನಡೆಸಲು ಕಳಿಸಿ ಇವರು ಮಾತ್ರ ಕತ್ತಲಲ್ಲಿ ಅಡಗಿ ಕುಳಿತಿದ್ದಾರೆ. ಬಸವರಾಜ ಪಾಸ್ಟರ್ ಐಜಾಕ್‌ರನ್ನು ಮಾತನಾಡಿಸುವ ನೆಪದಲ್ಲಿ ಬಂದು ತನ್ನ ಬೆನ್ನ ಹಿಂದೆ ಅಡಗಿಸಿಟ್ಟುಕೊಂಡಿದ್ದ ಮಚ್ಚಿನಿಂದ ಐಜಾಕ್‌ರ ಕುತ್ತಿಗೆಗೆ ಬೀಸಿ ಹೊಡೆಯಲು ಯತ್ನಿಸಿದ್ದಾನೆ. ದಿಢೀರ್ ದಾಳಿಯಿಂದ ಹೆದರಿದ ಐಜಾಕ್ ತಲೆಯನ್ನು ಪಕ್ಕಕ್ಕೆ ಸರಿಸದೇ ಇದ್ದಿದ್ದರೆ ಆತ ಅಲ್ಲೇ ಹೆಣವಾಗುತ್ತಿದ್ದರು.

ಬಸವರಾಜು ಬೀಸಿದ ಮಚ್ಚಿನ ಅಲಗು ತಲೆಯ ಎಡ ಭಾಗಕ್ಕೆ ತಾಗಿದ್ದರಿಂದ ಚರ್ಮ ಕಿತ್ತುಹೋಗಿ ವಿಪರೀತ ರಕ್ತಸ್ರಾವವಾಗಿದೆ. ಅಲ್ಲಿಂದ ಅದು ಹೇಗೋ ತಪ್ಪಿಸಿಕೊಂಡು ಹೋದ ಐಜಾಕ್‌ರವರು ಚಿಗಟೇರಿ ಜನರಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅಲ್ಲಿನ ವೈದ್ಯರು ಐಜಾಕ್‌ರವರ ತಲೆಯ ಗಾಯಕ್ಕೆ 12 ಹೊಲಿಗೆಗಗಳನ್ನು ಹಾಕಿದ್ದಾರೆ.

ಮರುದಿನವೇ ಚಿಗಟೇರಿ ಆಸ್ಪತ್ರೆಯವರು ಕೋಮುವಾದಿಗಳ ಚಿತಾವಣೆಯಿಂದಾಗಿ ಐಜಾಕ್‌ರನ್ನು ಡಿಸ್‌ಚಾರ್ಜ್ ಮಾಡಿದ್ದಾರೆ. ವಿಪರೀತ ರಕ್ತಸ್ರಾವವಾಗಿ ಐಜಾಕ್‌ರ ಪರಿಸ್ಥಿತಿ ಗಂಭೀರವಾಗಿದ್ದರಿಂದ ಅವರನ್ನು ನಾಲ್ಕೈದು ದಿನ ವಾರ್ಡ್‌ನಲ್ಲಿ ಇಟ್ಟುಕೊಳ್ಳಿ ಎಂದು ಐಜಾಕ್‌ರವರ ಪತ್ನಿ ಗೋಗರೆದರೂ ಆಸ್ಪತ್ರೆಯವರು ಅದಕ್ಕೆ ಅವಕಾಶ ನೀಡಲಿಲ್ಲ. ಆಗ ವಿಧಿ ಇಲ್ಲದೆ ಐಜಾಕ್ ಅವರನ್ನು ಅಲ್ಲಿಂದ ಸಿಟಿ ಸೆಂಟ್ರಲ್ ಆಸ್ಪತ್ರೆಗೆ ಸೇರಿಸಲಾಯಿತು.



ಹಲ್ಲೆಗೊಳಗಾದ ಪಾಸ್ಟರ್ ಐಜಾಕ್

ಈ ಮಧ್ಯೆ ಪೊಲೀಸ್ ಇಲಾಖೆಯಲ್ಲಿ ವಿಚಿತ್ರವಾದ ಬೆಳವಣಿಗೆಗಳಾಗಲಾರಂಭಿಸಿದವು. ಜನವರಿ ಮೂರರ ಮಧ್ಯಾಹ್ನದ ಹೊತ್ತಿಗೆ, ಐಜಾಕ್‌ರ ಜೊತೆಗೆ ಪ್ರಾರ್ಥನೆಗೆ ಹೋಗಿದ್ದ ತಿಮೋತಿ ಬಾಬು ಮತ್ತು ಪ್ರಾರ್ಥನೆ ಮಾಡಲು ಐಜಾಕ್ ಅವರನ್ನು ಕರೆಸಿಕೊಂಡಿದ್ದ ಕೃಷ್ಣಪ್ಪ- ಇವರಿಬ್ಬರನ್ನೂ ಪೊಲೀಸರು ಬಂಧಿಸಿದರು.

ಅಷ್ಟೇ ಅಲ್ಲದೆ, ಅದೇ ರಾತ್ರಿ 8.30ರ ಹೊತ್ತಿಗೆ ಗಾಯಗೊಂಡಿದ್ದ ಐಜಾಕ್‌ರನ್ನು ಸಹ ಸಿಟಿ ಸೆಂಟ್ರಲ್ ಆಸ್ಪತ್ರೆಯಿಂದಲೇ ಬಂಧಿಸುವ ಪ್ರಯತ್ನಗಳನ್ನು ಪೊಲೀಸರು ನಡೆಸಿದರು. ಆಸ್ಪತ್ರೆಯವರು ಕೂಡ ಐಜಾಕ್‌ರನ್ನು ಡಿಸ್‌ಚಾರ್ಜ್ ಮಾಡಲು ತುದಿಗಾಲ ಮೇಲೆ ನಿಂತಿದ್ದರು. ಆದರೆ ಆಸ್ಪತ್ರೆಯ ಮುಂದೆ ಸೇರಿದ್ದ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮತ್ತು ಕ್ರಿಶ್ಚಿಯನ್ ಧರ್ಮದ ಮುಖಂಡರೆಲ್ಲರೂ 'ಐಜಾಕ್‌ರ ಪರಿಸ್ಥಿತಿ ಗಂಭೀರವಾಗಿರುವುದರಿಂದ ಅವರನ್ನು ಡಿಸ್‌ಚಾರ್ಜ್ ಮಾಡಬೇಡಿ. ಒಂದು ವೇಳೆ ಡಿಸ್‌ಚಾರ್ಜ್ ಮಾಡುವುದೇ ಆದರೆ ಅವರನ್ನು ಬೆಂಗಳೂರಿನ ನಿಮ್ಹಾನ್ಸ್‌ಗೆ ರೆಫರ್ ಮಾಡಿ' ಎಂದು ವಾದಿಸಿದರು.

ಆದರೂ ಆಸ್ಪತ್ರೆಯ ವೈದ್ಯರು ರೋಗಿಯನ್ನು ಆಸ್ಪತ್ರೆಯಲ್ಲಿಟ್ಟುಕೊಳ್ಳಲು ಒಪ್ಪಲಿಲ್ಲ. ಆಗ ಈ ಆಸ್ಪತ್ರೆಯ ಒಂದೊಂದು ಹಲ್ಕಾತನಗಳ ಬಗ್ಗೆ ಜನರು ಹೇಳಲು ಪ್ರಾರಂಭಿಸಿದಾಗ ಆಸ್ಪತ್ರೆಯ ಆಡಳಿತ ಮಂಡಳಿ (ಈ ಹಿಂದೆ 'ಲಂಕೇಶ್' ವಾರ ಪತ್ರಿಕೆಯಲ್ಲಿ 'ದಾವಣಗೆರೆಯ ಮೃತ್ಯುಕೂಪ: ಸಿಟಿ ಸೆಂಟ್ರಲ್ ಆಸ್ಪತ್ರೆ' ಎಂಬ ವರದಿ ಪ್ರಕಟವಾಗಿದೆ). ಐಜಾಕ್‌ರನ್ನು ಸದ್ಯಕ್ಕೆ ಆಸ್ಪತ್ರೆಯಲ್ಲಿರಿಸಿಕೊಳ್ಳಲು ಒಪ್ಪಿಕೊಂಡರು. ಆದರೆ ಅದಾದ ಮಾರನೆ ದಿನ, ಜನವರಿ ನಾಲ್ಕರಂದು ಐಜಾಕ್ ಅವರನ್ನು ಪೊಲೀಸರು ಆಸ್ಪತ್ರೆಯಿಂದಲೇ ಬಂಧನಕ್ಕೆ ತೆಗೆದುಕೊಂಡಿದ್ದಾರೆ.

ಈ ಘಟನೆಯಲ್ಲೂ ಪೊಲೀಸ್ ಇಲಾಖೆ ಕೋಮುವಾದಿಗಳ ಪರವಾಗಿ ಕೆಲಸ ಮಾಡಿದೆ. ಐಜಾಕ್‌ರವರ ಮೇಲಿನ ಹಲ್ಲೆಗೆ ಒಬ್ಬನೇ ವ್ಯಕ್ತಿ ಕಾರಣವಾಗಿಲ್ಲ, ಅವನನ್ನು ಹುರಿದುಂಬಿಸಿದ ವ್ಯಕ್ತಿಗಳೂ ಕಾರಣರಾಗುತ್ತಾರೆನ್ನುವುದು ಇಲಾಖೆಗೆ ಸ್ಪಷ್ಟವಾಗಿ ಗೊತ್ತಿದ್ದರೂ ಒಬ್ಬನ ಮೇಲೆ ಮಾತ್ರ ಕೇಸು ದಾಖಲಿಸಿದ್ದಾರೆ. ಜೊತೆಗೆ ಹೊಡೆತ ತಿಂದ ಮೂರು ಮಂದಿಗೆ ರಕ್ಷಣೆ ನೀಡುವ ಬದಲು ಅವರ ಮೇಲೆ ಜಾಮೀನುರಹಿತ ಕೇಸನ್ನು ದಾಖಲಿಸಿ ಮೂವರನ್ನೂ ಜೈಲಿಗೆ ಕಳುಹಿಸಿದ್ದಾರೆ.

ದಾಳಿ ನಡೆದದ್ದು ಐಜಾಕ್ ಅವರ ಮೇಲೆ. ಆದರೆ ಐಜಾಕ್ ಅವರು ಕೋಮು ಗಲಭೆಗೆ ಸಂಚು ನಡೆಸುತ್ತಿದ್ದಾರೆಂದು ಐಜಾಕ್, ತಿಮೋತಿ ಬಾಬು ಮತ್ತು ಕೃಷ್ಣಪ್ಪರ ವಿರುದ್ಧ ಚೆಡ್ಡಿಗಳು ನೀಡಿದ ದೂರನ್ನೇ ಆಧರಿಸಿ ಪೊಲೀಸರು ಅವರನ್ನೆಲ್ಲ ಬಂಧಿಸುವ ಮೂಲಕ ತಮ್ಮ ಚೆಡ್ಡಿ ಬುದ್ಧಿಯನ್ನು ಮತ್ತೊಮ್ಮೆ ಮೆರೆದಿದ್ದಾರೆ.

ಚೆಡ್ಡಿ ಕೋಮುವಾದಿಗಳು ಪೊಲೀಸರ ಮೇಲೆ ಒತ್ತಡ ತಂದ ತಕ್ಷಣ 'ನೆಂದ ಕಳ್ಳೇಪುರಿ'ಯಂತಾಗುವ ಪೊಲೀಸರು ಕೋಮುವಾದಿಗಳ ಪರ ವಹಿಸಿ 'ಅಲ್ಪಸಂಖ್ಯಾತರದ್ದೇ ತಪ್ಪು' ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ. ಒಂದು ವೇಳೆ ಕ್ರೈಸ್ತ ಸಮುದಾಯದವರ ತಪ್ಪೇ ಇದ್ದರೂ ಇದರ ವಿರುದ್ಧ ಕ್ರಮ ತೆಗೆದುಕೊಳ್ಳಲು 'ನೀವ್ಯಾರು' ಎನ್ನುವ ಪ್ರಶ್ನೆಯನ್ನು ಪೊಲೀಸರು ಕೋಮುವಾದಿಗಳಿಗೆ ಯಾಕೆ ಕೇಳುವುದಿಲ್ಲ? ಈ ಸಂಬಂಧ ನಿರ್ದಾಕ್ಷಣ್ಯ ಕ್ರಮಗಳನ್ನೇಕೆ ತೆಗೆದುಕೊಳ್ಳುವುದಿಲ್ಲ? ತಮ್ಮ ಇಲಾಖೆಯು ಮಾಡಬೇಕಿರುವ ಶಾಂತಿ-ಸುವ್ಯವಸ್ಥೆ ಕಾಪಾಡುವ ಕೆಲಸಗಳನ್ನು, ಪೊಲೀಸರು ಕೋಮುವಾದಿಗಳಿಗೆ ಒಪ್ಪಿಸಿದ್ದಾರಾ? ಪೊಲೀಸ್ ಇಲಾಖೆ ಈ ಕುರಿತು ಸ್ಪಷ್ಟನೆ ನೀಡಲು ಸಿದ್ಧವಿದೆಯೇ?

• ಚಂದ್ರಶೇಖರ ತೋರಣಘಟ್ಟ



ಚಿಕ್ಕ ಮಕ್ಕಳಿಗೆ ತೇಜಸ್ವಿ ಪಾಠ

ಇತ್ತೀಚೆಗೆ ಪೂರ್ಣಚಂದ್ರ ತೇಜಸ್ವಿಯವರ ಪತ್ನಿ ರಾಜೇಶ್ವರಿ ಫೋನ್ ಮಾಡಿದ್ದರು. ರಾಜೇಶ್ವರಿ ಅವರದ್ದು ಎಂತಹ ಕಿಲಕಿಲಾ ದನಿ ಎಂದರೆ ಅವರು ಇವತ್ತಿಗೂ ಓರ್ವ ಯುವತಿಯಂತೆ, ಜೀವನದಲ್ಲಿ ಅಪಾರ ಉತ್ಸಾಹ ಉಳ್ಳವರಂತೆ ಭಾಸವಾಗುತ್ತಾರೆ. ಆದ್ದರಿಂದಲೇ ಅವರೊಂದಿಗೆ ಮಾತನಾಡಿದರೆ ಒಂಥರಾ ಸಂತೋಷ ಸಿಗುತ್ತದೆ.

ಮೊನ್ನೆ ಅವರೊಂದಿಗೆ ಕುಶಲೋಪರಿಗಳನ್ನು ವಿನಿಮಯ ಮಾಡಿಕೊಂಡ ನಂತರ ನನ್ನ ಪುಟಾಣಿ ಇಶಾ ತೇಜಸ್ವಿ ಅವರ ಅಭಿಮಾನಿ ಆಗಿದ್ದಾಳೆ. ಅವಳಿಗೆ ಈಗಾಗಲೇ ತೇಜಸ್ವಿ ಅವರ ಪರಿಸರದ ಕತೆಗಳನ್ನು ಓದಿ ಹೇಳಿದ್ದೇನೆ. ಇಶಾಳ ಮನಸ್ಸಿನ ಮೇಲೆ ಕಿವಿ, ಮಾರ ಮತ್ತು ಪ್ಯಾರಾಗಳು ಎಷ್ಟು ಪ್ರಭಾವ ಬೀರಿದ್ದಾರೆಂದರೆ ಅಮ್ಮನ ತೋಟದಲ್ಲಿರುವ ಹೊಸ ನಾಯಿಮರಿಗೆ ಕಿವಿ ಎಂದೇ ಹೆಸರಿಡಬೇಕೆಂದು ಹಠ ಹಿಡಿದಿದ್ದಾಳೆ" ಅಂದೆ.

ಆಗ ರಾಜೇಶ್ವರಿ ಅವರು "ಹಾಹಾಹಾ... ಇವತ್ತಿಗೂ ಮೂಡಿಗೆರೆ ಸುತ್ತಮುತ್ತಲಿನ ಜನ ನಮ್ಮ ತೋಟಕ್ಕೂ ಭೇಟಿ ನೀಡುತ್ತಾರೆ. ಒಂದು ರೀತಿಯಲ್ಲಿ ನಮ್ಮ ತೋಟ ಪ್ರವಾಸಿಗರ ಜಾಗದಂತಾಗಿದೆ. ಹಾಗೆ ತಮ್ಮ ತಂದೆ ತಾಯಂದಿರೊಂದಿಗೆ ನಮ್ಮ ತೋಟಕ್ಕೆ ಬರುವ ಮಕ್ಕಳು 'ಕಿವಿ ಎಲ್ಲಿ, ಮಾರ ಎಲ್ಲಿ' ಎಂದು ಕೇಳುತ್ತಾರೆ" ಎಂದರು.

ಒಮ್ಮೆ ತೇಜಸ್ವಿ ಬರೆದಿರುವ ಕತೆಯನ್ನು ಓದಿ ಹೇಳುತ್ತಿರುವಾಗ ಇಶಾ "ಈಗ ತೇಜಸ್ವಿ ಎಲ್ಲಿದ್ದಾರೆ?" ಎಂದು ಕೇಳಿದಳು. ಆಗ ನಾನು "ಅವರೂ ಕೂಡ ತಾತನೊಂದಿಗೆ ನಕ್ಷತ್ರ ಆಗಿದ್ದಾರೆ. ಈಗ ನಾನು ಅವರು ಬರೆದಿರುವ ಕತೆಗಳನ್ನು ಹೇಳುತ್ತಿರುವುದನ್ನು ನೋಡಿ ತೇಜಸ್ವಿ ನಿನ್ನ ತಾತನಿಗೆ 'ನೋಡು ನಿನ್ನ ಮಗಳು ನಿನ್ನ ಮೊಮ್ಮಗಳಿಗೆ ನಾನು ಬರೆದ ಕತೆ ಹೇಳುತ್ತಿದ್ದಾಳೆ' ಎಂದು ಸಂತೋಷ ಪಡುತ್ತಿರುತ್ತಾರೆ" ಅಂದೆ. ಆಗ ಇಶಾ "ತಾತ ಕೂಡ ಕತೆಗಳನ್ನು ಬರೆದಿದ್ದಾರೆ ಅಂತೀಯಲ್ಲ, ತಾತ ಬರೆದಿರುವ ಕತೆಯೊಂದನ್ನು ಹೇಳು" ಅಂದಳು. ಅವಳ ಪ್ರಶ್ನೆಯಿಂದ ತಬ್ಬಿಬ್ಬಾದ ನಾನು "ನೀನು ದೊಡ್ಡವಳಾದ ಮೇಲೆ ತಾತ ಬರೆದಿರುವ ಕತೆಗಳು ಅರ್ಥವಾಗುತ್ತೆ" ಅಂದಿದ್ದೆ.

ರಾಜೇಶ್ವರಿ ತಮ್ಮ ಮಾತನ್ನು ಮುಂದುವರೆಸಿದರು. "ಇಲ್ಲಿಗೆ ಬರುವ ಮಕ್ಕಳು ಕಿವಿ ಮತ್ತು ಮಾರಾ ಬಗ್ಗೆ ಕೇಳಿದಾಗ ಸಂತೋಷವಾಗುತ್ತೆ ಕಣ್ರಿ. ತೇಜಸ್ವಿ ಅವರಿಂದಾಗಿ ಚಿಕ್ಕಮಕ್ಕಳಲ್ಲಿ ಗಿಡ, ಪಕ್ಷಿ, ಪ್ರಾಣಿ, ಪರಿಸರ ಮತ್ತು ಕಾಡಿನ ಬಗ್ಗೆಯೂ ಅರಿವು ಮೂಡುತ್ತಿದೆ ಅಂತ ಖುಷಿ ಆಗುತ್ತೆ" ಅಂದರು.

"ನನ್ನ ಮಗಳಂತೂ ನಿಮ್ಮ ಮನೆ, ಮನೆ ಹಿಂದೆ ಇರುವ ಚಿಕ್ಕ ಕೆರೆ, ಅಲ್ಲಿರುವ ಆಮೆ ಮತ್ತು ತೋಟವನ್ನೆಲ್ಲ ನೋಡಬೇಕಂತೆ. ಸಾಧ್ಯವಾದಾಗ ಅವಳನ್ನು ಕರೆದುಕೊಂಡು ಬರುತ್ತೇನೆ" ಅಂದೆ.

"ಬೇಗ ಕರೆದುಕೊಂಡು ಬನ್ನಿ" ಎಂದರು.

ರಾಜೇಶ್ವರಿ ಅವರು ಈಗ ಆ ತೋಟದಲ್ಲಿ ಒಬ್ಬರೇ ವಾಸಿಸುತ್ತಿದ್ದಾರೆ. ಸದ್ಯದಲ್ಲೇ ತೇಜಸ್ವಿ ಅವರೊಂದಿಗಿನ ತಮ್ಮ ಬದುಕನ್ನು ಕುರಿತು ಅವರು ಬರೆದಿರುವ ಪುಸ್ತಕ ಬಿಡುಗಡೆ ಆಗಲಿದೆ. ಆ ಪುಸ್ತಕವನ್ನು ಓದಲು ಇತರರಂತೆ ನಾನೂ ಕಾಯುತ್ತಿದ್ದೇನೆ.

• ಗೌರು





ಸೂರಿ ಹತ್ಯೆಯ ಹಿಂದೆ ಬೆಂಗಳೂರು ರಿಯಲ್ ಎಸ್ಟೇಟ್?
ರಾಯಲಸೀಮಾ ರಕ್ತ ವೈಚಿತ್ರಂ!


ಗಂಗುಲ ಸೂರಿ

'ರಕ್ತ ಚರಿತ್ರ'ದ ಜೊತೆಜೊತೆಗೆ 'ರಕ್ತ ವೈಚಿತ್ರ'ವೂ ಸಂಭವಿಸಿಬಿಡುತ್ತದೆ-

ಇಲ್ಲದಿದ್ದರೆ ಸೂರಿ ಏಕೆ ತನ್ನ ನಂಬಿಕಸ್ಥ ಬಂಟನ ಕೈಯಲ್ಲೇ ಕೊಲೆಯಾಗಬೇಕಿತ್ತು?

ಇಷ್ಟೆಲ್ಲಾ ಜಾಗ್ರತೆ ವಹಿಸಿ, ರಕ್ಷಣೆಗೆ ಬೇಕಾಬಿಟ್ಟಿ ಹುಡುಗರಿದ್ದೂ ಕೋಟಿಗಟ್ಟಲೆ ದುಡ್ಡು ಬಂದೂಕು, ಅಧಿಕಾರ, ಅಂತಸ್ತು; ಎಲ್ಲಾ ಇದ್ದೂ ತನ್ನ ಬಲಗೈ ಬಂಟನ ಕೈಯಾರೆ ಕೊಲೆಯಾದ ಮುದ್ದುಲಚೆರುವು ಸೂರಿ ಅಲಿಯಾಸ್ ಗಂಗುಲ ಸೂರ್ಯನಾರಾಯಣ ರೆಡ್ಡಿಯದು ರಕ್ತ ವೈಚಿತ್ರವಲ್ಲದೇ ಮತ್ತೇನು?

'ಕೊಂದವನು ಬದುಕಲಾರ' ಎಂಬ ನೈಸರ್ಗಿಕ ನ್ಯಾಯ ತನಗೂ ಅನ್ವಯಿಸುತ್ತದೆ ಎಂಬುದು ಆತನಿಗೆ ಚೆನ್ನಾಗಿ ಗೊತ್ತಿತ್ತು. ಅದನ್ನು ವರ್ಷದ ಹಿಂದಷ್ಟೇ ಟೀವಿ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದ. ಬದುಕುವ ಆಸೆಯನ್ನು ತಾನು ಯಾವುದೋ ಕಾಲಕ್ಕೆ ಬಿಟ್ಟುಬಿಟ್ಟಿದ್ದೇನೆಂದೇ ತಣ್ಣಗೆ ಡೈಲಾಗ್ ಹೊಡೆದು ಮರೆಯಾಗಿದ್ದ ಸೂರಿ ಎಂಥಾ ವಿಲಕ್ಷಣ ಪಾತಕಿ ಎಂಬುದಕ್ಕೆ ಆತ ಬದುಕಿದ್ದಾಗಲೇ ತನ್ನ ಸಮಾಧಿ ಕಟ್ಟಿಸಿಕೊಂಡಿದ್ದ.

ಅದು ತನ್ನ ದುಷ್ಮನ್‌ಗಳನ್ನು ಹೀಯಾಳಿಸುವ ಆತನ ಪೈಶಾಚಿಕ ಮನಃಸ್ಥಿತಿಯ ಸಂಕೇತದಂತಿತ್ತು. ತನ್ನ ಹುಟ್ಟೂರು ಅನಂತಪುರ ಜಿಲ್ಲೆಯ ಪೆನುಕೊಂಡದ ಮುದ್ದುಲಚೆರುವು ಗ್ರಾಮದಲ್ಲಿ ಎದುರಾಳಿಗಳಿಂದ ಕೊಲೆಯಾದ ತನ್ನ ತಂದೆ, ತಾಯಿ, ತಮ್ಮ, ಅಕ್ಕ ಮುಂತಾದವರ ಸಮಾಧಿಯ ಪಕ್ಕದಲ್ಲೇ ತನ್ನದೂ ಒಂದು ಸಮಾಧಿಯನ್ನು ಸೂರಿ ಕಟ್ಟಿಸಿದ್ದ. ಅದು ತನ್ನ ವೈರಿಗಳಿಗೆ ಆತ ರವಾನಿಸಿದ ವಿಕಟ ಸಂದೇಶ! ಈಗ ತಾನೆ ಕಟ್ಟಿಸಿದ್ದ ಸಮಾಧಿಯೊಳಗೆ ಸದ್ದಿಲ್ಲದೆ ಮಲಗಿದ್ದಾನೆ.

ಇಷ್ಟು ಬೇಗ ಅದೂ ತನ್ನ ಜೊತೆಗಿದ್ದವನ ಕೈಯಲ್ಲೇ ಈ ರೀತಿ ಕೊಲೆಯಾಗುತ್ತೇನೆಂಬ ನಿರೀಕ್ಷೆಯಾದರೂ ಆತನಿಗೆಲ್ಲಿತ್ತು? ಸತತ ಮೂವತ್ತು ವರ್ಷಗಳ ಕಾಲ ತನ್ನ ದುಷ್ಮನ್ ಪೆರಿಟಾಲ ರವಿಯ ವಿರುದ್ಧ ಆತ ಹೆಣಗಾಡಿದ್ದ. ತನ್ನ ಇಡೀ ಮನೆತನವನ್ನೇ ನಿರ್ನಾಮ ಮಾಡಿದ ಪೆರಿಟಾಲ ಕುಟುಂಬದ ಏಕೈಕ ಆಸಾಮಿ ರವಿಯನ್ನು ಜೈಲಲ್ಲಿ ಕೂತೇ ಮುಗಿಸಿಹಾಕಿದ್ದ. ಅದಕ್ಕೂ ಮುನ್ನ ಹೈದ್ರಾಬಾದಿನಲ್ಲಿ 'ಶ್ರೀರಾಮುಲಯ್ಯ' ಚಿತ್ರದ ಶೂಟಿಂಗ್ ಸ್ಥಳದಲ್ಲೇ ಕಾರ್ ಬಾಂಬ್ ಸ್ಫೋಟಿಸಿ 26 ಜನರನ್ನು ಕೊಂದಿದ್ದ. ಪೆರಿಟಾಲ ರವಿಯನ್ನು ಮುಗಿಸಿದ ನಂತರವೂ ಜೈಲಲ್ಲಿದ್ದೇ ಆತನ ಒಬ್ಬೊಬ್ಬರೇ ಸಹಚರರನ್ನು ಕೊಲ್ಲಿಸುತ್ತಲೇ ಇದ್ದ. ರಾಯಲಸೀಮೆಯ ರಕ್ತ ಸಾಮ್ರಾಜ್ಯಕ್ಕೆ ತಾನೇ ಅಧಿಪತಿಯಾದ. ಆದರೆ ಸಾವು ತನ್ನ ಹೆಗಲ ಮೇಲೆಯೇ ಸವಾರಿ ಮಾಡುತ್ತಿದೆ ಎಂಬುದನ್ನು ಮಾತ್ರ ಸೂರಿ ಮರೆತುಬಿಟ್ಟಿದ್ದ.



ಆತನ ಹೆಸರು ಭಾನುಕಿರಣ್!

2009ರ ಡಿಸೆಂಬರ್ ತಿಂಗಳಲ್ಲಿ ಅನಂತಪುರಂ ಜೈಲಿನಿಂದ ಸೂರಿ ಬಿಡುಗಡೆಯಾಗುವಾಗ ಆತನ ಜೊತೆಗೇ ಇದ್ದವನು ಭಾನು ಅಲಿಯಾಸ್ ಭಾನುಕಿರಣ್. ಮೂಲತಃ ಪೆನುಕೊಂಡದ ಭಾನುಕಿರಣ್ ಸೂರಿಯ ಬಲಗೈ ಬಂಟ. ಹೈದ್ರಾಬಾದಿನ ಕಾರ್‌ಬಾಂಬ್ ನರಮೇಧದಿಂದ ಹಿಡಿದು ಪೆರಿಟಾಲ ರವಿಯ ಹತ್ಯೆಯತನಕ ಸೂರಿಗೆ ಸಾತು ಕೊಟ್ಟಿದ್ದ ಭಾನು ಹೇಳಿಕೇಳಿ ಸೂರಿಯ ಬೇನಾಮಿ. ಇಲ್ಲಿಗೆ 10 ವರ್ಷದ ಹಿಂದೆ ಅಕ್ರಮ ರಿವಾಲ್ವರ್ ಹೊಂದಿದ್ದ ಕೇಸಿನ ಮೇಲೆ ಹೈದರಾಬಾದ್ ಜೈಲಲ್ಲಿದ್ದ ಭಾನು ಅದೇ ಜೈಲಿನಲ್ಲಿದ್ದ ಸೂರಿಗೆ ಪರಿಚಿತನಾಗಿದ್ದ. ಆಗಿನ್ನೂ ಪೆರಿಟಾಲ ರವಿ ಕೊಲೆಯಾಗಿರಲಿಲ್ಲ. ಚಂದ್ರಬಾಬು ನಾಯ್ಡು ಆಂಧ್ರದ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಇಡೀ ಅನಂತಪುರಕ್ಕೆ ಅಧಿಪತಿಯಂತಿದ್ದದ್ದು ಪೆರಿಟಾಲ ರವಿ.

ನಕ್ಸಲ್ ಹೋರಾಟದಲ್ಲಿ ಹುತಾತ್ಮನಾದ ಪೆರಿಟಾಲ ಶ್ರೀರಾಮುಲುವಿನ ಹಿರಿಯ ಮಗನಾದ ಪೆರಿಟಾಲ ರವಿಯೆಂದರೆ ಪೆನುಕೊಂಡದ ಕನ್ನಮಕ್ಕಲ ಚೆನ್ನಾರೆಡ್ಡಿ ಮತ್ತು ಮುದ್ದುಲಚೆರುವು ನಾರಾಯಣರೆಡ್ಡಿ ಕುಟುಂಬಗಳ ಪಾಲಿಗೆ ಅಕ್ಷರಶಃ ಯಮಧೂತನೆ. ತನ್ನ ತಂದೆ ಶ್ರೀರಾಮುಲುವನ್ನು ಆತನ ಸಹಚರರ ಸಮೇತ ಕೊಂದು ಹಾಕಿದ್ದಕ್ಕೆ ಪ್ರತೀಕಾರವಾಗಿ ಚೆನ್ನಾರೆಡ್ಡಿ ಮತ್ತು ನಾರಾಯಣ ರೆಡ್ಡಿ ಕುಟುಂಬದ ಬಹುತೇಕ ಮಂದಿಯನ್ನು ಮುಗಿಸಿ ಹಾಕಿದ ಪೆರಿಟಾಲ ರವಿ ಶುರುವಿನಲ್ಲಿ ಆಂಧ್ರದ ಪೀಪಲ್ಸ್ ವಾರ್ ಪಕ್ಷದಲ್ಲಿದ್ದ. ಮೊದಮೊದಲು ನಕ್ಸಲ್ ಹೋರಾಟವಾಗಿದ್ದ ಪೆನುಕೊಂಡದ ಜಿದ್ದಾಜಿದ್ದಿ ಕ್ರಮೇಣ ಎರಡು ಕುಟುಂಬಗಳ ನಡುವಿನ ವೈಷಮ್ಯವಾಗಿ ಬದಲಾಗಿದ್ದನ್ನು ಮನಗಂಡ ನಕ್ಸಲ್ ನಾಯಕರು **factionism** ನಿಂದ ಹಿಂದೆ ಸರಿಯುತ್ತಿದ್ದಂತೆ ಪೆರಿಟಾಲ ರವಿ ತನ್ನದೇ ಪ್ರತ್ಯೇಕ ಪಾರ್ಟಿ ಕಟ್ಟಿಕೊಂಡ. ಅದಕ್ಕೆ ROC ಎಂಬ ಹೆಸರಿಟ್ಟಿದ್ದ.



ಶುರುವಿನಲ್ಲಿ ಬಂಡಯ್ಯ ಮಾಸ್ಟರ್, ಎಟ್ಟಿ ಮುತ್ಯಾಲಪ್ಪ ಮುಂತಾದ ಹಿರಿಯ ನಕ್ಸಲ್ ನಾಯಕರೂ ಇದೇ ROC ಯಲ್ಲಿ ಇದ್ದರಾದರೂ ಕ್ರಮೇಣ ಪೆರಿಟಾಲ ರವಿಯ ದಾರಿಯೇ ಬದಲಾಯಿತು. ರವಿ ತೆಲುಗು ದೇಶಂ ಪಕ್ಷದ ಟಿಕೆಟ್ ಪಡೆದು ಪೆನುಕೊಂಡ ಕ್ಷೇತ್ರಕ್ಕೆ ಸ್ಪರ್ಧಿಸಿ ಗೆದ್ದು ಬಂದ. ಮುಂದೆ ಮಂತ್ರಿಯೂ ಆದ. ಆದರೆ ಆತ ಹುಟ್ಟುಹಾಕಿದ್ದ ROC ಎಂಬ ನಕಲಿ ನಕ್ಸಲ್ ಗುಂಪು ಮಾತ್ರ ಹಾಗೇ ಉಳಿದುಬಿಟ್ಟಿತ್ತು. ಮೆಹಬೂಬ್ ನಗರದ ಪೋತುಲು ಸುರೇಶ್, ಅನಂತಪುರದ ಚಮನ್, ರಾಜಣ್ಣ ಬಳ್ಳಾರಿಯ ಆರ್ಕೆ; ಇತ್ಯಾದಿ ಸೋಕಾಲ್ಡ್ ಕಮಾಂಡರ್‌ಗಳೇ ಅದರ ಮುಂಚೂಣಿಯ ನಾಯಕರಾದರೆ ತೆರೆಮರೆಯಲ್ಲಿ ನಿಂತು ಅದನ್ನು ಪೋಷಿಸುತ್ತಿದ್ದುದ್ದೇ ಪೆರಿಟಾಲ ರವಿ.

ಯಾವತ್ತು ತೆಲುಗು ದೇಶಂ ಸರ್ಕಾರ ಪತನಗೊಂಡು ವೈ.ಎಸ್. ರಾಜಶೇಖರ ರೆಡ್ಡಿ ಆಂಧ್ರದ ಮುಖ್ಯಮಂತ್ರಿ ಯಾದರೋ ಸೂರಿಯ ಲಕ್ಕು ಕುದುರಲಾರಂಭಿಸಿತು. ರಾಜಶೇಖರ ರೆಡ್ಡಿಯ ಪುತ್ರ ಜಗನ್‌ಮೋಹನ್ ರೆಡ್ಡಿ ಮತ್ತು ಆತನ ಗಣಿ ದಂಧೆಯ ಪಾಲುದಾರ ಗಾಲಿ ಜನಾರ್ದನ ರೆಡ್ಡಿಗೆ ಪೆರಿಟಾಲ ರವಿ ದೊಡ್ಡ ತಲೆ ನೋವಾಗಿದ್ದ. ಓಬಳಾಪುರಂ ಮೈನಿಂಗ್ ಕಂಪೆನಿ ಮತ್ತು ಜನಾರ್ದನ ರೆಡ್ಡಿಯ ಪತ್ನಿ ಅರುಣಾ ಒಡೆತನದ ಅನಂತಪುರಂ ಮೈನಿಂಗ್ ಕಾರ್ಪೊರೇಷನ್, ಎರಡೂ ಕಂಪೆನಿಗಳ ಅದಿರು ಲೂಟಿಗೆ ಒಂದಲ್ಲ ಒಂದು ತಾಪತ್ರಯ ನೀಡುತ್ತಲೇ ಇದ್ದ ಪೆರಿಟಾಲ ರವಿಯ ವಿರುದ್ಧ ಸೂರಿ ಕತ್ತಿ ಮಸೆಯುತ್ತಲೇ ಇದ್ದ.

1997 ರ ನವೆಂಬರ್ 19 ರಂದು ಹೈದರಾಬಾದಿನ ಜ್ಯೂಬಲಿ ಹಿಲ್ಸ್‌ನಲ್ಲಿ ರವಿಯ ತಂದೆ ಶ್ರೀರಾಮುಲು ಹೋರಾಟದ ಕಥಾವಸ್ತುವುಳ್ಳ 'ಶ್ರೀರಾಮುಲಯ್ಯ' ಚಿತ್ರದ ಚಿತ್ರೀಕರಣದಲ್ಲೇ ಸೂರಿ ಕಾರ್ ಬಾಂಬ್ ಸ್ಫೋಟಿಸಿದ್ದ. ಆಚಾನಕ್ ಆವತ್ತು ಪೆರಿಟಾಲ ರವಿ ಬಚಾವಾದನಾದರೂ ಸ್ಫೋಟಕ್ಕೆ ಸಿಲುಕಿ 26 ಮಂದಿ ಸತ್ತು ಹೋದರು. ಈ ಕೇಸಿನ ಮೊದಲ ಆರೋಪಿ ಸೂರಿಗೆ ಜೀವಾವಧಿ ಶಿಕ್ಷೆಯಾಯಿತು. ಹಾಗಿದ್ದೂ 2004 ರ ಚುನಾವಣೆಯಲ್ಲಿ ಪೆರಿಟಾಲ ರವಿಯ ವಿರುದ್ಧ ಸೂರಿ ತನ್ನ ಪತ್ನಿ ಭಾನುಮತಿಯನ್ನು ನಿಲ್ಲಿಸಿದ್ದ. ಭಾನುಮತಿ ಸೋತಳಾದರೂ ಆಂಧ್ರದ ಮಟ್ಟಿಗೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ರಾಜಶೇಖರ ರೆಡ್ಡಿ ಮುಖ್ಯಮಂತ್ರಿಯಾದರು. ಸಹಜವಾಗೇ ಪೆರಿಟಾಲ ರವಿಗಿದ್ದ ಸರ್ಕಾರಿ ರಕ್ಷಣೆ ರದ್ದಾಗಿತ್ತು. ಯಾವತ್ತೂ ಒಂದು ಡಜನ್ ಬಂದೂಕು ದಾರಿ ಪೊಲೀಸರ ಬೆಂಗಾವಲಲ್ಲಿ ಓಡಾಡುತ್ತಿದ್ದ ರವಿಯ ಸುತ್ತ ಬೆರಳೆಣಿಕೆಯ ಪೊಲೀಸರಿರುತ್ತಿದ್ದರು. ಇದರ ಲಾಭ ಪಡೆದವನು ಸೂರಿ.

• ರಾ. ಸೋಮನಾಥ್

ಗಣಿ ರೆಡ್ಡಿಗಳ ಅದಿರು ಲೂಟಿ, ಅದಕ್ಕಿದ್ದ ಸರ್ಕಾರಿ ಕೃಪೆ, ಮುಖ್ಯಮಂತ್ರಿ ವೈಎಸ್‌ಆರ್ ಮಗನಿಗಿದ್ದ ಅದಿರು ಲಾಬಿಯ ದೋಸ್ತಿ; ಎಲ್ಲವನ್ನೂ ತನ್ನ ಅನುಕೂಲಕ್ಕೆ ತಕ್ಕಂತೆ ಸೂರಿ ಬಳಸಿಕೊಂಡ. ಮೈನಿಂಗ್ ಖದೀಮರಿಂದ ನೆರವನ್ನೂ ಪಡಕೊಂಡ. ಪೆರಿಟಾಲ ರವಿಯ ಒಬ್ಬೊಬ್ಬನೇ ಸಹಚರರನ್ನು ಹಿಡಿದು ಮುಗಿಸತೊಡಗಿದ. ಅಂತಿಮವಾಗಿ ತನ್ನ ಆಜನ್ಮ ವೈರಿ ರವಿಯನ್ನು ಅನಂತಪುರದ ತೆಲುಗು ದೇಶಂ ಕಾರ್ಯಾಲಯದಲ್ಲೇ ಕೊಲ್ಲಿಸಿಬಿಟ್ಟ.

ಇದಾಗಿದ್ದು 2005 ರ ಜನವರಿ 24 ರಂದು. ಅವತ್ತು ಅನಂತಪುರದ ತೆಲುಗುದೇಶಂ ಕಾರ್ಯಾಲಯಕ್ಕೆ ತನ್ನ ಬೆರಳೆಣಿಕೆಯಷ್ಟು ಪೊಲೀಸ್ ಅಂಗರಕ್ಷಕರ ಸಮೇತ ಬಂದಿದ್ದ ಪೆರಿಟಾಲ ರವಿಯನ್ನು ಮೊದು ಸೀನು ಎಂಬ ಸುಪಾರಿ ಹಂತಕನೊಬ್ಬ ಗುಂಡಿಟ್ಟು ಕೊಂದು ಬಿಟ್ಟ. ರಕ್ಷಣೆಗೆ ಪೊಲೀಸರಿದ್ದೂ ರವಿಯ ಪ್ರಾಣ ಉಳಿಯಲಿಲ್ಲ. ಗಂಡನ ಹೆಣದ ಮುಂದೆ ಬಿದ್ದು ಗೋಳಾಡುತ್ತಿದ್ದ ಪತ್ನಿ ಪೆರಿಟಾಲ ಸುನಿತಾ ಆವತ್ತು ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯ ಮಗ ಜಗನ್‌ನನ್ನೇ ತನ್ನ ಗಂಡನ ಕೊಲೆಯ ಆರೋಪಿಯೆಂದು ದೂರು ದಾಖಲಿಸಿದ್ದಳು. ಜೊತೆಗೆ ಗಾಲಿ ಜನಾರ್ದನ ರೆಡ್ಡಿ ತನ್ನ ಗಂಡನ ಹತ್ಯೆಗೆ ದುಡ್ಡುಕಾಸಿನ ನೆರವಾಗಿದ್ದಾನೆಂದೇ ಬಹಿರಂಗವಾಗಿ ಆರೋಪಿಸಿದ್ದಳು. ಮುಂದೆ ನಡೆದ ಉಪಚುನಾವಣೆಯಲ್ಲಿ ಪೆನುಕೊಂಡದಿಂದ ರವಿಯ ಪತ್ನಿ ಸುನೀತಾಳೇ ಗೆದ್ದು ಎಮ್ಮೆಲ್ಲೇಯಾದಳು. ಆಕೆ ಶಾಸಕಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮರುಕ್ಷಣವೇ ಮುಖ್ಯಮಂತ್ರಿ, ರಾಜಶೇಖರ ರೆಡ್ಡಿಯನ್ನು ಕೆಕ್ಕರಿಸಿ 'ರೇ ನುವ್ವು ಕುಕ್ಕಾ ಸಾವು ಕೊಂಡಕಾ' ಎಂದು ಶಾಪ ಹಾಕಿಬಿಟ್ಟಳು.



ಅದರರ್ಥ 'ನನ್ನ ಗಂಡನನ್ನು ಕೊಲ್ಲಿಸಿದೆಯಲ್ಲಾ ನೀನು ನಾಯಿ ಸಾವು ಸಾಯ್ತಿಯೋ.... ಮಗನೇ....!'

ಕೊನೆಗೆ ಆಕೆಯ ಶಾಪವೇ ನಿಜವಾಯಿತು. ವೈಎಸ್‌ಆರ್ ಹೆಲಿಕಾಪ್ಟರ್ ಅಪಘಾತದಲ್ಲಿ ದಾರುಣವಾಗಿ ದುರ್ಮರಣ ಕ್ಕೀಡಾದರು. ಅದಕ್ಕೂ ಮುನ್ನ ಜೈಲಲ್ಲಿದ್ದೇ ಸೂರಿ ಪೆರಿಟಾಲ ಗ್ಯಾಂಗಿನ ಆರ್ಕೆ, ಪ್ರಭಾಕರ್ ಇತ್ಯಾದಿ ಅರ್ಧ ಡಜನ್ನಿನಷ್ಟು ಎದುರಾಳಿಗಳನ್ನು ಕೊಲ್ಲಿಸಿದ್ದ. ಜೈಲಲ್ಲಿದ್ದೇ ಹೈದ್ರಾಬಾದ್, ವಿಜಯವಾಡಾ, ಬೆಂಗಳೂರಿನ ಲ್ಯಾಂಡ್ ಡೀಲುಗಳನ್ನು ಮುಗಿಸುತ್ತಿದ್ದ. ತನ್ನ ಪತ್ನಿ ಭಾನುಮತಿಯ ಹೆಸರಿಗೆ ಕೋಟಿಗಟ್ಟಲೇ ಆಸ್ತಿ ಖರೀದಿಸಿದ್ದ. ಬನಶಂಕರಿಯಲ್ಲೊಂದು ಮನೆ, ಯಲಹಂಕದಲ್ಲಿ ಮತ್ತೊಂದು ಮನೆ, ಸಹಕಾರನಗರದಲ್ಲಿ ಮಗದೊಂದು ಮನೆ ಮಾಡಿ ಬೆಂಗಳೂರನ್ನೇ ತನ್ನ ಪ್ರಮುಖ ಅಡ್ಡೆಯನ್ನಾಗಿ ಮಾಡಿಕೊಂಡ.

ಈ ಮಧ್ಯೆ ಪತ್ನಿ ಭಾನುಮತಿಯನ್ನೇ ಸೂರಿ ಅನುಮಾನಿಸ ತೊಡಗಿದ. ತಾನು ಜೈಲಲ್ಲಿ ಕೂತೇ ಮಾಡುತ್ತಿದ್ದ ಸೆಟಲ್ ಮೆಂಟ್ ಮತ್ತು ಅದರಿಂದ ಬರುತ್ತಿದ್ದ ಕೋಟಿಗಟ್ಟಲೇ ಆದಾಯವನ್ನೆಲ್ಲ ತನ್ನ ಬಲಗೈ ಬಂಟ ಭಾನುಕಿರಣ್ ಹೆಸರಿಗೇ ಮಾಡಿಡುತ್ತಿದ್ದ. ಈ ರೀತಿ ತನ್ನ ಬಂಟನ ಹೆಸರಲ್ಲಿ ಆತನ ಮಾಡಿಟ್ಟಿದ್ದ ಆಸ್ತಿಯೇ 80 ಕೋಟಿಗೂ ಮಿಗಿಲಾಗಿತ್ತು. ಬೆಂಗಳೂರಿನ ಸರ್ಜಾಪುರದಲ್ಲಿ ಎಂಟು ಎಕರೆ, ದೇವನಹಳ್ಳಿಯಲ್ಲಿ 24 ಎಕರೆ, ಹೈದರಾಬಾದಿನಲ್ಲಿ 3 ಪ್ಲಾಟುಗಳು, ವಿಜಯವಾಡಾದಲ್ಲಿ 30 ಎಕರೆ, ವಿಶಾಖಪಟ್ಟಣದಲ್ಲಿ ಭಾರೀ ಬಂಗಲೆ ಖರೀದಿಸಿ ಅದನ್ನು ಬಂಟ ಭಾನುಕಿರಣ್ ಹೆಸರಿಗೆ ನೋಂದಾಯಿಸಿದ್ದ.

ಜ್ಯೂಬಿಲಿ ಹಿಲ್ಸ್ ಬಾಂಬ್ ಸ್ಫೋಟದ ಕೇಸಲ್ಲಿ ಸರಿಸುಮಾರು 13 ವರ್ಷಗಳ ಕಾಲ ಜೈಲಲ್ಲೇ ಕಳೆದ ಸೂರಿ ಇಲ್ಲಿಗೆ ಏಳು ತಿಂಗಳ ಹಿಂದಷ್ಟೇ ಜೈಲಿಂದ ಹೊರಬಿದ್ದ. ವಾರಕ್ಕೊಮ್ಮೆ ಹೈದರಾಬಾದಿಗೆ ಹೋಗಿಬರುತ್ತಿದ್ದದ್ದು ಬಿಟ್ಟರೆ ಮಿಕ್ಕಂತೆ ಬೆಂಗಳೂರನ್ನೇ ತನ್ನ ಅಡ್ಡೆಯನ್ನಾಗಿ ಮಾಡಿಕೊಂಡಿದ್ದ. ಯಲಹಂಕ ಸಮೀಪದ ಜಗನ್‌ಮೋಹನ್ ರೆಡ್ಡಿಯ ತೋಟದಲ್ಲೂ ಕಾಣಿಸಿಕೊಂಡಿದ್ದ. ವೈ.ಎಸ್. ರಾಜಶೇಖರ ರೆಡ್ಡಿಯವರ ಸಮಾಧಿಗೂ ನಮಸ್ಕಾರ ಮಾಡಿ ಬಂದಿದ್ದ. ಹಾಗೇ ಮಗ ಜಗನ್‌ಮೋಹನ್ ರೆಡ್ಡಿಯನ್ನು ಕಂಡು ಮಾತಾಡಿಸಿದ್ದ. ಜೊತೆಗೆ ಬಳ್ಳಾರಿಯ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಪಕ್ಕ ಕೂತು ಹರಟೆ ಹೊಡೆದಿದ್ದ.

ಇತ್ತೀಚೆಗೆ ಆತನ ಬದುಕಿನ ದುರಂತದ ಕುರಿತು ರಾಮ್‌ಗೋಪಾಲ್ ವರ್ಮ ನಿರ್ದೇಶಿಸಿದ 'ರಕ್ತ ಚರಿತ್ರ' ಚಿತ್ರ ಬಿಡುಗಡೆಯಾದಾಗಲೂ ಸೂರಿ ಈ ಬಗ್ಗೆ ದೊಡ್ಡಮಟ್ಟದ ವಿವಾದ ಮಾಡಲಿಲ್ಲ. ಮಂತ್ರಿ ಮಾಲ್ ಮತ್ತು ಪಿವಿಆರ್ ಥೇಟರುಗಳಲ್ಲಿ ಅಲ್ಲಿದ್ದ ಅಷ್ಟೂ ಟಿಕೆಟ್ಟುಗಳನ್ನು ಖರೀದಿಸಿ ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್ ರೆಡ್ಡಿ ಮತ್ತು ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಜೊತೆ ಕೂತು ತನ್ನದೇ ಕಥೆಯುಳ್ಳ ಸಿನಿಮಾ ನೋಡಿದ್ದ. ಬೆಂಗಳೂರಿನ ನೆಲಗಳ್ಳ ರೆಡ್ಡಿಗಳ ಗುಂಪೊಂದು ತನ್ನೆಲ್ಲಾ ದುರಾಚಾರಕ್ಕೆ ಸೂರಿಯನ್ನು ಬಳಸುತ್ತಿತ್ತು. ಆತನ ಅಳಿದುಳಿದ ಸಂಬಂಧಿಕರೆಲ್ಲ ಬೆಂಗಳೂರಿನಲ್ಲೇ ನೆಲೆಗೊಂಡಿದ್ದರು.

ಇಷ್ಟಾಗ್ಯೂ ಸೂರಿ ಎಲ್ಲೂ ತಾನೊಬ್ಬ ಹಂತಕನೆಂದಾಗಲಿ ಡಾನ್ ಎಂದಾಗಲಿ ಪೋಜು ಕೊಟ್ಟವನಲ್ಲ. ಜೈಲಿಂದ ಬಂದಿದ್ದೇ ತನಗಿನ್ನು ಫ್ಯಾಕ್ಷನಿಜಮ್ಮೇ ಬೇಡ ಎಂದಿದ್ದ. ಪೆರಿಟಾಲ ರವಿಯ ಪತ್ನಿ ಸುನೀತಾ ನನಗೆ ಅಕ್ಕ ಇದ್ದಂತೆ. ನನಗೂ ರವಿ ಹತ್ಯೆಗೂ ಏನೇನೂ ಸಂಬಂಧವಿಲ್ಲ. ಯಾವುದೋ ಕಾಲಕ್ಕೆ ನಮ್ಮ ತಂದೆ ಮತ್ತು ಅವರ ತಂದೆ ಮಾಡಿಕೊಂಡ ಜಿದ್ದಾಜಿದ್ದಿಗೆ ನಾವೇಕೆ ಬಡಿದಾಡಬೇಕು ಎಂದು ತೀರ ವಿನಮ್ರನಂತೆ ಟೀವಿ ಸಂದರ್ಶನಕೊಟ್ಟಿದ್ದ.


ಪೆರಿಟಾಲ ರವಿಯ ಅನುಚರರಾದ ROC ನಾಯಕ ಪೋತುಲು ಸುರೇಶ್ ಜೊತೆ ತನಗೇನೂ ವೈರವಿಲ್ಲ. ಬೇಕಾದರೆ ಆತನ ಜೊತೆಗೂ ಮಾತಾಡ್ತೀನಿ ಎಂದಿದ್ದ ಮತ್ತೊಬ್ಬ ROC ನಾಯಕ ಚಮನ್ ಜೊತೆ ಕೂಡ ನನಗೆ ದುಷ್ಮನಿಯಿಲ್ಲ ಎಂದಿದ್ದ. ಕಾಲ, ವಯಸ್ಸು, ಪರಿಸ್ಥಿತಿ ಎಲ್ಲವೂ ಆತನನ್ನು ಮಾಗಿಸಿ, ಪಳಗಿಸಿತ್ತೇನೊ. ಆತನ ಪ್ರತೀಕಾರ ತೀರಿತ್ತು. ಆದರ ವಿರುದ್ಧ ಸೇಡಿಗಾಗಿ ಪೆರಿಟಾಲ ರವಿಯ ಬಂಟರೂ ಹೆಚ್ಚರಲಿಲ್ಲ. ಆದರೆ ಮಾಡಿದ ಪಾಪ ಮಾತ್ರ ಮುಗಿದಿರಲಿಲ್ಲ. ಅದು ಬಂಟ ಭಾನುಕಿರಣ್‌ನ ರೂಪದಲ್ಲಿ ಆತನ ಮಗ್ಗುಲಲ್ಲೇ ಮಲಗಿತ್ತು.

ಜೈಲಿಂದ ಹೊರಬಿದ್ದಿದ್ದೇ ಬಂಟ ಭಾನುಕಿರಣ್‌ನ ಮೇಲೆಯೇ ಅನುಮಾನಕ್ಕೆ ಬಿದ್ದ. ಯಾವುದೋ ಡೀಲೊಂದರಲ್ಲಿ ಭಾನು ತನ್ನ ಹೆಸರಲ್ಲಿ ಐದು ಕೋಟಿ ಕಮಾಯಿಸಿದ್ದಾನೆಂಬ ಅನುಮಾನ ಆತನನ್ನು ಕಾಡುತ್ತಿತ್ತು. ಅದು ನಿಜವಾಗುವ ಹೊತ್ತಿಗೆ ಸೂರಿಯ ಪ್ರಾಣವೇ ಹಾರಿಹೋಗಿತ್ತು. ಜನವರಿ 3 ರ ಮಧ್ಯಾಹ್ನ ಹೈದರಾಬಾದಿನ ತನ್ನ ಮಾದಪುರ್ ಅಪಾರ್ಟ್‌ಮೆಂಟಿನಿಂದ ವಕೀಲರನ್ನು ಕಾಣಲೆಂದು ಸ್ಕೋಡಾ ಕಾರು ಹತ್ತಿದ್ದಾನೆ. ಜೊತೆಗೆ ಭಾನುಕಿರಣ್ ಕೂಡಾ ಕಾರನ್ನೇರಿದ್ದಾನೆ. ಡ್ರೈವರ್ ಮಧುಸೂದನ ರೆಡ್ಡಿ ಮಾಮೂಲಿನಂತೆ ಕಾರನ್ನು ಹೈಟೆಕ್ ಸಿಟಿ, ಕೂಕಟ್‌ಪಲ್ಲಿ ಮೂಲಕ ಸನತ್ ನಗರಕ್ಕೆ ಓಡಿಸಿದ್ದಾನೆ. ಅಲ್ಲಿ ತನ್ನ ವಕೀಲರನ್ನು ಕಂಡು ನಾಲ್ಕೂವರೆಯ ಹೊತ್ತಿಗೆ ಮತ್ತೆ ಯೂಸುಫ್ ಗುಡಾದ ದಾರಿ ಹಿಡಿದು ಇನ್ನೇನು ನವೋದಯ ಕಾಲನಿಗೆ ಬರಬೇಕು. ಅಷ್ಟರಲ್ಲೇ ಹಿಂದೆ ಕುಳಿತಿದ್ದ ಭಾನು ತನ್ನ ರಿವಾಲ್ವರ್ ಹಿರಿದಿದ್ದೇ ಫೈರ್ ಮಾಡಿಬಿಟ್ಟ. ಒಂದು ಗುಂಡು ತಲೆಗೇ ಹೊಕ್ಕರೆ ಮತ್ತೊಂದು ಗುಂಡು ಕಿವಿ ಪಕ್ಕ ತೂರಿ ಗಲ್ಲವನ್ನು ಹೊಕ್ಕಿತ್ತು. ಡ್ರೈವರ್ ಮಧುಸೂದನ ರೆಡ್ಡಿಗೆ ಕಾರು ನಿಲ್ಲಿಸಲು ಹೇಳಿದ ಭಾನು ಆರಾಮಶೀರ ನಡೆದು ಹೋಗಿದ್ದ. ಸಂಜೆ ಏಳೂಕಾಲರ ಹೊತ್ತಿಗಲ್ಲಾ ಜ್ಯೂಬಿಲಿ ಹಿಲ್ಸ್‌ನ ಅಪೋಲೋ ಆಸ್ಪತ್ರೆಯಲ್ಲಿ ಸೂರಿ ಪ್ರಾಣ ಬಿಟ್ಟಿದ್ದ.

ತನ್ನ ಶತ್ರುಗಳಿಂದ ಅದೆಷ್ಟು ಹುಷಾರಾಗಿದ್ದರೂ ಸಾವಿನಿಂದ ಆತ ಬಚಾವಾಗಲೇ ಇಲ್ಲ. ಅದು ರಾಯಲಸೀಮೆಯ ರಕ್ತ ವೈಚಿತ್ರ. ಪೆರಿಟಾಲ ರವಿಯ ಇಡೀ ಕುಟುಂಬವೇ ನಿರ್ನಾಮವಾಯಿತು. ಆತನ ಕಡುವೈರಿ ಸೂರಿಯೂ ಮುಗಿದುಹೋದ. ಪರಸ್ಪರ ಕತ್ತಿಮಸೆದ ಎರಡು ಕುಟುಂಬಗಳ ಎರಡೂ ತಲೆಮಾರುಗಳು ಈ ಮೂಲಕ ಮುಗಿದುಹೋದಂತಾಯ್ತು. ಇಷ್ಟಕ್ಕೇ ಇದು ಮುಗಿಯುತ್ತಾ? ಬಲ್ಲವರ್‍ಯಾರು?



ನಿತ್ಯಾನಂದನ ಸಂಪತ್ತಿನ ಮೇಲೆ ಹಿಂದೂ ನಾಯಕರ ಕಣ್ಣು!



ಾಸಲೀಲಾ ಪ್ರವೀಣ ನಿತ್ಯಾನಂದ ಸ್ವಾಮಿ ಹೊಸ ಮೇಕಪ್ಪಿನೊಂದಿಗೆ ಕಾಣಿಸಿಕೊಂಡಿದ್ದಾನೆ.

ದೇನು ಅನಿರೀಕ್ಷಿತವಲ್ಲ ಬಿಡಿ. ಜೊತೆಗೆ ನಿತ್ಯನ ನಿತ್ಯ ತಯಾಗಿದ್ದ ನಟಿ ರಂಜಿತಾಳೂ ಕಾಣಿಸಿಕೊಂಡಿದ್ದಾಳೆ.

ಾಗೆ ನೋಡಿದರೆ ಅದೂ ಅನಿರೀಕ್ಷಿತವೇನಲ್ಲ.

ದರೆ ಈ ಬಾರಿ ನಿತ್ಯನ ಸುತ್ತ ಅಣಿನೆರೆದಿರುವ ಕೆಲ ಹೊಸ ಗಳಿವೆ. ಚೋಭದ್ರಗೇಡಿ ಮುಖಗಳವು. ಅವು ಹಿಂದೂ ಟನೆಗಳ ನಾಯಕರದ್ದು! ಶ್ರೀರಾಮಸೇನೆಯ ಪ್ರಮೋದ್ ಾಲಿಕ, ವಿಶ್ವಹಿಂದೂ ಪರಿಷತ್ತಿನ ಪ್ರವೀಣ್ ಭಾಯ್ ಡಿಯಾ, ಬೆಂಗಳೂರಿನ ಕೊಳದ ಮಠದ ಶಾಂತವೀರ ಎಂಬ **low profile** ಲಿಂಗಾಯತ ಮಠಾಧೀಶನೊಬ್ಬ ಿತ್ಯಾನಂದನ ಅಕ್ಕಪಕ್ಕ ನಿಂತು 'ಸ್ವಾಮಿ ನಿತ್ಯಾನಂದಕೀ ಜೈ' ದ್ದಾರೆ. ಇದಂತೂ ಪರಮಾಶ್ಚರ್ಯ ಹುಟ್ಟಿಸುವಂತಿದೆ.

.ಒಳಮರ್ಮ ಏನೆಂದು ಹುಡುಕುತ್ತಾ ಹೊರಟರೆ ಸಿಗುವುದು ಮತ್ತದೆ ಸು ತಂತ್ರಗಳು. ದುಡ್ಡ ಕಾಸು. ಸಂಪತ್ತಿನ ಹಂಚಿಕೆಯ ಡೀಲ್ ಇದು.

ಳಿಕೊಳ್ಳಲಿಕ್ಕೆ ಬೇರೆ ಯಾವ ಹೆಮ್ಮೆಯೂ ಇರದಿದ್ದಾಗ ಇಂತವರಿಗೆ ಬಿಗಳೇ ಹೆಮ್ಮೆ ಪಡುವ ವಸ್ತುಗಳಾಗಿ ಬಿಡುತ್ತಾರೆ. ಕಚ್ಚೇಹರುಕ ದ ಸ್ವಾಮಿ ಮತ್ತಾತನ ಸುತ್ತಾ ಮತ್ತೆ ಸೇರಿ ಚಪ್ಪಾಳೆ ತಟ್ಟುತ್ತಿರುವ ಜನರತ್ತ ಒಮ್ಮೆ ನೋಡಿ....!

್ಯಾತ್ಮ ಅಂದರೆ ತರಹೇವಾರಿ ಸೆಕ್ಸ್ ಅಂದುಕೊಂಡಿರುವ ನಟಿ ರಂಜಿತ ಕಾಣಿಸಿಕೊಂಡಿದ್ದಾಳೆ. ಈ ರಂಜಿತಾಳ ಹಿಂದಿ ನಟಿ ಜೂಹಿ ಚಾವ್ಲಾ ಹಾಗೂ ಕನ್ನಡದ ಉದ ಖ ನಿವೃತ್ತ ನಟಿ ಮಾಳವಿಕಾ ಕೂಡಾ ಕಾಣಿಸಿಕೊಂಡಿದ್ದಾಳೆ.

ಗ ಹಡಬೆ ಧರ್ಮಗುರು ನಿತ್ಯಾನಂದ ಮತ್ತೆ ಗಿರುವುದೂ, ಮತ್ತವನ ಸುತ್ತಾ ಅನೇಕ ತರಲೆ ಜನ ಬಡು ಜೈಕಾರ ಹಾಕುತ್ತಿರುವುದು ಅನುಮಾನಾಸ್ಪದವಾಗಿದೆ.

ನೀಚರೆಲ್ಲಾ ಒಟ್ಟಿಗೆ ಸೇರಿ ನಿತ್ಯಾನಂದನ ರಾಸಲೀಲೆ ಳು ಘಟನೆಯನ್ನೇ ಕ್ರೈಸ್ತ ಮಿಷನರಿಗಳ ಪಿತೂರಿ ಬುವುದಂತೂ ಕುತೂಹಲಕಾರಿಯಾಗಿದೆ. ಒಂದು ವೇಳೆ ವನ ಕಾರು ಚಾಲಕನ ಹೆಸರು ಲೆನಿನ್ ಎಂಬುದರ ಬದಲಾಗಿ ಖಾನ್ ದ್ದರೆ ಈ ಜೋಕರ್‌ಗಳು ಅದನ್ನು ಆಲ್ ಖೈದಾ ಸಂಚು ಡುತ್ತಿದ್ದರೆಂದು ಕಾಣುತ್ತದೆ?

2010ರ ಮಾರ್ಚ್‌ನಲ್ಲಿ ರಿಲೀಸಾದ ನಿತ್ಯ-ರಂಜಿತಾಳ ರಾಸಲೀಲೆ ಸೂಪರ್ ಹಿಟ್ ಆಗಿತ್ತು. ಆಸ್ತಿಕರು, ನಾಸ್ತಿಕರೆನ್ನದೆ ಎಲ್ಲರೂ ಹಿಂದೂ ಧರ್ಮಗುರುವೊಬ್ಬನ ವಿಕೃತ ಲೈಂಗಿಕ ಚಾಳಿಯನ್ನು ನೋಡಿ ಬೆರಗಾಗಿದ್ದರು. ಇಂತವು ಹಿಂದೆಯೂ ನೂರಾರು ನಡೆದಿವೆ. ಈಗಲೂ ನಡೆಯುತ್ತಿದೆ. ಆದರೆ ನಿತ್ಯನ ರಾಸಲೀಲೆ ನೋಡಿದ ಕೋಟ್ಯಂತರ ಜನ ಕ್ಯಾಕರಿಸಿ ಉಗಿಯುತ್ತಿದ್ದಾಗಲೂ ಹಿಂದೂ ಸಂಘಟನೆಗಳ ನಾಯಕರು ಈಗಲೂ ನಿತ್ಯನ ಪರ ಜೈಕಾರ ಹಾಕುತ್ತಿರುವುದು ಅನುಮಾನ ಹುಟ್ಟಿಸುತ್ತಿದೆ. ರಂಜಿತಾ 'ಸಿಡಿಯಲ್ಲಿರುವುದು ನಾನಲ್ಲ ಇದು ಕ್ರೈಸ್ತ ಮಿಷನರಿಗಳ ಸಂಚು' ಎನ್ನುತ್ತಿದ್ದಾಳೆ.




ಇದು ಲಾಯರ್‌ಗಳು ಅವಳಿಗೆ ಹೇಳಿ ಕೊಟ್ಟಿರುವ ಗಿಳಿಪಾಠ ಅಷ್ಟೆ.

ಇದೆಲ್ಲದರ ಹಿಂದಿರುವುದು ನಿತ್ಯಾನಂದನ ಬಳಿ ಶೇಖರಗೊಂಡಿರುವ ನೂರಾರು ಕೋಟಿ ರೂಪಾಯಿ ಬೆಲೆಯ ಸಂಪತ್ತಿನ ಮೇಲೆ ಹಿಂದೂ ನಾಯಕರ ಕಾಕದೃಷ್ಟಿ ಬಿದ್ದಿರುವುದೇ ಆಗಿವೆ.

ನಿತ್ಯನ ಬಳಿ ಏನುಂಟು, ಏನಿಲ್ಲ

ತಮಿಳುನಾಡಿನ ತಿರುವಣಾಮಲೈನಲ್ಲಿ ಆರ್ಡಿನರಿ ಫ್ಯಾಮಿಲಿಯಲ್ಲಿ ಹುಟ್ಟಿದ ರಾಜಶೇಖರ ಆಲಿಯಾಸ್ ನಿತ್ಯಾನಂದ **2003**ರಲ್ಲಿ ಬೆಂಗಳೂರಿಗೆ ಕಾಲಿಟ್ಟಾಗ ಅವ ಬಳಿ ಕಿಲುಬು ಕಾಸೂ ಇರಲಿಲ್ಲ. ಆಗ ಬೆಂಗಳೂರು ತಮಿಳು ಸಂಘದ ನಾಯಕ ಷಣ್ಮುಗ ಸುಂದರಂ, ಚಾಮುಂಡೇಶ್ವರಿ ಸ್ಟುಡಿಯೋ ಮಾಲೀಕ ಕುಪ್ಪುಸ್ವಾಮಿ ನಾಯ್ಡು, ಭೂಗಳ್ಳ ಅರುಣಾಚಲಂ ಎಲ್ಲಾ ಸೇರಿ ಹಣ ಕೊಟ್ಟು ನಿತ್ಯನಿಗೊಂದು ಆಶ್ರಮ ಮಾಡಿಕೊಟ್ಟರು.



ಬಿಡದಿಯ ಕಲ್ಲುಗೋಪನಹಳ್ಳಿಯಲ್ಲಿ 18 ಎಕರೆ ಜಮೀನನ್ನು ಆಗಲೇ ಒಂದು ಕೋಟಿ ರೂಪಾಯಿ ಕೊಟ್ಟು ನಿತ್ಯಾನಂದ ಖರೀದಿಸಿದ್ದ. ನಂತರ ಅವನ ಆಧ್ಯಾತ್ಮಿಕ ವ್ಯಾಪಾರ ಬೆಳೆದೂ, ಬೆಳೆದೂ 2010ರ ಶುರುವಿನ ವೇಳೆಗೆ ಬೃಹತ್ ಆಧ್ಯಾತ್ಮತ ಬ್ಯುಸಿನೆಸ್ ಆಗಿ ಬೆಳೆದಿತ್ತು. 33 ದೇಶಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಶಾಖೆಗಳು ತಲೆ ಎತ್ತಿದ್ದವು. ಧ್ಯಾನ, ಯೋಗ, ಶಿವಲಿಂಗ ಸ್ಥಾಪನೆ, ವೈದ್ಯ ಸರೋವರ... etc etc... ಹೆಸರಿನಲ್ಲಿ ಭಕ್ತರಿಂದ ನೂರಾರು ಕೋಟಿ ರೂಪಾಯಿ ದೋಚಲಾಗುತ್ತಿತ್ತು.

ಇದೆಲ್ಲಾ ಭರಾಟೆಯಿಂದ ನಡೆಯುತ್ತಿದ್ದಾಗಲೇ ನಿತ್ಯಾನಂದ ರಂಜಿತಾ ಜೊತೆಯಲ್ಲಿ ಬೆಡ್‌ರೂಂನಲ್ಲೇ ಸಿಕ್ಕಿಬಿದ್ದ.

ಇದರಿಂದಾಗಿ ನಿತ್ಯನ ವಹಿವಾಟಿಗೆ ಹಿನ್ನಡೆಯಾದದ್ದಂತು ನಿಜ. ಆದರೆ ಹರಿದು ಬಂದಿದ್ದ ಸಂಪತ್ತಿನ ಸಂಗ್ರಹವೇನೂ ಕರಗಿರಲಿಲ್ಲ. ಸಾವಿರಾರು ಶಾಖೆಗಳು, ಕಟ್ಟಡಗಳು, ಭೂಮಿ, ವಾಹನಗಳು, ಪುಸ್ತಕ, ಸಿಡಿ ವ್ಯಾಪಾರಗಳೆಂಬ ಅವನ ಬ್ಯುಸಿನೆಸ್‌ನ ಪಿಲ್ಲರ್‌ಗಳು ಈಗಲೂ ಉಳಿದುಕೊಂಡಿವೆ.

ಆದರೆ ನಿತ್ಯಾನಂದನಿಗೊಂದು **Face lift** ಬೇಕಿದೆ ಈಗ.



ಮತ್ತೊಂದೆಡೆ ಈ ತೊಗಾಡಿಯಾನಂತಹ ಹಿಂದೂ ನಾಯಕರಿಗೆ ನಿತ್ಯಾನಂದ ಕಟ್ಟಿರುವ ಸಾಮ್ರಾಜ್ಯ 'ಹಿಂದೂ ಧರ್ಮೋದ್ಧಾರಕ್ಕೆ' ಉಳಿಯಬೇಕಿದೆ. ಇಂತಹ ನೆಟ್‌ವರ್ಕ್‌ಅನ್ನು ಅವರು ಹಿಂದೂ ಕೋಮುವಾದ ಹಬ್ಬಿಸಲು ಬಳಸುತ್ತಾರೆ. ಹಾಗಾಗಿ ಹಿಂದೂ ಲೀಡರ್‌ಗಳೀಗ ನಿತ್ಯನ ಪರ ನಿಂತು ಚೀರಿಕೊಳ್ಳುತ್ತಿದ್ದಾರೆ.

ಈ ಪ್ರಮೋದ್ ಮುತಾಲಿಕ್ ಎಂತವನೆಂದು ಜಗತ್ತಿಗೆ ಗೊತ್ತಿದೆ. ಗಲಾಟೆಯೆಬ್ಬಿಸಲು ದುಡ್ಡಿನ ಡೀಲ್ ಕುದುರಿಸಲು ಹೋಗಿ ಸಿಕ್ಕಿಬಿದ್ದ ಖದೀಮ ಇವನು.

ಇವನೀಗ ನಿತ್ಯನ ಪರ ವಕಾಲತ್ತು ವಹಿಸಿದ್ದಾನೆ.

ಕೊಳದಮಠದ ಶಾಂತವೀರ ಸ್ವಾಮಿಯಂತೂ ಹಾಲಿಗೂ, ಹೇಸಿಗೆಗೂ ವ್ಯತ್ಯಾಸವೇ ಗೊತ್ತಿರದ ಹುಂಬ. ಇದೇ ಶಾಂತವೀರ ಸ್ವಾಮಿ ಪರಮ ಭ್ರಷ್ಟ ಮುಖ್ಯಮಂತ್ರಿ ಯಡಿಯೂರಪ್ಪನ ಪರ ಬೀದಿಯಲ್ಲಿ ನಿಂತು ಘೋಷಣೆ ಹಾಕಿದ್ದ.

ಹೀಗೆ ಲವಲೇಶದಷ್ಟು ನೈತಿಕತೆಯಿರದ ಭ್ರಷ್ಟಾಚಾರದ ಹೊಲಸನ್ನೇ ಮೈಗೆ ಹತ್ತಿಸಿಕೊಂಡಿರುವ ಖದೀಮರೆಲ್ಲ ಪರಮ ಶ್ರೀಮಂತ ಲಂಪಟ ಸ್ವಾಮಿ ನಿತ್ಯಾನಂದನ ಪರ ನಿಲ್ಲುತ್ತಾರೆಂದರೆ ಅದು ದುಡ್ಡಿನ ಡೀಲ್ ಅಲ್ಲದೆ ಬೇರೇನಾಗಿರಲು ಸಾಧ್ಯ ಹೇಳಿ?

ನಿತ್ಯ ತನ್ನ ರಾಸಲೀಲೆ ಸಿಡಿ ಬಹಿರಂಗಪಡಿಸದಂತೆ ಕಾರ್ ಚಾಲಕ ಲೆನಿನ್‌ಗೆ 50 ಕೋಟಿ ರೂ. ಕೊಡುವ ಆಮಿಷ ಒಡ್ಡಿದ್ದ. ಹಾಗಿರುವಾಗ ತನ್ನ ಪುನರ್ ಪ್ರತಿಷ್ಠಾಪನೆಗೆ ಟೊಂಕ ಕಟ್ಟಿ ನಿಂತಿರುವ ಹಿಂದೂ ನಾಯಕರಿಗೆ ಅದಿನೆಷ್ಟು ಹಣ ಕೊಡುವ ಡೀಲ್ ಕುದುರಿಸಿದ್ದಾನೋ?

…ಹಿಳೆಯರೊಂದಿಗೆ …ಸ್ಯ ಒಪ್ಪಂದ!

…ಈ ನಿತ್ಯಾನಂದ ಖತರ್‌ನಾಕ್ ಇದ್ದಾನೆ. ಆಧ್ಯಾತ್ಮಿಕ ಸ್ಫೂರ್ತಿ ಹಾಗೂ ಸಾಧನೆಗಾಗಿ …ಶ್ರಮಕ್ಕೆ ಬರುತ್ತಿದ್ದ ಹೆಂಗಸರ ಪೈಕಿ ಚೆಂದಗಿರುವವರನ್ನು ವಿಶ್ವಾಸಕ್ಕೆ ತೆಗೆದುಕೊಂಡು …ಂದು ಲಿಖಿತ ಒಪ್ಪಂದ ಮಾಡಿಕೊಳ್ಳುತ್ತಿದ್ದ. ಲೈಂಗಿಕ ಸಂಬಂಧದ ಅಗ್ರಿಮೆಂಟ್ …ಅದರ ಸಾರಾಂಶ ಹೀಗಿರುತ್ತಿತ್ತು, ಈ ಆಧ್ಯಾತ್ಮಿಕ ಜ್ಞಾನದರ್ಶನದ ಕಲಿಕೆ …ಆಚರಣೆಯು ಪ್ರಾಚೀನ ತಾಂತ್ರಿಕ ರಹಸ್ಯ ವಿಧಾನವಾಗಿದ್ದು ಅದರಲ್ಲಿ …ರುವರಿಬ್ಬರೂ ಭಾಗಿಯಾಗಬೇಕಾಗುತ್ತದೆ. ಸಾಧಕರ ನಡುವೆ ಪರಸ್ಪರ ಆಪ್ತತೆ, …ಕ ಸಂಪರ್ಕ ಏರ್ಪಡಲು ಸಂತಸ ಹಾಗೂ ಸ್ವಾತಂತ್ರ ಅನುಭವಿಸಲು ಲೈಂಗಿಕತೆಯೂ …ಸಾಧನವಾಗಿರುತ್ತದೆ ಮತ್ತು ನಾವಿದನ್ನು ಒಪ್ಪಿಯೇ ಈ ಕ್ರಿಯೆಯಲ್ಲಿ …ಾಗಿದ್ದೇನೆ.

…ದು ನಿತ್ಯನ ಸೆಕ್ಸ್ ಅಗ್ರಿಮೆಂಟ್. ಸ್ವಾಮಿ ನಿತ್ಯಾನಂದ ನಟಿ ರಂಜಿತಾ ಸೇರಿದಂತೆ …ಹೆಂಗಸರಿಂದ ಈ ರೀತಿಯ ಅಗ್ರಿಮೆಂಟ್‌ಗೆ ಸಹಿ ಮಾಡಿಸಿಟ್ಟುಕೊಂಡಿದ್ದ …ದೆ. ಸಿಒಡಿ ಪೋಲಿಸರು ಬಿಡದಿಯ ಆಶ್ರಮದಿಂದ ಅನೇಕ ಅಗ್ರಿಮೆಂಟ್ …ನ್ನು ವಶಪಡಿಸಿಕೊಂಡಿದ್ದಾರೆ.

…ಗೆ ಈ ಅಗ್ರಿಮೆಂಟ್ ಯಾಕೆ ಬೇಕಿತ್ತೆಂದರೆ ಮುಂದೊಂದು ದಿನ ಯಾರಾದರೂ …"ನನ್ನ ಸಂಬಂಧ ದೈಹಿಕ ಶೋಷಣೆ ಮಾಡಿದರೆಂದು" ಪೋಲೀಸರಿಗೆ ದೂರು …ಸಿ ನಿಯಂತ್ರಿಸಲು ಇದೊಂಥರ ಬಲಿಪಶುವಾಗಲಿರುವ ಮಹಿಳೆಯರಿಂದಲೇ …ಬರಿ ಚೆಕ್ ಪಡೆದು ಅತ್ಯಾಚಾರಕ್ಕೆ ಯತ್ನಿಸಿದಂತೆ.

ಸ್ವಂತಕ್ಕೊಂದು ದ್ವೀಪ ಖರೀದಿ!

ನಿತ್ಯನ ಕೀರ್ತಿ ಮತ್ತು ಖಯಾಲಿಗಳು ಯಾವ ಮಟ್ಟಕ್ಕಿತ್ತೆಂದರೆ ಅವನು ರಾಸಲೀಲೆಯಲ್ಲಿ ಸಿಕ್ಕಿಬೀಳುವ ಮುನ್ನ ಅಮೆರಿಕಾದಲ್ಲೊಂದು ಖಾಸಗಿ ಐಲ್ಯಾಂಡ್ ಖರೀದಿಗೂ ರೆಡಿಯಾಗಿಬಿಟ್ಟಿದ್ದ! ಇದೊಂದರಿಂದಲೇ ನಿತ್ಯನ ವಹಿವಾಟು, ಆಧ್ಯಾತ್ಮಿಕ ಹಾಗೂ ಸೆಕ್ಸ್ ವ್ಯಾಪಾರದ ಭರಾಟೆ ಎಷ್ಟಿತ್ತೆಂಬುದನ್ನು ಅಂದಾಜಿಸಬಹುದು. ಇಂಡಿಯಾ ದೇಶದ ಇನ್ನೊಬ್ಬ ಬಾಬಾ ರಾಂದೇವ ಎಂಬುವನು ಸ್ಕಾಟಲ್ಯಾಂಡ್‌ನಲ್ಲೊಂದು ಸ್ವಂತಕ್ಕೆ ಐಲ್ಯಾಂಡ್ ಖರೀದಿಸಿದ್ದು ನಿತ್ಯನ ಮನಸ್ಸು ಅತ್ತ ಯೋಚಿಸುವಂತೆ ಮಾಡಿತ್ತು. ಯೂರೋಪ್, ಅಮೆರಿಕಾಗಳಲ್ಲಿನ ಬಹುತೇಕ ಜನ ಯಂತ್ರಮಾನವರಂತಿದ್ದು ಅಂತವರ ಭಾವನೆಗಳನ್ನು ಬಡಿದೆಬ್ಬಿಸಿ ದುಡ್ಡು ದೋಚುವುದು ಬಾಬಾಗಳೆಸಿಕೊಂಡವರಿಗೆ ಸಲೀಸು.

ಧ್ಯಾನಕ್ಕೆ ನೂರು ಡಾಲರ್ ಯೋಗಕ್ಕೆ ಐನೂರು, ಲಾಗಕ್ಕೆ ಸಾವಿರ ಡಾಲರ್ ಚಾರ್ಜ್ ಮಾಡಿದರೂ ಮರು ಮಾತಾಡದೆ ಕೊಡುವ ಜನ ಅಲ್ಲಿದ್ದಾರೆ. ನಿತ್ಯಾನಂತವರಿಗೆ ಅಸಲಿ ಭರ್ಜರಿ ಬ್ಯುಸಿನೆಸ್ ಕುದುರುಕತ್ತೆ, ಹಾಗಾಗಿಯೇ ಇಂಡಿಯಾ ದೇಶದಿಂದ ಡಾಕ್ಟರು, ಇಂಜೀನಿಯರುಗಳಷ್ಟೇ ಸಂಖ್ಯೆಯ ಬಾಬಾಗಳು, ಸ್ವಾಮಿಗಳು ವಿದೇಶಗಳಿಗೆ ರಫ್ತಾಗುತ್ತಿರುತ್ತಾರೆ.

ಈ ನಿತ್ಯ ಏನು ಮಾಡಿದನೆಂದರೆ ಅಮೆರಿಕಾದಲ್ಲಿದ್ದ ತನ್ನ ಮೂರ್‍ನಾಲ್ಕು ಬ್ರಾಂಚುಗಳಿಗೆ ಬರುತ್ತಿದ್ದ ಭಕ್ತರ ತಲೆತಿಕ್ಕಿ ಆಶ್ರಮಕ್ಕೊಂದು ಖಾಸಗಿ ದ್ವೀಪ ಖರೀದಿಸಿದರೆ ಹೇಗೆಂದು ಪುಳ ಬಿಟ್ಟ. ನಿತ್ಯನ ತಾಂತ್ರಿಕ ಸೆಕ್ಸ್‌ನ ಕಿಕ್ ಪಡೆಯುತ್ತಿದ್ದ ಕೆಲ ಭಕ್ತರಿಗೆ ಇದಿನ್ನು ಭಾರಿ ಮಜಾ? ಅನ್ನಿಸಿ ಅಂತಹವರೆಲ್ಲಾ ಸೇರಿ ದ್ವೀಪ ಖರೀದಿಗೆ ಹಣ ಕೊಡಲು ಶುರು ಮಾಡಿದ್ದರು. ಅಮೆರಿಕಾದ ದಕ್ಷಿಣ ತುದಿಯ ಕ್ಯಾಲಿಫೋರ್ನಿಯಾದ ರಾಜ್ಯದ ರಾಜಧಾನಿ ಲಾಸ್ ಏಂಜಲೀಸ್ ಸುತ್ತಮುತ್ತ ಮಾರಾಟಕ್ಕೆ ಸಿಗುವ ಡಜನ್‌ಗಟ್ಟಲೆ ಖಾಸಗಿ ಐಲ್ಯಾಂಡ್‌ಗಳಿವೆ. ಅದೇ ರೀತಿ ಕೆನಡಾ, ಸ್ಕಾಟ್‌ಲ್ಯಾಂಡ್, ಸ್ಪೇನ್, ಮಧ್ಯ ಅಮೆರಿಕಾಗಳಲ್ಲಿ ದ್ವೀಪಗಳು ಮಾರಾಟವಾಗುತ್ತಿರುತ್ತವೆ. ಪಶ್ಚಿಮ ದೇಶಗಳ ಭಾರಿ ಶ್ರೀಮಂತರು ತಮ್ಮ ವಿಲಾಸಿ ಜೀವನಕ್ಕಾಗಿ ಇಂತಹ ದ್ವೀಪಗಳನ್ನು ಖರೀದಿಸುತ್ತಿರುತ್ತಾರೆ. ಸರಾಸರಿ ಆರ್‌ರಿಂದ ನೂರು ಎಕರೆ ವಿಸ್ತೀರ್ಣದ ಈ ದ್ವೀಪಗಳ ಬೆಲೆ ಮೂರು ಕೋಟಿ ರೂಪಾಯಿಗಳಿಂದ ನೂರಾರು ಕೋಟಿ ರೂ.ವರೆಗಿರುತ್ತವೆ.

ಕ್ಯಾನರಿ ಐಲ್ಯಾಂಡ್, ಪೈನ್, ಲಿಟಲ್, ಲಾಕ್ ಗೇಟ್, ಬ್ಯಾಸ್ಟಿಸ್, ಸ್ಯಾನ ನಿಕೋಲಸಿ ಸಂತ ಬಾಬಾರ ಕ್ಯಾತಲಿನ ಇತ್ಯಾದಿ ಹೆಸರಿನ ಈ ದ್ವೀಪಗಳು ಯಾರ್‍ಯಾರದ್ದೋ ಒಡೆತನದಲ್ಲಿರುತ್ತವೆ. ಸೈಟು, ಮನೆಗಳಂತೆಯೇ ಕೊಳ್ಳುವ ಮಾರುವ ಡೀಲ್‌ಗಳೂ ನಡೆಯುತ್ತಿರುತ್ತವೆ. ಆದರೆ ಯಾವಾಗ ನಿತ್ಯನ ರಾಸಲೀಲೆ ಹೊರಬಂದು ಅವನ ಮಾನ ಹರಾಜಾಯಿತೋ ಭಕ್ತರು ಹಿಂಜರಿದರು. ಹಣ ಸಂಗ್ರಹಣೆಯೂ ನಿಂತಿತು. ನಿತ್ಯನ ಸ್ವಂತದ ಐಲ್ಯಾಂಡ್ ಮಾಲೀಕತ್ವದ ಆಸೆ ಈಡೇರಲಿಲ್ಲ. ಅದೇನೇ ಇರಲಿ.

ಪಶ್ಚಿಮ ದೇಶಗಳ ಕೋಟ್ಯಾಧೀಶರುಗಳ ಲೆವೆಲ್‌ನಲ್ಲೇ ಯೋಚಿಸುತ್ತಾ ಅಮೆರಿಕಾದಲ್ಲೊಂದು ಐಲ್ಯಾಂಡ್ ಖರೀದಿಗೆ ನಿತ್ಯ ಹೊರಟಿದ್ದನೆಂದರೆ ಅವನ ಹತ್ತಿರವಿರುವ ಸಂಪತ್ತಿನ ರಾಶಿ ಅದಿನ್ನೆಷ್ಟಿರಬೇಕು....

ಮೈಸೂರು: ಬಿಜೆಪಿ ಆಸೆ ನುಚ್ಚುನೂರು!

ಮೈಸೂರಿನಲ್ಲಿ ತನ್ನೆಲ್ಲಾ ಶಕ್ತಿ ಬಳಸಿ ಈ ಬಾರಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಬಾವುಟ ಹಾರಿಸುವ ಬಿಜೆಪಿಯ ಕನಸು ಮತ್ತೊಮ್ಮೆ ಕಮರಿದೆ. ಬಿಜೆಪಿ ಅಧಿಕಾರ ಹಿಡಿಯುವ ಧಾವಂತದಲ್ಲಿ ಸರ್ಕಾರಿ ಯಂತ್ರಾಂಗವನ್ನು ಬಳಸಿಕೊಂಡು ಮಾಡಿದ ಅಕ್ರಮ- ಅನಾಚಾರಗಳು ಅಷ್ಟಿಷ್ಟಲ್ಲ. ಆಪರೇಷನ್ ಕಮಲದ ಮುಂದುವರಿಕೆಯಂತೆ ಅನ್ಯ ಪಕ್ಷದ ಅಭ್ಯರ್ಥಿಗಳನ್ನೇ ಖರೀದಿ ಮಾಡುವಂತಹ ಕೀಳುಮಟ್ಟಕ್ಕಿಳಿದು ಕೋಟಿಗಟ್ಟಲೆ ಹಣವನ್ನ ನೀರಿನಂತೆ ಹರಿಸಿದರೂ ಜಿ.ಪಂನಲ್ಲಿ ಗಣನೀಯ ಸ್ಥಾನಗಳನ್ನು ಗಳಿಸಲಾಗಿಲ್ಲ. ಕಾಂಗ್ರೆಸ್‌ನ ಒಳ ಕಚ್ಚಾಟದಿಂದಾಗಿ ನಂಜನಗೂಡಿನ ತಾಪಂನ ಅಧಿಕಾರ ಹಿಡಿದಿದೆಯೆಂಬುದನ್ನು ಬಿಟ್ಟರೆ, ಮಿಕ್ಕೆಲ್ಲೂ ಅಧಿಕಾರ ಹಿಡಿಯಲಾಗಿಲ್ಲ. ಯಡ್ಡಿ ಶಿಷ್ಯ ಸಿದ್ದಲಿಂಗಸ್ವಾಮಿಯ ಅಪಾಯಕಾರಿ ರಾಜಕಾರಣಕ್ಕೆ ಕಿಮ್ಮತ್ತು ಸಿಗದಿರುವುದೇ ಸಮಾಧಾನ.



ಮೈಸೂರಿನಲ್ಲಿ ಬಿಜೆಪಿಯ ರಾಮದಾಸ್ ಮತ್ತು ವಿಜಯಶಂಕರ್ 'ಎಂಬ ಸಚಿವದ್ವಯರಿದ್ದರೂ 'ಬಿಜೆಪಿ ಗಮನಾರ್ಹ ಸಾಧನೆಯನ್ನೇನೂ ತೋರಿಸಲಾಗಿಲ್ಲ. ಕಾಂಗ್ರೆಸ್‌ನ ಎಚ್.ವಿಶ್ವನಾಥ್, ಧ್ರುವನಾರಾಯಣ್ ಎಂಬಿಬ್ಬರು ಸಂಸದರು ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಏಳು ಶಾಸಕರನ್ನ ಆ ಪಕ್ಷ ಹೊಂದಿದ್ದರೂ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಸ್ಥಾನಗಳನ್ನ ಬಿಟ್ಟುಕೊಡಲು ಕಾಂಗ್ರೆಸ್‌ನ ಆಂತರಿಕ ಕಚ್ಚಾಟಗಳೇ ಮುಖ್ಯ ಕಾರಣವಾಗಿದೆ. ಆದರಲ್ಲೂ ಸಿದ್ದು ಮತ್ತು ಶ್ರೀನಿವಾಸ್ ಪ್ರಸಾದರು ಎರಡು ಬಣಗಳಾಗಿ ಮಾಡಿಕೊಂಡ ಅನಾಹುತದ ಪರಿಣಾಮದಿಂದ ಈ ಬಾರಿ ಸ್ವತಂತ್ರವಾಗಿ ಮೈಸೂರು ಜಿಪಂ ಚುಕ್ಕಾಣಿ ಹಿಡಿಯಲು ವಿಫಲವಾಗಿದೆ. ಆದರೆ ಲಿಂಗಾಯತರು ಮತ್ತು ಒಕ್ಕಲಿಗರನ್ನು ಜಾತಿ ಧ್ರುವೀಕರಣಗೊಳಿಸಿ ಜೆಡಿಎಸ್ ಮತ್ತು ಬಿಜೆಪಿ ದುರ್ಲಾಭ ಮಾಡಿಕೊಂಡಿವೆ. ನಂಜನಗೂಡಿಗೆ ಕಮಲ ಕನ್ನಹಾಕಿ ತಾಪಂ ಅನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿರುವುದರಲ್ಲಿ ಸಿದ್ದಲಿಂಗಸ್ವಾಮಿಯ ಅಕ್ರಮ ಮಾರ್ಗಗಳು ಕೆಲಸ ಮಾಡಿರುವುದು ಎದ್ದು ಕಾಣುತ್ತಿದೆ.


ರಾಮದಾಸ್

ಕೌಲಂದೆಯ ಜಿಪಂ ಕ್ಷೇತ್ರದಲ್ಲಿ ಸಿದ್ದಲಿಂಗಸ್ವಾಮಿಯ ಸಹೋದರ ಸಿದ್ದವೀರಪ್ಪನ ಗೆಲುವೂ ಸಹ ಅಭ್ಯರ್ಥಿಗಳ ಮತ್ತು ಮತದಾರರ ಖರೀದಿಯ ಫಲ. ಇದು ಇಲ್ಲಿಗೆ ಮಾತ್ರ ಸೀಮಿತವಾಗಿರಲಿಲ್ಲ. ಸಿದ್ದುವಿನ ವರುಣಾ ವಿಧಾನ ಸಭಾ ಕ್ಷೇತ್ರ, ಶ್ರೀನಿವಾಸ್ ಪ್ರಸಾದ್ ಪ್ರತಿನಿಧಿಸುವ ನಂಜನಗೂಡು ಮತ್ತು ಎಚ್.ಸಿ.ಮಹದೇವಪ್ಪ ಪ್ರತಿನಿಧಿಸುವ ಟಿ.ನರಸೀಪುರದ ಜಿಪಂ. ಮತ್ತು ತಾಪಂ. ಕ್ಷೇತ್ರಗಳ ಸುತ್ತಮುತ್ತ ಹಣ, ಹೆಂಡ ಹರಿದಾಡಲು ಯಾವುದೇ ಅಡೆತಡೆಗಳಿರಲಿಲ್ಲ. ಕಾಂಗ್ರೆಸ್‌ನ ನಾಯಕಮಣಿಗಳು ಒಟ್ಟಾಗಿ ಪ್ರಚಾರವನ್ನೇ ಮಾಡದ ಮತ್ತು ಗೆಲ್ಲುವ ಕ್ಯಾಂಡಿಡೇಟ್‌ಗಳಿಗೆ ಟಿಕೆಟ್ ನೀಡದ ನಂಜನಗೂಡು ತಾ.ಪಂ. ಬಿಜೆಪಿಯ ಪಾಲಾಗಲು ಕಾರಣರಾಗಿದ್ದಾರೆ. ಅದರಲ್ಲೂ ಸಿದ್ದರಾಮಯ್ಯನ ಬಲಗೈ ಬಂಟ ಮಾಜಿ ಜಿ.ಪಂ.ಅಧ್ಯಕ್ಷ ಎಸ್.ಸಿ.ಬಸವರಾಜುವಿನ ಸೋಲು ಸಿದ್ದುವಿಗೆ ಭಾರಿ ಹೊಡೆತ ಕೊಟ್ಟಿದೆ.

ಇನ್ನು ಮಾಜಿ ಸಿಎಂ ಕುಮಾರಸ್ವಾಮಿಯೇ ಬಂದು ಟೆಂಕಿ ಮಹದೇವರನ್ನು ಜೆಡಿಎಸ್‌ಗೆ ಕರೆತಂದರೂ ವರ್ಕ್‌ಔಟ್ ಆಗಿಲ್ಲ. ಆದರೂ ತುರಗನೂರಿನಲ್ಲಿ ವೀರಪ್ಪಗೌಡ ಮತ್ತು ಸೋಮನಾಥಪುರದಲ್ಲಿ ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ದಂಪತಿಗಳನ್ನ ಗೆಲ್ಲಿಸಿಕೊಳ್ಳುವುದರಲ್ಲಿ ಒಕ್ಕಲಿಗ ರಾಜಕೀಯ ಕೆಲಸ ಮಾಡಿದೆ. ಒಕ್ಕಲಿಗರು ಮತ್ತು ಕುರುಬರ ಗಣನೀಯ ಜನಸಂಖ್ಯೆಯನ್ನು ಹೊಂದಿರುವ ಕೆ.ಆರ್.ನಗರದಲ್ಲಿ ಕಾಂಗ್ರೆಸ್ ಸಂಸದ ಎಚ್.ವಿಶ್ವನಾಥ್ ಮತ್ತು ಮಾಜಿ ಶಾಸಕ ಮಂಚನಹಳ್ಳಿ ಮಹದೇವ್ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುತ್ತಿದ್ದರು. ಈ ಬಾರಿ ಇಲ್ಲಿ ಜೆಡಿಎಸ್‌ಗೂ ಸಮಬಲ ದೊರೆತಿದೆ. ರೇವಣ್ಣನ ಮಡದಿ ಭವಾನಿಯವರ ತವರಿನ ಪ್ರಭಾವ ಮತ್ತು ಹಾಲಿ ಶಾಸಕ ಸಾ.ರಾ ಮಹೇಶ್‌ನ ಪ್ರಭಾವಗಳು ಮೂರು ಸೀಟುಗಳನ್ನು ಜಿ.ಪಂಗೆ ಕಳುಹಿಸಲು ಕೆಲಸ ಮಾಡಿದೆ. ಆದರೆ ಸಾರಾ ಮಹೇಶ್ ತವರು ಸಾಲಿಗ್ರಾಮದಲ್ಲಿ ಜೆಡಿಎಸ್ ಗೆಲ್ಲುವ ಸಾಧ್ಯತೆ ಇದ್ದಾಗಿಯೂ, ಕಳೆದ ತಿಂಗಳುಗಳಲ್ಲಿ ಆತನ ಫ್ಯಾಮಿಲಿ ದಲಿತರ ಮೇಲೆ ನಡೆಸಿದ ದೌರ್ಜನ್ಯಕ್ಕೆ ಸರಿಯಾಗಿ ಮುಖಭಂಗವಾಗಿದೆ.

ಸಿದ್ದರಾಮಯ್ಯನವರ ಮಾಜಿ ಭಂಟ ಜಿ.ಟಿ.ದೇವೇಗೌಡ ಗೆದ್ದುಬರುತ್ತಿದ್ದ ಹುಣಸೂರಿನಲ್ಲಿ ಮತ್ತೆ ಜೆಡಿಎಸ್ ಪಾರುಪತ್ಯ ಮೆರೆದಿದೆ. ಹಾಲಿ ಶಾಸಕ ಹೆಚ್.ಪಿ.ಮಂಜುನಾಥ್ ಕಾಂಗ್ರೆಸ್‌ನವರಾಗಿದ್ದರೂ ಜಾತಿ ಕಾರಣದಿಂದಾಗಿಯೇ ಜೆಡಿಎಸ್ ಜಿ.ಪಂ.ನ ಆರು ಸ್ಥಾನಗಳಲ್ಲಿ ಮೂರು ಸ್ಥಾನಗಳನ್ನು ಗೆದ್ದುಕೊಂಡಿದೆ. ಕಾಗದದ ಹುಲಿ ಜಿ.ಟಿ.ದೇವೇಗೌಡ ತನ್ನ ಹೆಂಡತಿ ಲಲಿತಾರನ್ನ ಗೆಲ್ಲಿಸಿಕೊಂಡು ಖುಷಿಪಡುವಷ್ಟರ ಮಟ್ಟಿಗೆ ಬಿಜೆಪಿಯ ಪ್ರಭಾವ ಸೀಮಿತವಾಗಿದೆ. ತಾಪಂನಲ್ಲೂ ಜೆಡಿಎಸ್ ಚುಕ್ಕಾಣಿ ಹಿಡಿಯಲು ಎಮ್ಮೆಲ್ಸಿ ಚಿಕ್ಕಮಾದು ಮತ್ತು ಕುಮಾರಸ್ವಾಮಿಯವರ ನಾಯಕ ಮತ್ತು ಒಕ್ಕಲಿಗ ಸಮುದಾಯದ ಕಾಂಬಿನೇಷನ್ ಸಕ್ಸಸ್ ಆಗಿದೆ.

ಜಿಪಂ ತಾಪಂ ಫಲಿತಾಂಶ

ಕಾಂಗ್ರೆಸ್ ಶಾಸಕ ಕೆ. ವೆಂಕಟೇಶ್ ಪ್ರತಿನಿಧಿಸುವ ಪಿರಿಯಾಪಟ್ಟಣದಲ್ಲಿಯೂ ಜೆಡಿಎಸ್ ಐದು, ಜಿಪಂನಲ್ಲಿ ಮೂರನ್ನು ತನ್ನ ತೆಕ್ಕೆಗೆ ಹಾಕಿಕೊಂಡು ಬರುವಲ್ಲಿ ಸೋಮಶೇಖರ್ ಮತ್ತು ಸುರೇಶ್ ಪಾತ್ರ ವಹಿಸಿದ್ದಾರೆ. ಇಲ್ಲಿಯೂ ಸಹ ಜೆಡಿಎಸ್ ಕಾಂಗ್ರೆಸ್ ಪ್ರಭಾವ ಮಂಕಾಗಿಸಿ ಜಾತಿ ರಾಜಕಾರಣ ಮೆರೆದಿದೆ. ಇಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್‌ಗಳ ಮಧ್ಯೆ ಬಿಜೆಪಿಯವರು ತರಗೆಲೆಗಳಂತೆ ಉದುರಿ ಹೋಗಿದ್ದಾರೆ.


ಜೆಡಿಎಸ್‌ನ ಮಾಜಿ ಸಚಿವ ಎಂ.ಶಿವಣ್ಣ ಮತ್ತು ಎಮ್ಮೆಲ್ಸಿ ಸಂದೇಶ್ ನಾಗರಾಜುರ ಪ್ರತಿಷ್ಠೆಯ ಕಣವಾಗಿದ್ದ ಹೆಚ್.ಡಿ.ಕೋಟೆಯಲ್ಲಿ ಸ್ವತಃ ಕಾಂಗ್ರೆಸ್‌ನಿಂದ ಚಿಕ್ಕಣ್ಣ ಶಾಸಕನಾಗಿದ್ದರೂ ಇಲ್ಲಿ ಜೆಡಿಎಸ್‌ನ ಅಬ್ಬರದಿಂದ ಆರು ಸ್ಥಾನಗಳಲ್ಲಿ ಚಿಕ್ಕಣ್ಣೇಗೌಡ, ರಾಜಲಕ್ಷ್ಮಿ, ಪದ್ಮ ಬಸವರಾಜು ತರಹದ ಹೊಸಬರನ್ನ ಜೆಡಿಎಸ್ ಗೆಲ್ಲಿಸಿಕೊಂಡಿದೆ.

ಜೆಡಿಎಸ್‌ನಿಂದ ಸಿಡಿದು ಹೋಗಿ ಎಬಿಪಿಜೆಡಿ ಮಾಡಿಕೊಂಡಾಗ ಜಿ.ಪಂ ಅಧಿಕಾರ ಹಿಡಿಯಲು ಶಕ್ತರಾಗಿದ್ದ ಸಿದ್ದರಾಮಯ್ಯ ಈಗ ಕಾಂಗ್ರೆಸ್‌ನ ರಾಜ್ಯ ನಾಯಕರಾಗಿದ್ದೂ ಜಿಪಂ ಅಧಿಕಾರ ಪಡೆಯಲು ಜೆಡಿಎಸ್‌ನ ಜೊತೆ ಕೈ ಮಿಲಾಯಿಸಲೇಬೇಕಿದೆ. ಸಿದ್ದರಾಮಯ್ಯನವರೇ ಬಲ ಕಳೆದುಕೊಂಡರೋ ಅಥವಾ ಕಾಂಗ್ರೆಸ್‌ನ ಸ್ಥಾಪಿತಹಿತಾಸಕ್ತಿಗಳು ಅದನ್ನು ಕುಗ್ಗಿಸಿದವೋ... ಆದರೆ ಅವರ ಬಲ ಕುಗ್ಗಿರುವುದಂತೂ ಖಂಡಿತ. ಬಿಜೆಪಿಯ ಬಲ ಮೈಸೂರು ನಗರದಲ್ಲೇ ಹೆಚ್ಚು ಮತ್ತು ಜೆಡಿಎಸ್ ಪ್ರಾಬಲ್ಯ ಹಳ್ಳಿಗಳಲ್ಲಿ ಕುಗ್ಗಿಲ್ಲ ಎಂಬುದು ಇಲ್ಲಿ ಸಾಬೀತಾಗಿದೆ.

• ಲಕ್ಷ್ಮಣ್ ಚೀರನಹಳ್ಳಿ

ಚಿಕ್ಕಮಗಳೂರು: ಬಿಜೆಪಿ ಗೆಲುವಿನ ರಹಸ್ಯವೇನು?

ಬಿಜೆಪಿ ಪಕ್ಷ ಇಡೀ ಚಿಕ್ಕಮಗಳೂರು ಜಿಲ್ಲೆಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಒಂದಷ್ಟು ಕಾರ್ಯಕರ್ತರು ಹಾಗೂ ಕೆಲವೇ ಕೆಲ ಸ್ಥಳೀಯ ಮುಖಂಡರ ಚಟುವಟಿಕೆಯ ಹೊರತಾಗಿ ಜೀವಂತ ಹೆಣದಂತಿದ್ದ ಕಾಂಗ್ರೆಸ್‌ಗೆ ಯಥಾಸ್ಥಿತಿ ಕಾಯ್ದುಕೊಳ್ಳುವ ಅವಕಾಶ ದೊರೆತಿದೆ. ಇನ್ನು ಒಂದಷ್ಟು ಖದರಿನೊಂದಿಗೆ ಕಣಕ್ಕಿಳಿದಿದ್ದ ಜೆಡಿಎಸ್‌ಗಿದು ನಿರೀಕ್ಷಾ ಭಂಗ. ಇದರಲ್ಲಿ ಆ ಪಕ್ಷದ ಸ್ವಯಂಕೃತ ಅಪರಾಧಗಳೂ ಇರುವುದು ಸುಳ್ಳಲ್ಲ. ಹಾಗಂತ ಬಿಜೆಪಿ ಗೆಲುವಿಗೆ ಕಾಂಗ್ರೆಸ್-ಜೆಡಿಎಸ್‌ಗಳ ನಿಷ್ಕ್ರಿಯತೆಯೆ ಕಾರಣ ಅಂದುಕೊಂಡು ಸುಮ್ಮನಿದ್ದರೆ ಸತ್ಯಕ್ಕೆ ಸಮಾಧಿ ತೋಡಿದಂತಾಗುತ್ತದೆ.



ದೇವರಾಜ್

ಸತ್ಯ ಯಾವುದು ಎಂಬ ಬಗ್ಗೆ ತಲಾಷಿ ಗಿಳಿದರೆ ಅಖಾಡದ ತುಂಬಾ ವಂಚನೆಯ ಕುರುಹುಗಳು ದಂಡಿದಂಡಿಯಾಗಿ ಕಾಣಸಿಗುತ್ತವೆ. ಚುನಾವಣಾ ಪೂರ್ವದ ಪರಿಸ್ಥಿತಿ ಗಮನಿಸಿದ ಯಾರೊಬ್ಬರೂ ಇಂತಹುದೊಂದು ಗೆಲುವು ಬಿಜೆಪಿಗೆ ದಕ್ಕುತ್ತದೆಂದುಕೊಂಡಿರಲಿಲ್ಲ. ಅಷ್ಟಕ್ಕೂ ಜಿಲ್ಲೆಯಲ್ಲಿ ಅದಕ್ಕೆ ಪೂರಕವಾದ ಪರಿಸ್ಥಿತಿಗಳೇ ಇರಲಿಲ್ಲ. ಯಡ್ಡಿ ಸರ್ಕಾರದ ಭ್ರಷ್ಟಾಚಾರಗಳೆಲ್ಲ ಮಲೆನಾಡಿಗರ ಚಾವಡಿ ಚರ್ಚೆಗಳಲ್ಲಿ ಬಿಸುಪು ಪಡೆದುಕೊಂಡಿದ್ದವು. ಅದೆಲ್ಲ ತೀರಾ ನಿರಕ್ಷರಿಗಳಿಗೂ ಇಂಚಿಂಚೂ ಅರ್ಥವಾಗಿ ಅಸಹ್ಯ ಪಟ್ಟುಕೊಳ್ಳುವಂತಹ ಪರಿಸ್ಥಿತಿಯೂ ಹುರಿಗಟ್ಟಿತ್ತು.

ಮೇಲ್ಕಂಡ ವಿಚಾರಗಳೆಲ್ಲ ಒತ್ತಟ್ಟಿಗಿರಲಿ, ಈ ಬಿಜೆಪಿ ಸರ್ಕಾರ ಮಲೆನಾಡು ಭಾಗದ ಜನರ ಜೀವ ಹಿಂಡುತ್ತಿರುವ ಸಮಸ್ಯೆಗಳನ್ನೆಲ್ಲಾ ಪರಿಹರಿಸಿದೆಯಾ ಅಂತ ನೋಡಹೋದರೆ ಆ ರೀತಿಯ ಯಾವ ಕ್ರಾಂತಿಗಳೂ ನಡೆದಿಲ್ಲ. ತೀರಾ ಈ ಜಿಪಂ-ತಾಪಂ ಚುನಾವಣೆಗೆ ಅಧಿಸೂಚನೆ ಹೊರಬೀಳುವ ಹೊತ್ತು ಹಾಗೂ ಈ ಕ್ಷಣದವರೆಗೂ ಆ ಭಾಗದಲ್ಲಿ ಸಮಸ್ಯೆಗಳು ಕೇಕೆ ಹಾಕುತ್ತಿವೆ. ಮೂಲಭೂತ ಸಮಸ್ಯೆಗಳ ಕೊರತೆಯಿಂದ ಕಂಗೆಟ್ಟ ಹಳ್ಳಿಗಾಡು ಜನರ ಆಕ್ರಂದನವಾಗಲಿ, ಗಿರಿಜನರ ಗೋಳಾಗಲಿ ಹಾಗಾಗೇ ಇವೆ. ಸರ್ಕಾರಿ ಕಚೇರಿಗಳಂತೂ ಭ್ರಷ್ಟರ ಅಡ್ಡಾದಂತಾಗಿ ಅದರ ಬಿಸಿಗೆ ಜನಸಾಮಾನ್ಯರು ನಲುಗಿದ್ದಾರೆ. ಅಧಿಕಾರಿವರ್ಗದ ಅಸಡ್ಡೆಯಿಂದಾಗಿ ಜನರೇ ತಿರುಗಿ ಬೀಳೋ ಹಂತ ತಲುಪಿದ್ದಾರೆ.


ಪ್ರಾಣೇಶ್

ಹಾಗೂ ನೋಡಹೋದರೆ ಬಿಜೆಪಿಯೊಳಗೇ ಒಗ್ಗಟ್ಟಿಲ್ಲ. ಅದು ಕಾಂಗ್ರೆಸ್ ಪಕ್ಷದ ಬೇಗುದಿಯಂತೆ ಬಹಿರಂಗಗೊಂಡಿಲ್ಲವಾದರೂ ಬಿಜೆಪಿ ನಾಯಕರು, ಶಾಸಕರ ನಡುವೆಯೇ ಗುದ್ದಾಟ ನಿರಂತರವಾಗಿ ನಡೆಯುತ್ತಿದೆ. ಶೃಂಗೇರಿ ಶಾಸಕ ಜೀವರಾಜ್ ಮತ್ತು ಸಿ.ಟಿ. ರವಿಯ ನಡುವೆ ಕುರ್ಚಿಗಾಗಿ ಕಲಹ ಹೊತ್ತಿಕೊಂಡಿದ್ದೀಗ ಹಳೇ ವಿಚಾರ. ಈವರೆಗೂ ಅದರ ಬಿಸಿ ಆರಿಲ್ಲ. ಎಂ.ಪಿ. ಕುಮಾರಸ್ವಾಮಿಯೂ ಒಂದಿಲ್ಲೊಂದು ರೀತಿಯ ಅಸಹನೆ ಹೊದ್ದುಕೊಂಡವನೆ ಜಿಲ್ಲಾ ಮುಖಂಡರುಗಳಲ್ಲೂ ಇಂತಹುದೇ ಒಂದು ಅಸಹನೆಯಿದೆ.



ಶೃಂಗೇರಿಯ ಅಡ್ಡಗದ್ದೆ, ಎನ್‌ಆರ್ ಪುರದ ಬಿದರೆ, ಬ್ಯಾಡಗೆರೆ, ಚಂದ್ರವಳ್ಳಿ ಹಾಗೂ ಚಿಕ್ಕಮಗಳೂರು ಭಾಗದ ಹುಯಿಗೆರೆ, ಮೂಡಿಗೆರೆಯ ಸಾರಗೋಡು, ಕಂಚನಗೆರೆ, ಶಿವನಗರ ಮುಂತಾದೆಡೆಗಳಲ್ಲಿ ಜನರು ಅವ್ಯವಸ್ಥೆಯ ವಿರುದ್ಧ ಆಕ್ರೋಶಗೊಂಡು ಮತದಾನ ಬಹಿಷ್ಕರಿಸಿದ್ದರು. ಇದು ಬಿಜೆಪಿಯೆಡೆಗಿನ ಆಕ್ರೋಶ. ಇದು ಜಿಲ್ಲೆಯ ತುಂಬಾ ತಣ್ಣಗೆ ಹರಡಿಕೊಂಡಿತ್ತು.

ಇಂಥಾ ಪರಿಸ್ಥಿತಿಯ ನಡುವೆಯೂ ಬಿಜೆಪಿ ಈ ಪರಿ ಓಟು ಗೆಬರಿಕೊಂಡಿದೆಯೆಂದರೆ ಸಹಜವಾಗಿಯೇ ಗುಮಾನಿಗಳೇಳುತ್ತವೆ. ಬಿಜೆಪಿಯ ಚುನಾವಣಾ ವೈಖರಿ ಹಾಗೂ ಮತದಾನದಂದು ನಡೆದ ಘಟನಾವಳಿಗಳು ಅದಕ್ಕೆ ಪುಷ್ಟಿ ನೀಡುವಂತಿವೆ. ಮತದಾನದಂದು ಆಯಕಟ್ಟಿನ ಮತಗಟ್ಟೆಗಳಲ್ಲಿ ಗುರುತಿನ ಚೀಟಿ ಹೊಂದಿರುವವರ ಹೆಸರೂ ಮತದಾರರ ಪಟ್ಟಿಯಿಂದ ನಾಪತ್ತೆಯಾದ ಪವಾಡ ಸಂಭವಿಸಿತ್ತು. ತರೀಕೆರೆಯ ಕುಡ್ಲೂರು, ಶೃಂಗೇರಿಯ ಅಡ್ಡಗದ್ದೆ ಮೂಡಿಗೆರೆಯ ಬಿದರಹಳ್ಳಿ, ಹೆಸಗಲ್ ಮುಂತಾದ ಅನೇಕ ಮತಗಟ್ಟೆಗಳಲ್ಲಿ ನೂರಾರು ಮುಂದಿ ಮತ ಚಲಾವಣೆ ಹಕ್ಕಿಂದ ವಂಚಿತರಾಗಬೇಕಾಯ್ತು. ಇದು ಬಿಜೆಪಿ ಷಡ್ಯಂತ್ರವಲ್ಲದೆ ಬೇರೇನೂ ಅಲ್ಲ. ಕಡಹಿನಬೈಲ್ ಎಂಬಲ್ಲಿ ಮತದಾನಕ್ಕೆ ಅಧಿಕಾರಿಯೇ ನಿರಾಕರಿಸಿದ ಬಗ್ಗೆ ದೂರುಗಳಿವೆ. ಮತಯಂತ್ರವನ್ನೇ ಆಡಳಿತಾರೂಢರು ಪಳಗಿಸಿಕೊಂಡಿದ್ದಾರೆಂದು ಗುಮಾನಿಗಳೂ ವ್ಯಾಪಕವಾಗಿವೆ. ಇನ್ನುಳಿದಂತೆ ಎಲ್ಲಾ ಪಕ್ಷಗಳೂ ಬಾಡೂಟದ ಮೂಲಕ ಮತ ಸೆಳೆಯಲು ಹೆಣಗಿವೆ. ಆದರೆ ಬಿಜೆಪಿ ಇದರಲ್ಲಿ ಎಲ್ಲರನ್ನೂ ಹಿಂದಿಕ್ಕಿ ಬೇಕಾಬಿಟ್ಟಿ ಹಣ ಚೆಲ್ಲಿದೆ. ಇಂಥಾ ಅನೇಕ ಅಂದಾದುಂದಿಗಳೆಲ್ಲ ಒಟ್ಟಾಗಿ ಬಿಜೆಪಿ ಗೆಲುವಿನ ದಡಸೇರಿದೆ ಎಂಬ ವಾದವನ್ನು ತಳ್ಳಿ ಹಾಕುವಂತಿಲ್ಲ.

ಈ ರೀತಿ ಬಿಜೆಪಿ ಇದ್ದಕ್ಕಿದ್ದಂತೆ ಇಡೀ ಜಿಲ್ಲೆಯನ್ನೇ ಕಬ್ಜಾ ಮಾಡಿಕೊಂಡರೆ ಒಂದು ಕಾಲದಲ್ಲಿ ದರ್ಬಾರು ನಡೆಸಿದ್ದ ಕಾಂಗ್ರೆಸ್ ಹೀನಾಯಸ್ಥಿತಿ ತಲುಪಿದೆ. ಕಾಂಗ್ರೆಸ್ ಪಾಲಿಗೆ ಲಾಗಾಯ್ತಿನಿಂದಲೂ ಚಿಕ್ಕಮಗಳೂರೆಂಬುದು ಭದ್ರಕೋಟೆ. ಇಧೀಗ ಅದರ ಕಲ್ಲುಗಳೆಲ್ಲ ಕಿತ್ತೆದ್ದು ಬಿಜೆಪಿ ಸಾಮ್ರಾಜ್ಯ ಸ್ಥಾಪನೆಯಾದುದರ ಹಿಂದೆ ಸ್ವಯಂಕೃತಾಪರಾಧಗಳ 'ಸೇವೆ' ದೊಡ್ಡದಿದೆ. ಜಿಲ್ಲಾ ಕಾಂಗ್ರೆಸ್‌ನಲ್ಲಿ ಹಿಂಡುಹಿಂಡು ನಾಯಕರಿದ್ದಾರಾದರೂ ಅವರೆಲ್ಲ ನಾಲಾಯಕ್‌ಗಳಂತಾಗಿದ್ದಾರೆ. ಅದೂ ಅಲ್ಲದೆ ಅವರವರ ನಡುವೆಯೇ ಕಾಲೆಳೆದಾಟದ ಚಾಳಿ ವಿಪರೀತವಾಗಿದೆ. ಇದರಿಂದಾಗಿ ಕಾರ್ಯಕರ್ತರೂ ಉಮೇದು ಕಳೆದುಕೊಂಡಿದ್ದಾರೆ. ನಾಯಕರ ಬಡಿದಾಟ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಎಲ್. ಮೂರ್ತಿಯೂ ಕೈ ಚೆಲ್ಲುವಂತಾಗಿದೆ. ದುರಂತವೆಂದರೆ, ಈ ರೀತಿಯ ದೊಡ್ಡದೊಂದು ಹೀನಾಯ ಸೋಲಿನ ಬಳಿಕವೂ ಚೇತರಿಸಿಕೊಳ್ಳುವಂಥ ಯಾವ ಪ್ರಯತ್ನಗಳೂ ಕಾಂಗ್ರೆಸ್‌ನಲ್ಲಿ ಕಾಣಸಿಗುತ್ತಿಲ್ಲ. ಜೆಡಿಎಸ್ ಎಂಬ ದೇವೇಗೌಡರ ಅಡ್ಡಾದ ಪರಿಸ್ಥಿತಿಯಂತೂ ಜಿಲ್ಲೆಯ ಮಟ್ಟಿಗೆ ವಿಪರೀತ ಹೀನಾಯ.

ಅಂತೂ ಬಿಜೆಪಿ 34 ಕ್ಷೇತ್ರಗಳಲ್ಲಿ 25 ಕ್ಷೇತ್ರಗಳನ್ನು ಕಬಳಿಸಿಕೊಂಡಿದೆ. ಕಾಂಗ್ರೆಸ್-ಜೆಡಿಎಸ್‌ನ ಕಾಯಂ ಕ್ಷೇತ್ರಗಳನ್ನು ಲಪಟಾಯಿಸಿದೆ. ಇದು ನಿಜವಾದ ಗೆಲುವಾಗಿದ್ದರೆ ಮೆಚ್ಚಬಹುದಿತ್ತು. ಆದರಿದು ಹಣ-ಹೆಂಡ-ಪಿತೂರಿಗಳಿಂದಲೇ ದಕ್ಕಿಸಿಕೊಂಡ ಗೆಲುವು.

ಇಂಥಾ ಕಳಪೆತನದಿಂದ ಮತದಾನದ ಮೌಲ್ಯಗಳೇ ಎಕ್ಕುಟ್ಟಿಹೋಗಿದೆ. ಅವುಗಳ ಸಮಾಧಿ ಮೇಲೆ ಬಿಜೆಪಿ ಗದ್ದುಗೆಯೇರುವ ಉತ್ಸಾಹದಲ್ಲಿದೆ. ಮುಂದೆ ಎಂತೆಂಥ ಅನಾಹುತಗಳು ಕಾದಿವೆಯೋ....?

• ಅಜೀಜ್ ಕಿರುಗುಂದ

ಧಾರವಾಡ ಕಾಂಗ್ರೆಸ್‌ಗಳ ಒಳಜಗಳ


...ಯಿಂದ ಧಾರವಾಡ ಜಿಲ್ಲೆಯಲ್ಲಿ ...ನಮರದಂತೆ ಬೆಳೆದುನಿಂತಿದ್ದ ...ಗ್ರೆಸ್ ಪಕ್ಷ ಬೇರು ಬಿಳಲುಗಳೆಲ್ಲ ... ಸ್ಥಿತಿ ತಲುಪಿದೆ. ನಾಯಕತ್ವಕ್ಕೆ ...ದಾಡುವ ಹಿರಿಯ ಲೀಡರ್‌ಗಳೇ ... ಹೆಚ್ಚಾಗಿದ್ದು ಈಗ ಆ ಹಿರಿ ...ಗಳನ್ನೆಲ್ಲ ಮೂಲೆಗುಂಪು ಮಾಡಿ ...ಸ ಯುವ ನಾಯಕರ ಪಟಾಲಂ ...ವ ಪ್ರಯತ್ನ ಇಲ್ಲಿ ಜೋರಾಗಿ ...ಯುತ್ತಿದೆ. ಈ ಗುಂಪುಗಾರಿಕೆಯಿಂದ ...ಜಿ ಮಂತ್ರಿಗಳಾದ ಎಚ್.ಕೆ ...ೀಲ, ಎ.ಎಂ. ಹಿಂಡಸಗೇರಿ, ...ಜಿ ಸಂಸದ ಮಂಜುನಾಥ ಕುನ್ನೂರ ...ದಂತೆ ಹಲವಾರು ಹಿರಿಯ ...ಗ್ರೆಸ್ಸಿಗರು ಬೇಸತ್ತುಹೋಗಿದ್ದಾರೆ.

ಕಲಘಟಗಿಯ ಶಾಸಕ ಸಂತೋಷ್ ... ಕಳೆದ ವಿಧಾನಸಭೆ ...ವಣೆಯಲ್ಲಿ ಗೆದ್ದ ನಂತರ ಈ ...ಟಗಳು ಹೆಚ್ಚಾಗಿದ್ದು, ಇತ್ತೀಚಿನ ...ಂ. ಚುನಾವಣೆ ಸಂದರ್ಭದಲ್ಲಿ ...ಟ್ ಹಂಚಿಕೆಯಿಂದ ಹಿಡಿದು ...ರದವರೆಗೂ ಈ ಹಿರಿಯ-ಕಿರಿಯ ...ಗಳ ನಡುವೆ ಮುಸುಕಿನ ಗುದ್ದಾಟ ...ದುವರೆದಿದೆ. ಇದಕ್ಕೆ ಪುಷ್ಟಿ ...ವಂತೆ, ಲಾಡ್ ಕಾಂಗ್ರೆಸ್, ...ನ್ನೂರ ಕಾಂಗ್ರೆಸ್, ಎಚ್.ಕೆ ಕಾಂಗ್ರೆಸ್ ... ಹೊಸ ಹೊಸ ಗುಂಪುಗಳು ...ಯಾಗಿ ಕಾರ್ಯಕರ್ತರನ್ನು ...ಬಡಿಸಿದೆ. ಈ ...ಪುಗಾರಿಕೆಯಿಂದಲೇ ಕಾಂಗ್ರೆಸ್ ...ಡಿದಿದೆ.

...ಕಳೆದ ಲೋಕಸಭಾ ...ವಣೆಯಲ್ಲಿ ಧಾರವಾಡದಿಂದ ...ಜುನಾಥ ಕುನ್ನೂರ ಮತ್ತು ...ೇರಿಯಿಂದ ಸಲೀಂ ಅಹ್ಮದ್ ...ಲು ಕಂಡಿದ್ದು ಕಾಂಗ್ರೆಸ್‌ನಲ್ಲಿನ ...ಟ್ಟನ ಕೊರತೆಯಿಂದ. ಆ ...ಲುಗಳಿಂದ ಪಾಠ ಕಲಿತು ...ಗ್ಗಾಗಬೇಕಿದ್ದ ಕಾಂಗ್ರೆಸ್ಸಿಗರು ತಮ್ಮ ...ನ ಗುಂಪುಗಾರಿಕೆಯನ್ನು ...ದುವರೆಸಿದರು. ಮೊನ್ನೆ ನಡೆದ ...ಂ., ತಾ.ಪಂ. ಚುನಾವಣೆಯಲ್ಲೂ ... ತಮ್ಮ ಹಿಂಬಾಲಕರಿಗೆ ಟಿಕೆಟ್ ...ಸುವಾಗ ಜಗಳವಾಡಿಕೊಂದು ... ಸಮಾಧಿ ತೋಡಿದ್ದಾರೆ. ...ಯಲ್ಲಿರುವ ಬಂಡಾಯದ ...ವನ್ನು ಪಡೆಯಬೇಕಾಗಿದ್ದ ...ಗ್ರೆಸ್ಸಿಗರು ತಮ್ಮ ತಮ್ಮ ಎದುರು ...ಣದ ಅಭ್ಯರ್ಥಿಗಳನ್ನೇ ಸೋಲಿಸುವ ಸ್ಕೆಚ್ ...ದ್ದು ಈ ಪಂಚಾಯತಿ ಚುನಾವಣಾ ...ಂಶದಲ್ಲಿ ಸ್ಪಷ್ಟಗೊಂಡಿದೆ.














ಪೀರ್ ಖಾದ್ರಿ ರಗಳೆ

ಕಲಘಟಗಿಯ ಶಾಸಕ ಸಂತೋಷ ಲಾಡ್ ಮೆಲ್ಲಗೆ ಹಾವೇರಿ ಜಿಲ್ಲೆಗೂ ಎಂಟ್ರಿ ಕೊಟ್ಟಿದ್ದಾರೆ. ಎರಡು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸೋತು ಸುಣ್ಣಾಗಿರುವ ಶಿಗ್ಗಾವಿಯ ಮಾಜಿ ಶಾಸಕ ಅಜ್ಜಂಪೀರಖಾದ್ರಿ ಲಾಡ್ ಗುಂಪಿನ ಮುಖಂಡತ್ವವನ್ನು ವಹಿಸಿಕೊಂಡಿದ್ದಾರೆ. ಲಾಡ್ ಅವರ ಪ್ರಭಾವ ಬಳಸಿಕೊಂಡು ಪಕ್ಷದ ಹಿರಿ ತಲೆಗಳನ್ನು ಮೂಲೆಗುಂಪು ಮಾಡುವ ಉದ್ದೇಶ ಖಾದ್ರಿಯದು. ಅದರ ಪರಿಣಾಮ ಈಗ ಸ್ಪಷ್ಟಗೊಂಡಿದೆ. ಮೊನ್ನೆಯ ಜಿ.ಪಂ. ಚುನಾವಣೆಯಲ್ಲಿ ಖಾದ್ರಿ ತನ್ನ ಬೆಂಬಲಿಗರಿಗೆ ಮಾತ್ರ ಟಿಕೆಟ್ ನೀಡುವ ಮೂಲಕ ಬಹುತೇಕ ಹಿರಿಯ ಕಾಂಗ್ರೆಸ್ಸಿಗರನ್ನು ವಂಚಿಸಲಾಗಿತ್ತು.


ಪಕ್ಷದ ಹಿರಿಯರ ಸಮ್ಮುಖದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ 'ಬಿ' ಫಾರ್ಮ್ ನೀಡದೆ ಅವುಗಳನ್ನು ಖಾದ್ರಿ ಬಿಕರಿ ಮಾಡಿದ್ದಾರೆಂಬ ಕೋಪ ಕೆಲವರಲ್ಲಿತ್ತು, ಆದಕ್ಕೆ ತಕ್ಕಂತೆ ಶಿಗ್ಗಾವಿ ತಾಲೂಕಿನ ತಡಸ ಗ್ರಾಮದಲ್ಲಿ ಸಂತೋಷ ಲಾಡ್ ಅವರ ಬಹಿರಂಗ ಸಭೆಗೆ ಅಡ್ಡಿಪಡಿಸಿದ ಕಾಂಗ್ರೆಸ್ ಕಾರ್ಯಕರ್ತರು ಲಾಡ್ ಮತ್ತು ಖಾದ್ರಿಯನ್ನು ಎಳೆದಾಡಿದ್ದರು. ರಾಜೆಸಾಬ್ ಕೋಲಾಪುರ್ ಎಂಬ ಪ್ರಬಲ ಟಿಕೆಟ್ ಆಕಾಂಕ್ಷಿಗೆ 'ಬಿ' ಫಾರ್ಮ್ ನೀಡದೆ, ಸ್ಥಳೀಯನಲ್ಲದ, ಪಕ್ಷದ ಕಾರ್ಯಕರ್ತನೂ ಆಗಿರದ ಭೂಪಾಲ್ ಪಾಯಣ್ಣವರ್ ಎಂಬುವನಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಪಡೆದ ಖಾದ್ರಿ ಆತನಿಗೆ 'ಬಿ' ಫಾರ್ಮ್ ನೀಡಿದ್ದಾರೆ ಎಂಬುದು ಕಾರ್ಯಕರ್ತರ ಆರೋಪವಾಗಿತ್ತು.

ಮಾಜಿ ಸಚಿವ ಎಚ್.ಕೆ.ಪಾಟೀಲ ಮತ್ತು ಎ.ಎಂ.ಹಿಂಡಸಗೇರಿ ಈ ಭಾಗದಲ್ಲಿ ತಮ್ಮದೇ ಆದ ಪ್ರಭಾವ ಹೊಂದಿರುವಂತಹವರು. ಇವರಿಬ್ಬರೂ ಪ್ರತಿ ಚುನಾವಣೆಯಲ್ಲಿ ಪಕ್ಷದ ಪರ ಪ್ರಚಾರಕ್ಕೆ ಬಂದು ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ. ಆದರೆ ಖಾದ್ರಿಯ ಗುಂಪುಗಾರಿಕೆಯಿಂದ ಬೇಸತ್ತ ಇವರುಗಳು ಮೊನ್ನಿನ ಚುನಾವಣೆಯಲ್ಲಿ ಮೈಕ್ ಅನ್ನು ಹಿಡಿಯಲಿಲ್ಲ, ಈ ಖಾದ್ರಿ ಸ್ಥಳೀಯರಾದ ಮಾಜಿ ಸಂಸದ ಮಂಜುನಾಥ ಕುನ್ನೂರ ಅವರನ್ನೂ ಪ್ರಚಾರಕ್ಕೆ ಬಳಸಿಕೊಳ್ಳಲಿಲ್ಲ, ಬದಲಾಗಿ ಲಾಡ್ ಒಬ್ಬರನ್ನೇ ಕಟ್ಟಿಕೊಂಡು ಕ್ಷೇತ್ರ ಸುತ್ತಿದ ಖಾದ್ರಿ.


ಅಸಲಿಗೆ ಈ ಕ್ಷೇತ್ರದಲ್ಲಿ ಪಕ್ಷ ಕಟ್ಟಿ ಬೆಳೆಸಿದವರು ಮಂಜುನಾಥ ಕುನ್ನೂರ. ಈತ ಪ್ರಭಾವಿ ಲಿಂಗಾಯತ ಮುಖಂಡ ಕೂಡ ಹೌದು. ಎರಡು ಬಾರಿ ಶಾಸಕರಾಗಿ ಒಂದು ಬಾರಿ ಸಂಸದರಾಗಿ ಕೆಲಸ ಮಾಡಿರುವ ಕುನ್ನೂರ ತರಹದವರನ್ನೂ ಲೆಕ್ಕಿಸದೆ ಖಾದ್ರಿಯ ಮರಳು ಮಾತಿಗೆ ಲಾಡ್ ಜೋತು ಬಿದ್ದು ಏಕಾಂಗಿಯಾಗಿ ಪ್ರಚಾರಕ್ಕೆ ಹೋಗಿದ್ದು ಎಷ್ಟು ಸರಿ?


ಇದಿಷ್ಟೇ ಅಲ್ಲದೆ, ಕಾಂಗ್ರೆಸ್ ಅಭ್ಯರ್ಥಿಗಳ ಪ್ರಚಾರಕ್ಕೆಂದು ಮುದ್ರಿಸಿದ ಪ್ರಚಾರ ಪತ್ರದಲ್ಲಿ ಲಾಡ್ ಭಾವಚಿತ್ರವನ್ನು ಖಾದ್ರಿ ಕಡ್ಡಾಯಗೊಳಿಸಿದ್ದ. ಜೊತೆಗೆ ತನ್ನ ಫೋಟೋ ಹಾಕದ ಅಭ್ಯರ್ಥಿಗಳ ಕ್ಷೇತ್ರಕ್ಕೆ ಪ್ರಚಾರಕ್ಕೂ ಸ್ಥಳೀಯ ಮುಖಂಡರು ಹೋಗಕೂಡದು ಎಂಬ ಫರ್ಮಾನನ್ನೂ ಈತ ಹೊರಡಿಸಿದ್ದ.


ರಾಷ್ಟ್ರೀಯ ಯುವ ಕಾಂಗ್ರೆಸ್‌ನ ಕೋಆರ್ಡಿನೇಟರ್ ನಟರಾಜ ನಾಗರಹಳ್ಳಿ ಶಿಗ್ಗಾವಿ ಕ್ಷೇತ್ರದಲ್ಲಿ ಪ್ರಭಾವಿ ಮುಖಂಡ. ಈತ ಈಗ ಬೆಂಗಳೂರು ವಾಸಿಯಾಗಿದ್ದರೂ ಮೂಲತಃ ಬಂಕಾಪುರ ಪಟ್ಟಣದವರು. ಇವರು ಇಲ್ಲಿನ ಸಾಕಷ್ಟು ಯುವಕರನ್ನು ಸಂಘಟಿಸಿ ಅವರನ್ನೆಲ್ಲ ಕಾಂಗ್ರೆಸ್ ಪಕ್ಷದತ್ತ ಕರೆತಂದವರು. ಮೊನ್ನೆಯ ಜಿ.ಪಂ ಚುನಾವಣೆಯಲ್ಲಿ ನಟರಾಜ್ ನಾಗರಹಳ್ಳಿ ನೂರಾರು ಯುವಕರೊಂದಿಗೆ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರಕ್ಕಿಳಿದರೆ, ಅವರೊಂದಿಗೂ ಜಗಳ ಕಾಯ್ದು ಖಾದ್ರಿ ಅವರೆಲ್ಲ ಆ ಕ್ಷೇತ್ರದಿಂದ ಹೊರನಡೆಯುವಂತೆ ಧಮಕಿ ಹಾಕಿದ. ಈ ಬಗ್ಗೆ ಈಗಾಗಲೇ ಪಕ್ಷದ ವರಿಷ್ಠರಿಗೆ ಖಾದ್ರಿ ವಿರುದ್ಧ ನಾಗರಹಳ್ಳಿ ದೂರು ನೀಡಿದ್ದಾರೆ.













ಕಾಂಗ್ರೆಸ್ಸಿಗೆ ಕೈ ಜೆಡಿಎಸ್‌ಗೆ ಜೈ

ಅವಧಿಗೆ ಮುನ್ನವೇ ವಿಧಾನಸಭಾ ಚುನಾವಣೆ ಜರಗುವ ಸಾಧ್ಯತೆಗಳು ಕಂಡುಬರುತ್ತಿರುವುದರಿಂದ ಅಜ್ಜಂಪೀರ ಖಾದ್ರಿ ತನ್ನ ಮುಂದಿನ ತಯಾರಿಯನ್ನು ಈಗಲಿಂದಲೇ ಶುರು ಹಚ್ಚಿಕೊಂಡಿದ್ದಾರೆ. ಶಿಗ್ಗಾವಿಯ ಕ್ಷೇತ್ರದಲ್ಲಿ ಮಂತ್ರಿ ಬೊಮ್ಮಾಯಿಯ ವಿರುದ್ಧ ಬಂಡೆದ್ದಿರುವ ಬಿಜೆಪಿಗರು ಮಂಜುನಾಥ ಕುನ್ನೂರ ಅವರನ್ನು ಬೆಂಬಲಿಸುತ್ತಿದ್ದಾರೆ. ಕುನ್ನೂರ ಕೂಡ ಈ ಬಾರಿ ವಿಧಾನಸಭೆ ಅಖಾಡಕ್ಕೆ ಇಳಿದು ಬೊಮ್ಮಾಯಿಗೆ ಸೆಡ್ಡು ಹೊಡೆಯಲು ಸಿದ್ಧರಾಗಿದ್ದಾರೆ. ಕಾಂಗ್ರೆಸ್‌ನಲ್ಲಿ ವರ್ಚಸ್ಸು ಹೊಂದಿರುವ ಕುನ್ನೂರ ಅವರಿಗೆ ಹೈಕಮಾಂಡ್ ಸಲೀಸಾಗಿ 'ಬಿ' ಫಾರ್ಮ್ ನೀಡುತ್ತೆ ಎಂಬುದು ಖಾದ್ರಿಗೆ ಚೆನ್ನಾಗಿಯೇ ಗೊತ್ತು, ಆದ್ದರಿಂದ ಖಾದ್ರಿ ಈಗಾಗಲೇ ಒಂದು ಕಾಲನ್ನು ಜೆಡಿಎಸ್ ಅಂಗಳದಲ್ಲಿ ಇಟ್ಟಿದ್ದಾನೆ. ಈ ಕುರಿತಂತೆ ಜೆಡಿಎಸ್ ನಾಯಕ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯೊಂದಿಗೆ ಒಂದು ಸುತ್ತಿನ ಮಾತುಕತೆ ಕೂಡ ನಡೆದಿದೆ ಎಂಬ ರೂಮರ್ ಕೂಡ ಹಬ್ಬಿದೆ.

ಅಸಲಿಗೆ ಖಾದ್ರಿ ರಾಜಕೀಯಕ್ಕೆ ಬಂದಿದ್ದು ಜಾತ್ಯತೀತ ಜನತಾದಳದಿಂದಲೆ. ಆನಂತರ ಆತ ಕಾಂಗ್ರೆಸ್ಸಿಗೆ ಹಾರಿ ಎರಡು ಬಾರಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದರೂ ಗೆಲ್ಲಲಿಲ್ಲ. ಇಂಥವನು ಈಗ ಸಂತೋಷ ಲಾಡ್ ಅವರ ಬೆನ್ನಿಗೇರಿ ಕಾಂಗ್ರೆಸ್ ಪಕ್ಷಕ್ಕೇ ದೊಡ್ಡ ಅನಾಹುತ ಮಾಡುತ್ತಿದ್ದಾರೆ.

ಸಂತೋಷ ಲಾಡ್ ಈ ಭಾಗದ ಕಾಂಗ್ರೆಸ್ ಪಕ್ಷದ ಮಾಸ್ ಲೀಡರ್ ಎಂಬುದರಲ್ಲಿ ಎರಡು ಮಾತಿಲ್ಲ, ಆದರೆ ತನ್ನ ಸ್ವಕ್ಷೇತ್ರ ಧಾರವಾಡ ಜಿಲ್ಲೆಯಲ್ಲೇ ಎಲ್ಲ ಚುನಾವಣೆಗಳಲ್ಲೂ ಸತತ ಸೋಲು ಅನುಭವಿಸುತ್ತಿರುವ ಕಾಂಗ್ರೆಸ್ ಪಕ್ಷವನ್ನು ಅವರು ಬೇರುಮಟ್ಟದಿಂದ ಸದೃಢಗೊಳಿಸುವ ಕೆಲಸಕ್ಕೆ ಕೈ ಹಾಕಬೇಕಿದೆ. ಜೊತೆಗೆ ವೈಮನಸ್ಸಿನಿಂದ ದೂರಾಗಿರುವ ಹಿರಿಯ ಮುಖಂಡರುಗಳನ್ನು ಒಂದುಗೂಡಿಸಿ ಒಗ್ಗಟ್ಟನ್ನು ಸ್ಥಾಪಿಸುವುದಕ್ಕೆ ಮುಂದಾಗಬೇಕಿದೆ. ಹಾಗೆ ಮಾಡಿದಾಗ ಅವರಿಗೆ ಲೀಡರ್‌ಶಿಪ್ ಇಮೇಜ್ ತಾನಾಗೇ ಒಲಿದು ಬರುತ್ತದೆ.

ಅದನ್ನು ಬಿಟ್ಟು ಖಾದ್ರಿಗಳಂತಹ ದುಡುಕಿನ ಜನರ ಮಾತು ಕಟ್ಟಿಕೊಂಡು ನೆರೆಯ ಹಾವೇರಿ ಜಿಲ್ಲೆಯಲ್ಲೂ ತನ್ನ ಪ್ರಭಾವ ಬೀರುವ ಆತುರ ಮಾಡಿದರೆ ಪಕ್ಷಕ್ಕೂ, ಅವರಿಗೂ ಯಾವ ಲಾಭವೂ ಆಗುವುದಿಲ್ಲ.

ಇದು ಸಂತೋಷ್ ಲಾಡ್ ಅವರಿಗೆ ಆದಷ್ಟು ಬೇಗ ಅರ್ಥವಾದರೆ ಒಳಿತು.

• ಹುರಳಿಕುಪ್ಪಿ ವಿನಯ್

ಬಳ್ಳಾರಿ: ಆಪರೇಷನ್ ಚಾಲೂ ಮಾಡಿದ ಗಣಿ ಕಳ್ಳರು

ಜಿಪಂ ತಾಪಂ ಫಲಿತಾಂಶ

...ಸಿರುಗುಪ್ಪ ತಾಲೂಕಿನ ಹಳೆಕೋಟೆ ಜಿಲ್ಲಾ ...ಚಾಯತ್ ಕ್ಷೇತ್ರದಿಂದ ಗೆದ್ದ ನಾಗರತ್ನಮ್ಮ ತಾನು ...ಂದ ಆಯ್ಕೆಯಾದ 24 ತಾಸುಗಳಲ್ಲೇ ಬಿಜೆಪಿಯ ... ಕಳ್ಳರ ಆಮಿಷಕ್ಕೆ ಬಿದ್ದು ಬಿಕರಿ ಆಗಿದ್ದಾಳೆ.

...ಅದಕ್ಕೆ ತಕ್ಕಂತೆ 'ಬಿದ್ದರೂ ಮೀಸೆ ...ಣ್ಣಾಗಲಿಲ್ಲ' ಎಂಬ ಧೋರಣೆಯ ಗಣಿ ... ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ...ತ ಜಿ. ಜನಾರ್ದನ ರೆಡ್ಡಿ "18 ...ಕ್ಕೆ ನಮಗೆ ಅದೃಷ್ಟದ ...ಕ್ಕೆ ಕಳೆದ ಜಿಲ್ಲಾ ...ಚಾಯತಿಯಲ್ಲಿ ಕೂಡ ...ನಗೆ 18 ಸದಸ್ಯರಿದ್ದರು. ...ರಿ ನಗರಸಭೆಯಲ್ಲಿ ಬಿಜೆಪಿ ...ಸಲು ಅಧಿಕಾರ ಸ್ಥಾಪಿಸಿದಾಗ ಕೂಡ ...ಸದಸ್ಯರಿದ್ದರು. ಅದಕ್ಕೆ 18 ನಮಗೆ ...ಷ್ಟ ತಂದಿದೆ" ಎಂದೆಲ್ಲ 'ಲೆಕ್ಕಾಚಾರ'ಗಳನ್ನು ...ದ್ದಾರೆ.

..."ಕಳೆದ 10 ವರ್ಷಗಳಿಂದ ನಾವು ಯಾವ ...ವಣೆಗಳಲ್ಲಿ ಸೋಲು ಕಂಡಿಲ್ಲ, ಈ ಬಾರಿ ಜಿಲ್ಲಾ ...ಚಾಯತಿ ಚುನಾವಣೆಯಲ್ಲಿ ಬಿಜೆಪಿಯ ಕೇವಲ 18 ...ರು ಆಯ್ಕೆ ಆಗಿರುವುದು ಹಿನ್ನಡೆ ಅಲ್ಲ, ...ನಾರರು ಅಭಿವೃದ್ಧಿ ಯೋಜನೆಗಳಿಗಾಗಿ ಬಿಜೆಪಿಗೆ ಬೆಂಬಲ ನೀಡಿದ್ದಾರೆ" ಎಂದೆಲ್ಲ ತಮ್ಮ ಜನಪ್ರತಿನಿಧಿಗಳ ಖರೀದಿಯನ್ನು ರೆಡ್ಡಿ ಸಮರ್ಥಿಸಿಕೊಂಡಿದ್ದಾರೆ.

ಬಿಜೆಪಿಯ ತತ್ವ, ಸಿದ್ಧಾಂತಗಳ ಬಗ್ಗೆ ಸ್ವತಃ ರೆಡ್ಡಿಗಳಿಗೆ ಇವತ್ತಿಗೂ ಗೊತ್ತಿಲ್ಲದಿದ್ದರೂ ನಾಗರತ್ನಮ್ಮ ಎಂಬ ಮೊದ್ಮನಿ "ಬಿಜೆಪಿಯ ತತ್ವ, ಸಿದ್ಧಾಂತ, ಅಭಿವೃದ್ಧಿಯನ್ನು ಒಪ್ಪಿಕೊಂಡು ಕಾಂಗ್ರೆಸ್ ಅಭ್ಯರ್ಥಿ ನಾಗರತ್ನಮ್ಮ ಬಿಜೆಪಿಗೆ ಸೇರ್ಪಡೆ ಆಗಿದ್ದಾರೆ. ನಾಗರತ್ನಮ್ಮ ಅವರ ಪತಿ ದೊಡ್ಡಹನುಮಂತಪ್ಪ ಮೂಲತಃ ಬಿಜೆಪಿ ಸದಸ್ಯರು. ಈ ಹಿನ್ನಲೆಯಲ್ಲಿ ನಾಗರತ್ನಮ್ಮ ಮಾತೃಪಕ್ಷಕ್ಕೇ ಮರಳಿದ್ದಾರೆ" ಎಂಬೆಲ್ಲ ಒಗ್ಗರಣೆಗಳನ್ನೂ ರೆಡ್ಡಿ ಹಾಕಿದ್ದಾರೆ.

ಇನ್ನು ನಾಗರತ್ನಮ್ಮ ಮತ್ತು ಆಕೆಯ ಗಂಡ ದೊಡ್ಡಹನುಮಂತಪ್ಪ "ನಾವು ಮೂಲತಃ ಬಿಜೆಪಿಯವರು. ಆದರೆ ಈ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಟಿಕೆಟ್ ನಿರಾಕರಿಸಿದ ಕಾರಣ ನಾವು ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದೇವೆ. ಸಚಿವರಾದ ಬಿ. ಶ್ರೀರಾಮುಲು, ಜಿ. ಜನಾರ್ದನರೆಡ್ಡಿ ಅವರ ಅಭಿವೃದ್ಧಿ ಯೋಜನೆಗಳನ್ನು ಒಪ್ಪಿ ಪಕ್ಷಕ್ಕೆ ಮತ್ತೆ ಸೇರುತ್ತಿದ್ದೇವೆ" ಎಂದೆಲ್ಲ ಹೇಳಿದರೇ ಹೊರತು ತಮ್ಮ 'ಅಭಿವೃದ್ಧಿ'ಗೆ ರೆಡ್ಡಿಗಳು ನೀಡಿದ ಹಣವೆಷ್ಟು ಎಂಬುದನ್ನು ಮಾತ್ರ ಬಹಿರಂಗಪಡಿಸಲಿಲ್ಲ.



ರೆಡ್ಡಿಗಳಿಗೆ ಆಪರೇಷನ್ ಕಮಲ ಹೊಸದೇನಲ್ಲ, ಐದು ವರ್ಷಗಳ ಹಿಂದೆ ಜಿಲ್ಲಾ ಪಂಚಾಯತಿಗೆ ನಡೆದ ಚುನಾವಣೆಯಲ್ಲೂ ಬಿಜೆಪಿ 18 ಸ್ಥಾನಗಳಲ್ಲಿ ಗೆಲುವು ಸಾಧಿಸಿದಾಗ ರೆಡ್ಡಿಗಳು ಅಧಿಕಾರದ ಚುಕ್ಕಾಣಿ ಹಿಡಿಯುವುದಕ್ಕಾಗಿ ಕಾಂಗ್ರೆಸ್‌ನ ನಾಲ್ವರು ಸದಸ್ಯರನ್ನು ಸೆಳೆದಿದ್ದರು. ಬಳ್ಳಾರಿಯಲ್ಲಿ ಇಂತಹ 'ರಾಜಕೀಯ ಪ್ರಯೋಗ' ಮಾಡಿ ಪಡೆದ ಅನುಭವವನ್ನೇ ರಾಜ್ಯಮಟ್ಟದಲ್ಲೂ ಮಾಡಿ ಎಲ್ಲರೂ ಹೇಸಿಗೆ ಪಡುವಂತೆ ರಾಜ್ಯ ರಾಜಕೀಯವನ್ನೇ ಕುಲಗೆಡಿಸಿದ್ದರು.

ಈ ಬಾರಿಯ ಜಿಪಂ-ತಾಪಂ ಚುನಾವಣೆಯ ನಂತರವೂ ರೆಡ್ಡಿಗಳು 'ಆಪರೇಷನ್ ಕಮಲ' ನಡೆಸುವ ನಿರೀಕ್ಷೆ ಇದ್ದೇ ಇತ್ತು, ಆದ್ದರಿಂದಲೇ ರಾಜ್ಯಸಭಾ ಸದಸ್ಯ ಅನಿಲ್ ಲಾಡ್ "ಪಕ್ಷಾಂತರಿಗಳಿಗೆ ಟಿಕೆಟ್ ನಿರಾಕರಿಸಬೇಕು. ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಗೆದ್ದು ಪಕ್ಷಾಂತರ ಆಗುವವರನ್ನು ಈಗಲೇ ಪತ್ತೆ ಮಾಡಬೇಕು" ಎಂದು ಚುನಾವಣಾ ಪೂರ್ವಭಾವಿ ಸಭೆಯಲ್ಲೇ ಎಚ್ಚರಿಸಿದ್ದರು. ಮಾಜಿ ಮಂತ್ರಿ ಎಂ.ಪಿ. ಪ್ರಕಾಶ್ ಅವರ ಪುತ್ರ ಎಂ.ಪಿ. ರವೀಂದ್ರ ಕೂಡ "ಪಶ್ಚಿಮ ತಾಲೂಕುಗಳಲ್ಲಿ ಬಿಜೆಪಿ ವಿರೋಧಿ ಅಲೆ ಇದೆ. ಅಲ್ಲೆಲ್ಲ ಕಾಂಗ್ರೆಸ್‌ಗೆ ಭವಿಷ್ಯ ಇದೆ. ಬಳ್ಳಾರಿ ತಾಲೂಕಿನ 8 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಬೇಕಿದೆ. ಪಕ್ಷಾಂತರಕ್ಕೆ ಅವಕಾಶ ನೀಡಬೇಡಿ" ಎಂದು ಹೇಳಿದ್ದರು. ಅನಿಲ್ ಲಾಡ್ ಮತ್ತು ರವೀಂದ್ರ ಅವರು ಹೇಳಿದ್ದಂತೆ ಈಗ ಆಪರೇಷನ್ ಕಮಲ ನಡೆದು ರೆಡ್ಡಿಗಳು ಗೆದ್ದಿದ್ದಾರೆ. ಪ್ರಜಾತಂತ್ರ ಮತ್ತೊಮ್ಮೆ ಸೋತಿದೆ.

[illegible] ಪ್ರದೇಶದ ಹಲವಾರು ಕುತೂಹಲಕಾರಿಯಾದ ಆಯಾಮಗಳನ್ನು [illegible]. ಅವುಗಳಲ್ಲಿ
ಮಲೆನಾಡಿನ [illegible] ಪರಿಸರವಾದಿ [illegible] ಈ ಸಂಚಿಕೆಯಿಂದ ಮೂರು ಭಾಗಗಳಲ್ಲಿ ಪ್ರಕಟಿಸುತ್ತಿದ್ದೇವೆ. ಈ ಕಂತಿನಲ್ಲಿ [illegible]
[illegible] ಮಂಗಗಳ [illegible] ಇವೆ. ಎಂಜಾಯ್!
[illegible] ಕೊಡುತ್ತಿರುವ ಮಂಗಗಳ ಹಾವಳಿ, ಹುಲಿ ಮತ್ತು ಮಂಗಗಳ ನಡುವಿನ ವೈರತ್ವ, ಇತ್ಯಾದಿಗಳು

ಮಂಗನ ಬ್ಯಾಟೆ

1

● ಕಲ್ಕುಳಿ ವಿಠಲ ಹೆಗ್ಡೆ

ಆದಿವಾಸಿಗಳನ್ನು ಎತ್ತಂಗಡಿ ಮಾಡಬಾರದು, ಕುದುರೆಮುಖ ಅರಣ್ಯವನ್ನು ರಾಷ್ಟ್ರೀಯ ಉದ್ಯಾನ ಎಂದು ಪರಿಗಣಿಸಿ ಅಲ್ಲಿ ವಾಸಿಸುತ್ತಿರುವ ಜನರನ್ನು ಒಕ್ಕಲೆಬ್ಬಿಸಬಾರದು ಎಂಬ ನಮ್ಮ ಹೋರಾಟದಲ್ಲಿ ಭಾಗವಹಿಸಿದ್ದ ನಾಲ್ಕರು ಗಿರಿಜನರನ್ನು ಪೊಲೀಸರು 2007ರ ಜುಲೈ 10ರಂದು' ಬೆಳಗ್ಗೆ ನಕಲಿ ಎನ್‌ಕೌಂಟರ್‌ನಲ್ಲಿ ಸಾಯಿಸಿದರು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ರೊಚ್ಚಿಗೆದ್ದ ಜನ ಪ್ರತಿಭಟಿಸಿದರು. ಸ್ವಲ್ಪ ಮಟ್ಟಿಗಿನ ಗಲಾಟೆಯೂ ಆಯಿತು. ಅದನ್ನೇ ಬಳಸಿಕೊಂಡ ಪೊಲೀಸರು ಎಸಿ ಅವರ ಜೀಪಿಗೆ ಬೆಂಕಿ ಹಚ್ಚಿದರು, ಸರ್ಕಾರದ ಆಸ್ತಿ ನಷ್ಟ ಮಾಡಿದರು, ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದರು' ಎಂದೆಲ್ಲ ಆರೋಪಿಸಿ ನಾನೂ ಸೇರಿದಂತೆ ಒಟ್ಟು 12 ಜನರ ಮೇಲೆ ಸುಳ್ಳು ಕೇಸು ಹಾಕಿದರು.

ಆ ಕೇಸಿಗೆ ಸಂಬಂಧಿಸಿದಂತೆ ಒಮ್ಮೆ ಬಸ್ಸಿನಲ್ಲಿ ಕೊಪ್ಪಕ್ಕೆ ಹೋಗುತ್ತಿದ್ದಾಗ ಅಭಯಾರಣ್ಯ ವ್ಯಾಪ್ತಿಯಲ್ಲಿ ಬ್ರಾಹ್ಮಣರೊಬ್ಬರು ನನಗೆ ಸಿಕ್ಕಿ ಅವರ ಪಕ್ಕವಿದ್ದ ಸೀಟನ್ನು ಕೊಟ್ಟರು. ರೈತರು ಪರಸ್ಪರ ಭೇಟಿ ಆದಾಗ ರೈತಾಪಿ ಗೋಳನ್ನು ಕೇಳುವುದು ಮಾಮೂಲಿ. ಆಗ ಮಳೆಗಾಲವಾದ್ದರಿಂದ


'ತೋಟದ ಔಷಧಿ ಆಯ್ತಾ' ಅಂದೆ.

ಅದಕ್ಕೆ ಅವರು 'ಔಷಧಿನೂ ಇಲ್ಲ, ಕಷಾಯನೂ ಇಲ್ಲ, ಮಂಗ ಬಿಟ್ರಲ್ಲ' ಎಂದರು.

'ಏನು ಸಮಾಚಾರ?' ಅಂದೆ.

'ನೋಡಿ, ನೀವೆಲ್ಲಾ ನಮ್ಮನ್ನು ಉಳಿಸಬೇಕು ಅಂತ ಎಷ್ಟೊಂದು ಹೋರಾಟ ಮಾಡಿದ್ರಿ. ಆದರೆ ನಾವೇ ಊರನ್ನು ಬಿಡಂಗೆ ಆಗಿದೆ. ಪೇಟೆ ಕಡೆಯಿಂದ ಲೋಡುಗಟ್ಟಲೆ ಮಂಗಗಳನ್ನು ಹಿಡಿದು ತಂದು ನಮ್ಮಲ್ಲಿ ಬಿಡ್ತಿದ್ದಾರೆ. ಆ ಮಂಗಗಳೋ ಒಂದೊಂದೂ ಹುಡುಗರಷ್ಟು ಎತ್ರ ಇದಾವೆ. ಮನುಷ್ಯರಿಗೆ ಕ್ಯಾರೆ ಅನ್ನಲ್ಲ, ಎರಡೊಳ್ಳೆ ನಾಯಿ ಸಾಕಿ ತೋಟದಲ್ಲಿ ಕಟ್ಟಿದೆ. ಆದರೆ ಆ ಮಂಗಗಳು ನಾಯಿಗೂ ಹೊಡೆದು ನಾಯಿಯೊಂದರ ಕಣ್ಣು ಹೋಗಿದೆ. ನಮಗೆ ಗೊತ್ತಿರೋದೆಲ್ಲ ಮಾಡಿ ಆಯ್ತು, ಆಂಜನೇಯನಿಗೆ ಎಲೆ ಪೂಜೆ, ಮೊಸರು ಅಭಿಷೇಕ ಪೂಜೆ ಪುನಸ್ಕಾರ ಎಲ್ಲಾ ಮುಗೀತು. ಆದ್ರೂ ಅವುಗಳ ಕಾಟ ತಪ್ಪಿಲ್ಲ. ನೋಡಿನೋಡಿ ಸಾಕಾಗಿ, ಇನ್ನು ಇಲ್ಲಿರೋದು ಸಾಧ್ಯನೇ ಇಲ್ಲಾ ಅಂತ ಈಗ ಅಡಿಗೆ ಕಂಟ್ರಾಕ್ಟು ಹಿಡಿದು ಶಿವಮೊಗ್ಗಕ್ಕೆ ಹೋಗ್ತಿದ್ದೇನೆ. ಈ ಹಿಂದೆ ಅಡಿಗೆ ಕೆಲಸ ಮಾಡಿಕೊಂಡು ಹೊಗೆ, ಬೆಂಕಿಲಿ ದುಡಿದದ್ದನ್ನೆಲ್ಲ ತಂದು ಇಲ್ಲಿಗೆ ಸುರಿದಿದ್ದೆ, ಈಗ ಅದೆಲ್ಲ ನೀರಲ್ಲಿ ಹೋಮ ಆದಂತಾಗಿದೆ. ಸರಕಾರ ಇಷ್ಟು ದಿನ ನಮಗೆ ಕೊಟ್ಟ ಹಿಂಸೆ ಸಾಲ್ದು ಅಂತ ಈಗ ನಮ್ಮನ್ನ ನಾಶ ಮಾಡಕ್ಕೆ ಈ ಮಂಗಗಳ ಹೊಸ ಪ್ಲಾನು ಮಾಡಿದೆ...' ಅಂತ ಒಂದೇ ಸಮನೆ ಅವರು ತಮ್ಮ ಗೋಳು ಹೊಯ್ಕೊಂಡರು.

ಕಾಡಿನಲ್ಲಿ ಬದುಕುವ ಜನ ಪ್ರಾಣಿಗಳ ಹಾವಳಿಯಿಂದಾಗಿ ಊರುಬಿಟ್ಟ ಉದಾಹರಣೆ ನಮ್ಮಲ್ಲಿ ಇರಲಿಲ್ಲ, ಹಾಗೆ ಅವರು ಪ್ರಾಣಿಗಳ ಕಾಟಕ್ಕೆ ಹೆದರಿದ್ದರೆ ನೂರಾರು ವರ್ಷ ಗಳಿಂದ ಮಲೆನಾಡಲ್ಲೇ ಕೃಷಿ ಮಾಡಿ



ಕೊಂಡು ಬದುಕುತ್ತಿರಲಿಲ್ಲ. ಆದರೆ ಈಗ ಈ ಬ್ರಾಹ್ಮಣರು ಮಂಗಗಳ ಕಾಟಕ್ಕೆ ಹೆದರಿ ಊರನ್ನೇ ತೊರೆಯುತ್ತಿದ್ದರು.

'ಮಂಗನ ಬ್ಯಾಟೆ ಮಾಡಲ್ವ?' ಎಂದು ನಾನು ಕೇಳಿದೆ.

'ಈಗೆಲ್ಲಿ ಮಂಗನ ಬ್ಯಾಟೆ? ಬ್ಯಾಟೆ ಆಡೋದನ್ನು ಸರ್ಕಾರ ನಿಷೇಧಿಸಿದೆ. ಅಷ್ಟಕ್ಕೂ ಬ್ಯಾಟೆ ಆಡಕ್ಕೆ ಊರಲ್ಲಿ ಒಗ್ಗಟ್ಟೆಲ್ಲಿದೆ? ಬ್ಯಾಟೆ ಆಡಿದ ಮೇಲೆ ಮಂಗನ್ನ ತಿನ್ನೋರೂ ಬೇಕಲ್ಲ?' ಎಂದು ಅವರು ಮಂಗನ ಬೇಟೆಯ ವಿವಿಧ ಸಂಕೀರ್ಣತೆಗಳನ್ನು ತೆರೆದಿಟ್ಟರು. ಆದರೆ ಶೂದ್ರರು ಬ್ಯಾಟೆಗೆ ಹೊರಟರೆ ಅದು ಮಂಗ-ಕಮಂಗ ಯಾವುದಾದರೂ ಅಂಗದ ರುಚಿಯನ್ನಷ್ಟೇ ನೋಡುವುದರಿಂದ ಅವರಿಗೇ ಇಂತಾ ಸಮಸ್ಯೆ ಬಂದಿರಲಿಕ್ಕಿಲ್ಲ ಅನಿಸಿತು.

ಮನೆಗೆ ಬಂದನಂತರ ಫೋಸ್ಟ್ ನೋಡಿದರೆ ಶಿವಮೊಗ್ಗದಲ್ಲಿರುವ ಮಲೆನಾಡಿನ ಪ್ರತಿಷ್ಠಿತ ಅಡಿಕೆ ಮಾರಾಟ ಸಂಘ Mancos ತನ್ನ ವಾರ್ಷಿಕ ವರದಿಯನ್ನು ಕಳುಹಿಸಿತ್ತು, ಆ ವರದಿಯಲ್ಲಿ ಮುಂದಿನ ಸಾಲಿನ ಯೋಜನೆಗಳಲ್ಲಿ 'ಮಂಗನ ಹಾವಳಿ ನಿಯಂತ್ರಣ'ವನ್ನು ಮುಖ್ಯ ವಿಷಯವನ್ನಾಗಿಸಿತ್ತು.

ಹಿಂದೆಲ್ಲ ವರ್ಷಕ್ಕೆ ಒಂದೆರಡು ಬಾರಿ ಊರವರೆಲ್ಲ ಸೇರಿ ಮಂಗನ ಬೇಟೆ ಮಾಡುತ್ತಿದ್ದರು. ಮಂಗಗಳನ್ನು ತಿನ್ನುವವರ ಹತ್ತಿರ ಆಳೆತ್ತರದ ಬಲೆ ಇರುತ್ತಿತ್ತು. ಆ ಬಲೆಯನ್ನು ಬಸರಿ ಇತ್ಯಾದಿ ಮರದ ತೆಪ್ಪಗಳನ್ನು ಕಂಪದಗದ್ದೆಯಲ್ಲಿ ಹುಗಿದು ಸೆಣಬು ತೆಗೆದು ಕಟ್ಟಿರುತ್ತಿದ್ದರು. ಆ ಬಲೆಗಳಲ್ಲಿ ಬರೀ ಮಂಗ ಅಲ್ಲ, ಕಾಡುಕುರಿ, ಮೊಲ, ಬರ್ಕಗಳನ್ನೂ ಹಿಡಯಬಹುದಾಗಿತ್ತು.

ಒಂದು ಕಾಲದಲ್ಲಿ ಮಳೆ ಜಾಸ್ತಿ ಬಿದ್ದ ಕಡೆ ಮಂಗಗಳು ಇರುತ್ತಿರಲಿಲ್ಲ, 150 ಇಂಚಿಗಿಂತ ಹೆಚ್ಚು ಮಳೆ ಬೀಳೋ ಘಾಟಿ ಕಡೆ ಮಂಗನ ವಾಸ ಕಡಿಮೆ. ಅಲ್ಲಿರುವ ಮುಸಿಯ ಸಿಂಗುಡುಕನಂಥ ಮಂಗಗಳು ಜಮೀನುಗಳಿಗೆ ಬರುವುದಿಲ್ಲ, ನಮ್ಮಲ್ಲಿ ಮಂಗಗಳ ಸಂಖ್ಯೆ ಜಾಸ್ತಿ ಆಗುವುದಕ್ಕೆ ಕಾರಣ ಬ್ರಿಟಿಷರು ಎಂದು ಹಿರಿಯರು ಹೇಳುತ್ತಾರೆ. ಏಕೆಂದರೆ ಒಂದು ಕಾಲದಲ್ಲಿ ಮೇಲ್ಜಾತಿಯವರ ತರಹ ಬಿಳಿ ಮುಖದ ಮಂಗಗಳು ಅಪರೂಪಕ್ಕೆ ಇಲ್ಲಿ ಕಾಣಿಸುತ್ತಿದ್ದವು. ಆದರೆ ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಅವರ ತರಹವೇ ಇರುವ ಕೆಂಪು ಮೂತಿಯ ಮಂಗಗಳೂ ಇಲ್ಲಿಗೆ ಬಂದಿದ್ದವು. ಅದಕ್ಕೆ ಹಿರಿಯರು ಬ್ರಿಟಿಷರೇ ಕಾರಣ ಅಂದಿರಬಹುದು.

ಆದರೆ ಈ ಮಂಗಗಳು ಇಲ್ಲಿ ಹೆಚ್ಚಾಗಿದ್ದಕ್ಕೆ ಇನ್ನೊಂದು ರೀತಿಯಲ್ಲಿ ಬ್ರಿಟಿಷರು ಕಾರಣವಾಗಿದ್ದಂತೂ ಸತ್ಯ. ಏಕೆಂದರೆ ಈ ಹಿಂದೆ ಮಂಗಗಳ ಸಂಖ್ಯಾ ನಿಯಂತ್ರಣ ಹುಲಿಗಳಿಂದ ಆಗುತ್ತಿತ್ತು, ಆದರೆ ಹುಲಿ ಶಿಕಾರಿಯ ಗೀಳು ಹಿಡಿಸಿಕೊಂಡ ಬ್ರಿಟಿಷರು ಅವುಗಳನ್ನು ಸಾಯಿಸಲಾರಂಭಿಸಿದರಲ್ಲದೆ, ಆ ಗೀಳನ್ನು ಸ್ಥಳೀಯರಿಗೂ ಅಂಟಿಸಿದರು. ಹುಲಿಗಳನ್ನು ಕೊಂದ ತಾವೆಂಥ ಸಾಹಸಿಗಳು, ತಮ್ಮ ಬಂದೂಕಿನ ಶಕ್ತಿ ಎಂಥದ್ದು ಎಂಬ ಪ್ರದರ್ಶನಗಳು ಪ್ರಾರಂಭವಾದವು. ಅನಂತರ ಹುಲಿ ಹೊಡೆದವರಿಗೆ ಭಕ್ಷೀಸು, ಇನಾಮು ಕೊಟ್ಟು ಹುಲಿಯ ಶವದೊಂದಿಗೆ ಮೆರವಣಿಗೆ ಮಾಡಿ ಅದರ ಫೋಟೋ ಹೊಡೆಯುತ್ತಿದ್ದರು. ಸತ್ತ ಹುಲಿಯನ್ನು ಬಾಲದಿಂದ ತಲೆಯವರೆಗೆ ತಮ್ಮ ಪಾದದಿಂದ ಅಳೆದು ಇಷ್ಟು ಮಟ್ಟನ ಹುಲಿ ಅಂತ ಅದರ ಆಧಾರದಲ್ಲಿ ಬಹುಮಾನವನ್ನು ಹುಲಿ ಹೊಡೆದವರಿಗೆ ಕೊಡುತ್ತಿದ್ದರು.

ಇದಾದನಂತರ ಬಂದ ಹಸಿರು ಕ್ರಾಂತಿಯೂ ಹುಲಿಗಳಿಗೆ ಮಾರಕವಾಯಿತು. ಏಕೆಂದರೆ ತಮ್ಮ ಜಾನುವಾರುಗಳನ್ನು ಕೊಂದ ಹುಲಿಯ ಮೇಲಿನ ಕೋಪ ತೀರಿಸಿಕೊಳ್ಳಲು ಜನ ತಮ್ಮ ಸತ್ತ ಜಾನುವಾರುಗಳ ಶವದ ಮೇಲೆ ಫಾಲಿಡಾಲ್ ಎಂಬ ಕ್ರಿಮಿನಾಶಕವನ್ನು ಸುರಿದು ಹುಲಿ ವಿನಾಶದ ಅಂಚಿಗೆ ಹೋಗುವಂತೆ ಮಾಡಿದರು.

ನೆಲದ ಮೇಲಿರುವ ಹುಲಿಗಳು ಮರದ ಮೇಲಿರುವ ಮಂಗಗಳನ್ನು ಹೇಗೆ ನಿಯಂತ್ರಣ ಮಾಡುತ್ತದೆ ಎಂಬುದೇ ಒಂದು ವಿಸ್ಮಯ. ಹುಲಿಗೂ ಮಂಗಗಳಿಗೂ ಪ್ರಾರಬ್ಧ ವೈರ. ಹಗಲ ಹೊತ್ತು ಮಂಗಗಳ ಕಣ್ಣುತಪ್ಪಿಸಿ ಹುಲಿಗಳು ಓಡಾಡಲು ಸಾಧ್ಯವೇ ಇಲ್ಲ.

ಹುಲಿಯೊಂದು ತಮ್ಮ ಕಾಡಿಗೆ ಬಂದಿದೆ ಅಂತ ಜನರಿಗೆ ಗೊತ್ತಾಗುವುದೇ ಮಂಗಗಳಿಂದ. ಹುಲಿ ಕಂಡ ಕೂಡಲೇ ಮಂಗಗಳು 'ಅದು ಇಲ್ಲಿರಲೇ ಬಾರದು' ಎಂಬಂತೆ ಅರಚಾಡುತ್ತವೆ. ಕಾಡಿನಲ್ಲಿ ದನ ಕಾಯುವವರು ಮಂಗಗಳು ಅರಚಾಟವನ್ನು ಕೇಳಿಯೇ 'ಮಂಗ ಕೂಗ್ತವೆ, ಹುಲಿ ಬಂದದೆ' ಅಂತ ಜಾಗೃತರಾಗುತ್ತಾರೆ.

ಹುಲಿ ಹೋಗುವ ಕಡೆಯಲ್ಲಿ ಮಂಗಗಳು ಮರದ ಮೇಲೆಯೇ ಸಾಗುತ್ತವೆ. ಮರದ ಬುಡದಲ್ಲಿ ಹುಲಿ ಕೂತರೆ ಮಂಗಗಳು ಪ್ರತಿಭಟಿಸುತ್ತವೆ. ಆದರೆ ಹುಲಿಯಂಥ ಸಾಮ್ರಾಜ್ಯಶಾಹಿಯ ಮುಂದೆ ಮಂಗನ ಅಹಿಂಸಾತ್ಮಕ ಪ್ರತಿಭಟನೆಗಳೆಲ್ಲ ಬಾಯಿ ಬೊಬ್ಬೆಗೆ ಸಮಾನವಷ್ಟೇ. ಹುಲಿಗೆ ರೇಜಿಗೆ ಬರುವಷ್ಟು ಮಂಗಗಳು ಅದನ್ನು ಕೆರಳಿಸುತ್ತವೆ. ಅಕಸ್ಮಾತ್ ಹುಲಿ ತನ್ನ ಬೇಟೆ ಹಿಡಿಯಲೆಂದು ಕಳ್ಳ ಹೆಜ್ಜೆ ಹಾಕುತ್ತಾ ಮುಂದೆ ಹೋಗುತ್ತಿದ್ದರೆ ಮಂಗಗಳು ತಮ್ಮ ಅರಚಾಟದ ಮೂಲಕ ಬೇಟೆಗೆ ಎಚ್ಚರಿಕೆ ನೀಡಿ ಅವು ಹುಲಿಯಿಂದ ತಪ್ಪಿಸಿಕೊಳ್ಳುವಂತೆ ಮಾಡುತ್ತವೆ.

ಹುಲಿಗೆ ಸಿಟ್ಟು ಬಂದರೂ ಮಂಗಗಳು ಸುಮ್ಮನಾಗುವುದಿಲ್ಲ, ಆಗ ಹುಲಿ ಭೂಮಿ ನಡುಗುವಂತೆ ಘರ್ಜಿಸಿ ತನ್ನ ಕೆಂಗಣ್ಣಿನ ಕ್ರೂರದೃಷ್ಟಿಯನ್ನು ಮಂಗಗಳ ಮೇಲೆ ಹಾಯಿಸುತ್ತದೆ. ಆ ವ್ಯಾಘ್ರನ ದೃಷ್ಟಿಗೆ ಬಿದ್ದ ಮಂಗಗಳಲ್ಲಿ ಕಣ್ಣು ಕತ್ತಲೆ ಬಂದು ಅವು ಮರದಿಂದ ಕೈಬಿಟ್ಟು ಹಲವು ದೊಪದೊಪಾ ಅಂತ ನೆಲಕ್ಕೆ ಬೀಳುತ್ತವೆ. ಹಾಗೆ ಬಿದ್ದ ಮಂಗಗಳನ್ನೇ ತಿಂದು ಹುಲಿ ತೃಪ್ತಿಪಡಬೇಕಾಗುತ್ತದೆ.

ಹುಲಿ ಹೊಡೆದಷ್ಟು ಸುಲಭಕ್ಕೆ ಮಂಗಗಳನ್ನು ಶಿಕಾರಿ ಮಾಡಲಾಗುವುದಿಲ್ಲ, ನಮ್ಮಲ್ಲಿ ಹೆಬ್ಬುಲಿ ಹೊಡೆದು ಶಭಾಸ್ ಎನಿಸಿಕೊಂಡವರು ಇರಬಹುದು. ಆದರೆ ಮಂಗನ ಶಿಕಾರಿ ಮಾಡಿ ಶಭಾಸ್ ಎನ್ನಿಸಿಕೊಂಡವರು ಇಲ್ಲ, ಯಾಕೆಂದರೆ ಒಂದು ಮರದಲ್ಲಿ ನೂರಾರು ಮಂಗಗಳಿರಲಿ, ಅವುಗಳನ್ನು ಹೊಡೆಯುವುದಕ್ಕೆ ಎಂದು ಕೋವಿ ತೆಗೆದುಕೊಂಡು ಹೋದರೆ ಆ ಮರದಲ್ಲಿ ಒಂದೇ ಒಂದು ಮಂಗವೂ ಕಣ್ಣಿಗೆ ಬೀಳುವುದಿಲ್ಲ, ಒಂದು ಸಣ್ಣ ಎಲೆ ಇದ್ದರೂ ಸಾಕು ಅವು ಮರೆ ಮಾಚಿಕೊಳ್ಳುವುದಕ್ಕೆ, ಅವು ಅದುಹೇಗೆ ಆ ಎಲೆಯ ಹಿಂದೆ ಕದ್ದು ಕೂರುತ್ತವೋ ಗೊತ್ತಿಲ್ಲ, ಹಾಗೆ ಬಚ್ಚಿಟ್ಟುಕೊಂಡಿರುವ ಮಂಗಗಳು ಮರದಿಂದ ಮರಕ್ಕೆ ನೆಗೆದದ್ದು ಸದ್ದಾಗುವುದಿಲ್ಲ, ಮರದಲ್ಲಿರುವ ಮಂಗಗಳನ್ನು ಕೆಡವಲು ಬೆಳಗ್ಗೆಯಿಂದ ಸಂಜೆಯವರೆಗೆ ಕತ್ತೆತ್ತಿ ನೋಡುತ್ತಿರುವ ಬೇಟೆಗಾರನ ಕುತ್ತಿಗೆ ಸೋಲಬೇಕೆ ಹೊರತು ಒಂದೇ ಒಂದು ಮಂಗ ಅವನ ಕಣ್ಣಿಗೆ ಬೀಳುವುದಿಲ್ಲ, ಅಕಸ್ಮಾತ್ ಬಿದ್ದರೂ ಒಂದು ಕ್ಷಣದಲ್ಲೇ ಅದು ಮಾಯವಾಗುತ್ತದೆ.

ಮಂಗ ಕೃಷಿಯ ಪ್ರಮುಖ ಶತ್ರು. ಅವು ತಿಂದು ಹಾಳು ಮಾಡುವುದಕ್ಕಿಂತ ಚೇಷ್ಟೆ ಮಾಡಿ ಹಾಳು ಮಾಡುವುದೇ ಹೆಚ್ಚು, ಹಾಗಾಗಿ ವರ್ಷಕ್ಕೆ ಒಂದೆರಡು ಬಾರಿ ಊರವರೆಲ್ಲ ಸೇರಿ ಮಂಗನನ್ನು ತಿನ್ನುವವರನ್ನು ಜೊತೆ ಮಾಡಿಕೊಂಡು ಬೇಟೆ ಮಾಡುತ್ತಾರೆ. ನಮ್ಮ ಕಡೆ ನಡೆಯುತ್ತಿದ್ದ ಮಂಗನ ಬೇಟೆ ಹೀಗಿರುತ್ತಿತ್ತು;

ಮೊದಲು ಮಂಗಗಳಿರುವ ಜಾಗ ತಿಳಿದುಕೊಂಡು ಅವನ್ನೆಲ್ಲ ಒಂದಷ್ಟು ದೂರ ಅಟ್ಟಲಾಗುತ್ತದೆ. ಆಗ ಆ ಮಂಗಗಳು ಈ ನರ ಮನುಷ್ಯರ ಕಾಟವೇ ಬೇಡ ಎಂದು ಇರೋದ್ರಲ್ಲಿ ಎತ್ತರದ ಮರ ಹತ್ತಿ ಕೂರುತ್ತವೆ. ಸಾಮಾನ್ಯ ಮನುಷ್ಯರ್‍ಯಾರು ಎತ್ತಲಾಗದಂತಹ ಮರದ ನೆತ್ತಿಯಲ್ಲಿ ಕೂರುತ್ತವೆ. ಆಗ ಆ ಮರ ಮತ್ತು ಅಕ್ಕಪಕ್ಕದ ದಟ್ಟ ಮರಗಳನ್ನು ಕೆಲವರು ಹತ್ತಿ ಮಂಗಗಳು ತಪ್ಪಿಸಿಕೊಳ್ಳುವ



ದಾರಿಗಳನ್ನು ಬಂದ್ ಮಾಡುತ್ತಾರೆ. ಇಷ್ಟೆಲ್ಲಾ ನಡೆಯುತ್ತಿರುವಾಗ 'ನಿಮಗೆ ಮತ್ತಷ್ಟು ಮೇಲೆ ಬರಕ್ಕಾಗಲ್ಲ' ಎಂಬಂತೆ ಮಂಗಗಳು ಮನುಷ್ಯರನ್ನು ಹೆದರಿಸುತ್ತ ಹೀಯಾಳಿಸುತ್ತಾ ಇನ್ನೂ ಎತ್ತರ ಏರುತ್ತವೆ.

ಆಗ ಎಲ್ಲರೂ 'ಸಿದ್ದ ಸಿದ್ದ' ಅಂತ ಕೂಗುತ್ತಿದ್ದರು. ಯಾರಪ್ಪ ಈ ಸಿದ್ದ ಅಂತೀರಾ? ಅವನೇ ಈ ನಮ್ಮ ಮಂಗನ ಬೇಟೆಯ ಹೀರೋ!

ಸಿದ್ದನಿಗೆ ವಯಸ್ಸಾಗಿದ್ದರೂ ಆತ ಚಿಕ್ಕ ಹುಡುಗರಷ್ಟೇ ಎತ್ತರವಿದ್ದ. ನೋಡುವುದಕ್ಕೆ ಸಾಕ್ಷಾತ್ ಆಂಜನೇಯನ ಅವತಾರ. ಅವರ ಮನೆಯಲ್ಲಿ ಯಾವಾಗಲೂ ಮಂಗನ ಮಾಂಸ ತಿನ್ನುತ್ತಿದ್ದರಿಂದ ಅವನು ಮಂಗನ ತರಹವೇ ಇದ್ದಾನೆ ಎನ್ನುತ್ತಿದ್ದರು. ಈ ಸಿದ್ದನ ಅಡ್ಡ ಹೆಸರು 'ತುಂಡು ಕಂಬಳಿ' ಅಂತ.

ಮಲೆನಾಡಿನಲ್ಲಿ ಮಳೆಗಾಲದಲ್ಲಿ ಆಳುಮಕ್ಕಳಿಗೆಲ್ಲ ಕಂಬಳಿ ಕೊಡುವುದು ಪದ್ಧತಿ. ಸಿದ್ದ ದೊಡ್ಡವನಾಗಿದ್ದರೂ ಆತ ಹುಡುಗರಷ್ಟು ಎತ್ತರ ಇದ್ದುದ್ದರಿಂದ ಆಳು ಕಂಬಳಿ ಇವನಿಗೆ ಉದ್ದ ಆಗುತ್ತಿತ್ತು, ಅದಕ್ಕೆ ಇವನಿಗೆ ಹುಡುಗರಿಗೆ ಕೊಡುವ ತುಂಡು ಕಂಬಳಿ ಕೊಡುತ್ತಿದ್ದರು. ಅದಕ್ಕೆ ಅವನ ಅಡ್ಡ ಹೆಸರು 'ತುಂಡುಗಂಬಳಿ' ಎಂದಾಗಿತ್ತು, ಅಷ್ಟೆ ಅಲ್ಲ, ಸಿದ್ದ ಎಂಬ ಹೆಸರಿನವರು ತುಂಬಾ ಜನ ಇದ್ದುದರಿಂದ ಇವನನ್ನು ಎಲ್ಲರೂ 'ತುಂಡುಗಂಬಳಿ' ಎಂದೇ ಕರೆಯುತ್ತಿದ್ದರು.


(ಮುಂದುವರೆಯುವುದು)

ವಿಶೈಲಕ್ಕೆ ಅಂಟಿದ ಕೀಟಗಳು



ಶೈಲದ ತಪ್ಪಲಲ್ಲಿರುವ ಕುಪ್ಪಳ್ಳಿ ಮತ್ತೊಮ್ಮೆ ಸುದ್ದಿ ಮಾಡಿದೆ. ಇದಕ್ಕೆ ಕುವೆಂಪುರವರ ಚಿಕ್ಕಪ್ಪನ ಮಗನ ಮಗನಾದ ಸುಬೋದ್ ಎಂಬಾತ ನೆಯ ಎದುರೇ ರಬ್ಬರ್ ತೋಟ ಮಾಡಲು ಹೊರಟಿರುವುದೇ

ಮೊದಲು ಕವಿ ಮನೆಯಲ್ಲಿ ಅಧಿಕೃತವಾಗಿ ಶೇಷೆಗೌಡರ ಕುಟುಂಬ ತ್ತು, ಆ ಮಹಾಮನೆಯ ಒಂದು ಮೂಲೆಯಲ್ಲಿ ಸುಬೋದನ ಸವಾಗಿದ್ದರು. ಅವಿಭಕ್ತ ಕುಟುಂಬದ ಪ್ರಧಾನ ಸಮಸ್ಯೆಯಾದ ಪಾಲು ಪರಿಕತ್ತುಗಳು ಮುಗಿದರೂ ಮಹಾಮನೆ ಹಂಚಿಕೊಳ್ಳುವುದು ಅಷ್ಟು ಸುಲಭಕ್ಕೆ ಮುಗಿಯುವುದಿಲ್ಲವಾದ ಕಾರಣ, ಆ ಮನೆಗೆ ಸವಾಲಿನಂತೆ ಸುಬೋದನ ತಂದೆ ಒಂದು ಮೂಲೆಯಲ್ಲಿದ್ದ ಕೋಣೆಯಲ್ಲಿದ್ದರು. ಸುದೈವಕ್ಕೆ ಕುವೆಂಪುರವರ ಇಡೀ ಮನೆಯನ್ನು ಸರ್ಕಾರ ಕೊಳ್ಳಲು ತೀರ್ಮಾನಿಸಿತ್ತು, ತುಂಬ ಜರ್ಝರಿತವಾಗಿದ್ದ ಆ ಹಳೆಮನೆಗೆ ಸರ್ಕಾರ ತುಂಬ ಧಾರಾಳವಾಗಿಯೇ ಬೆಲೆಕಟ್ಟಿತು. ಆ ಕೆಲಸದ ಜವಾಬ್ದಾರಿ ಹೊತ್ತಿದ್ದ ಮುದ್ದುಕೃಷ್ಣ ಹಣ ಕೊಟ್ಟು ಇಡೀ ಮನೆ ಖರೀದಿ ಮಾಡಿ ಅದನ್ನು ನವೀಕರಿಸಿದ್ದಲ್ಲದೆ, ಅದರೊಳಗಿದ್ದ ಕುಟುಂಬ ದವರು ಬೇರೆ ಮನೆಕಟ್ಟಿಕೊಳ್ಳಲು ಅವಕಾಶವನ್ನು ಮತ್ತು ಹೊಸ ಮನೆಗೆ ಬೇಕಾದ ಮರಕಡಿದು ಕೊಳ್ಳಲು ಅವಕಾಶವನ್ನು ಕೊಟ್ಟಿದ್ದರು.



ಆಗ ಈ ಸುಬೋದ ಒಂದಷ್ಟು ಧಾರಾಳವಾಗಿಯೇ ಮರಕಡಿದನೆಂಬ ಗುಲ್ಲೆದ್ದಿತ್ತು. ಅದೇನಾದರಾಗಲಿ, ಕುವೆಂಪು ದೆಸೆಯಿಂದ ಕವಿಮನೆಯೊಳ ಗಿದ್ದವರ ಬದುಕು ಹಸನಾದದ್ದನ್ನು ಆ ಪ್ರಾಂತ್ಯದ ಜನ ಕಣ್ಣಾರೆ ಕಂಡಿದ್ದರು.

ಸುಬೋದ ಮತ್ತು ಆತನ ತಂದೆ ಎಷ್ಟು ಒಳ್ಳೆಯಯವರು ಮತ್ತು ಜನಪ್ರಿಯರೆಂದರೆ ಅಲ್ಲಿನ ಮಂಡಲ ಪಂಚಾಯತಿ ಚುನಾವಣೆ ನಡೆದಾಗ ಅದರಲ್ಲಿ ಸುಬೋದನ ತಂದೆ ಸ್ಪರ್ಧಿಸಿದ್ದರು. ಫಲಿತಾಂಶ ಪ್ರಕಟವಾದಾಗ ಒಂದೇ ಒಂದು ಓಟೂ ಆತನಿಗೆ ಬಿದ್ದಿರಲಿಲ್ಲ. ಸರಿ, ಸುಬೋದನ ತಂದೆ ತನ್ನ ಓಟನ್ನು ಯಾರಿಗೆ ಹಾಕಿದ ಎಂಬುದೇ ಇಂದಿಗೂ ಸಮಸ್ಯೆಯಾಗಿದೆ!

ಕವಿಶೈಲ ನಾಡಿನ ಪರಿಸರ ಪ್ರೇಮಿಗಳು ಮತ್ತು ಕವಿಯ ಆರಾಧಕರ ಅಪೂರ್ವ ತಾಣವಾಗುತ್ತಿರುವಾಗಲೇ ಈ ಜಾಗದಲ್ಲಿ ಏನಾದರೂ ಮಾಡಬೇಕೆಂದು ಸುಬೋದ ಮೊದಲಿನಿಂದಲೂ ಆಲೋಚಿಸುತ್ತಿದ್ದ. ಈಗ ಕವಿ ಮನೆ ಎದುರೇ ರಬ್ಬರ್ ತೋಟ ಬೆಳೆದು ಅದು ತನ್ನ ಜಾಗ ತಾನು ಏನಾದರೂ ಮಾಡಿಕೊಳ್ಳುತ್ತೇನೆ ಎಂಬಂತೆ ಮಾತನಾಡುತ್ತಿದ್ದಾನೆ.

ಈಗಾಗಲೇ ಕವಿಶೈಲದ ದಾರಿಯ ಬಾಗಿಲಲ್ಲಿ ತೇಜಸ್ವಿಯವರ ಸ್ಮಾರಕವೂ ತಲೆ ಎತ್ತಿ ನಿಂತಿದೆ. ಕೆ.ಟಿ.ಶಿವಪ್ರಸಾದರ ಈ ಕಲಾಕೃತಿ ನೋಡುತ್ತಿದ್ದರೆ ತೇಜಸ್ವಿ ಕರ್ವಾಲೋ, ಮಂದಣ್ಣ ಇವರೆಲ್ಲಾ ಮಾತನಾಡಿಕೊಂಡು ಇನ್ನೇನು ಹಾರುವ ಓತಿ ಹುಡುಗಾಟಕ್ಕೆ ಹೊರಡಲಿದ್ದಾರೆ ಎನ್ನುವಂತೆ ಕಾಣುತ್ತದೆ. ಇನ್ನ ಕವಿಶೈಲವಂತೂ ಕವಿ ಮನಸ್ಸಿನ ಪ್ರತೀಕವಾಗಿ ಬೆಳೆಯುತ್ತಿದೆ. ನಾಡಿನ ಮೂಲೆಮೂಲೆಯಿಂದ ಶಿವಮೊಗ್ಗ ಜಿಲ್ಲೆಗೆ ಬರುವ ಪ್ರವಾಸಿಗರು ಕವಿಶೈಲಕ್ಕೂ ಬಂದುಹೋಗುವುದು ಜಾಸ್ತಿಯಾಗು ತ್ತಿದೆ.

ರಾಷ್ಟ್ರಕವಿಗೆ ಸ್ಫೂರ್ತಿಯ ತಾಣವಾಗಿದ್ದ ಕವಿಶೈಲ ಒಂದು ಪ್ರೇಕ್ಷಣೀಯ ತಾಣವಾಗಿ ರೂಪುಗೊಳ್ಳುವಲ್ಲಿ ಹಿನ್ನೆಲೆಯಲ್ಲಿದ್ದೇ ಶ್ರಮಿಸಿದ ತೇಜಸ್ವಿಯವರ ಯಾವುದೇ ಆಶಯಗಳ ಅರಿವಿರದ ಸುಬೋದನಿಗೆ ಯಾರಾದರೂ ವಿವೇಕ ಹೇಳಬೇಕಿದೆ. ಕವಿಶೈಲಕ್ಕೆ ಮುತ್ತಿರುವ ಇಂತಹ ಕೀಟಗಳು ಈಗಲೇ ಸುಧಾರಿಸದೇ ಹೋದರೆ ಮುಂದೆ ಬಹಳ ತೊಂದರೆಗಳಿವೆ. ಆದ್ದರಿಂದ ಕವಿಶೈಲದ ಪ್ರೇಮಿಗಳು, ಕುವೆಂಪು ಪ್ರತಿಷ್ಠಾನದ ಮುಖ್ಯಸ್ಥರು ಹಾಗೂ ಸರ್ಕಾರ ಈ ರಬ್ಬರ್ ಕಾಡನ್ನು ತೆಗೆಸಿ ಕವಿಮನೆಯ ಆವರಣ ಸಹಜ ವಾದ ಕಾಡಿನಿಂದ ಕಂಗೊಳಿಸುವಂತೆ ಮಾಡಬೇಕಿದೆ. ●

ಜಿ ತರಂಗದ ಹಗರಣಕ್ಕೂ ತನಗೂ ಸಂಬಂಧವಿಲ್ಲ: ಪೇಜಾವರ ಶ್ರೀಗಳು

ವಿಷಯದಲ್ಲಿ ನಿಮಗೆ ತಾತ್ವಿಕ ಭಿನ್ನಾಭಿಪ್ರಾಯ ಮದು. ಅದನ್ನು ಟೀಕಿಸುವ ಸ್ವಾತಂತ್ರ್ಯವನ್ನು ಪ್ರಶ್ನಿಸುವಂತಿಲ್ಲ, ಆದರೆ ನನ್ನ ವಿಷಯದಲ್ಲಿ ತೀರಾ ಸಂಗತಿಗಳನ್ನು ಪ್ರಕಟಿಸುವುದು ಸರಿಯೇ?


ಮೀಸಲಾತಿಯನ್ನು ಎಂದು ವಿರೋಧಿಸಿದ್ದೇನೆ? ನಿಂದಲೂ ಮೀಸಲಾತಿಯನ್ನು ಬೆಂಬಲಿಸಿದವನು ವಿ.ಪಿ.ಸಿಂಗ್‌ರವರು ಮಂಡಲ ವರದಿಯನ್ನು ಕ್ಕೆ ತಂದಾಗ ಅದನ್ನು ಸ್ವಾಗತಿಸಿದ್ದೇನೆ. ಅದನ್ನು ಅವರ ಜೊತೆಗೆ ಸ್ವತಃ ಮಾತುಕತೆ ನಡೆಸಿದ್ದೇನೆ. ತಿಯನ್ನು ವಿರೋಧಿಸಿದ ನನ್ನ ಒಂದೇ ಒಂದು ವನ್ನು ತೋರಿಸಿರಿ.

ಕಲ್ ಮುಂತಾದ ಕಡೆಯಲ್ಲಿ ಹಿಂದೂ ಮುಸ್ಲಿಮ್ ದಾಗ ಮುಸ್ಲಿಮರ ಮತ್ತು ಹಿಂದೂಗಳ ಮನೆಮನೆ ಹೋಗಿ ಸಾಂತ್ವನ ನೀಡಿದವನು, ಹಿಂದೂ-ಮುಸ್ಲಿಮ್ ಘರ್ಷಣೆಯಾದಾಗೆಲ್ಲ ಅದನ್ನು ಬಲವಾಗಿ ವವನು ನಾನು. ಗೋಧ್ರಾ ಹಿಂಸಾಚಾರದಲ್ಲಿಯೂ ಅಗ್ನಿಜ್ವಾಲೆಯನ್ನು ಸ್ನೇಹದ ಜಲಧಾರೆಯಿಂದ ಕೆಂದೇ ಹೇಳಿದ್ದೇನೆ. ಎಲ್ಲಿಯೂ ಹಿಂಸೆಯನ್ನು ಸಿಲ್ಲ. ಹಿಂದೂತ್ವಕ್ಕೆ ಅನ್ಯಾಯವಾದಾಗಲೆಲ್ಲಾ ನಾನು ಮಾಡಿದ್ದು ನಿಜ. ಎಲ್ಲಿಯೂ ಕೋಮುವಾದಿ ರ್ತಿಸಿಲ್ಲ. ಕ್ರೈಸ್ತ ಮತ್ತು ಮುಸಲ್ಮಾನರಿಗೂ ನನ್ನ ವಿಶ್ವಾಸವಿದೆ. ನಾನು ಹಿಂಸೆಯನ್ನು ಪ್ರಚೋದಿಸಿದ ಒಂದು ಉದಾಹರಣೆ ತೋರಿಸದೆ, ಸುಮ್ಮನೇ ಬಡು ದೋಷಾರೋಪಣೆ ಮಾಡುವುದು ಸರಿಯಲ್ಲ.

ಹಾವಳಿಯ ಸಂತ್ರಸ್ತರ ಬಗ್ಗೆ ನನ್ನ ಮನಸ್ಸು ಕೆಂದು ಆರೋಪಿಸಿದ್ದೀರಿ. ನೆರೆಹಾವಳಿಯು ಗಿ ಜನರಿಂದ ಪಡೆದ ಸಹಾಯದ ಜೊತೆಗೆ ಾದಕಾಣಿಕೆಯ ಹಣವನ್ನೂ ಸೇರಿಸಿ ನೂರಾರು ಮನೆಗಳನ್ನು ಕಟ್ಟಿಸುತ್ತಿದ್ದರೂ ಅದನ್ನು ಗಮನಿಸದೆ ನನ್ನನ್ನು ತಪ್ಪಾಗಿ ಚಿತ್ರಿಸಲು ಪ್ರಯತ್ನಿಸುತ್ತಿದ್ದೀರಿ.

ಕೃಷ್ಣಮಠವು ಮದ್ರಾಸಿನ ದೇವಸ್ಥಾನ ಪ್ರವೇಶ ಕಾಯಿದೆಯಂತೆ ದೇವಸ್ಥಾನವಾಗಿದ್ದರೂ ಕರ್ನಾಟಕದ ಮುಜರಾಯಿ ಕಾನೂನಿನಲ್ಲಿ ಹೇಳಿದ **Definition** ನಂತೆ ನಿಸ್ಸಂಶಯವಾಗಿ ಮಠವೂ ಆಗಿದೆ. ದೇವಸ್ಥಾನವೆಂದು ಒಪ್ಪಿಕೊಂಡರೂ ಸುಪ್ರೀಂಕೋರ್ಟ್ ಒಪ್ಪಿದಂತೆ 800 ವರ್ಷಗಳಿಂದಲೂ ಮಠದ ಆಡಳಿತಕ್ಕೆ ಒಳಪಟ್ಟ ದೇವಸ್ಥಾನ ವಾಗಿದೆ. ಮಠಕ್ಕೂ, ಮಠಕ್ಕೆ ಸೇರಿದ ದೇವಸ್ಥಾನಗಳಿಗೂ ಕರ್ನಾಟಕ ಮುಜರಾಯಿ ಕಾನೂನಿನಿಂದ ಪೂರ್ಣ ವಿನಾ ಯಿತಿ ಇದೆ. ಮಾತ್ರವಲ್ಲದೆ, ಸುಪ್ರೀಂಕೋರ್ಟ್‌ನ ತೀರ್ಪಿನಂತೆ ಕೃಷ್ಣಮಠವು ಡಿನೋಮಿನೇಶನ್ ದೇವಸ್ಥಾನವಾಗಿದೆ. ಡಿನೋಮಿನೇಶನ್ ದೇವಸ್ಥಾನಗಳಿಗೂ ಕರ್ನಾಟಕ ಮುಜರಾಯಿ ಕಾನೂನು ಅನ್ವಯವಾಗುವುದಿಲ್ಲ. ಹೀಗೆ ಯಾವ ರೀತಿಯಿಂದ ನೋಡಿದರೂ ಕೃಷ್ಣಮಠಕ್ಕೆ ಮುಜ ರಾಯಿ ಕಾನೂನು ಅನ್ವಯವಾಗುವುದಿಲ್ಲ. ಮಾತ್ರವಲ್ಲದೆ, ಕೃಷ್ಣಮಠವು 800 ವರ್ಷಗಳಿಂದಲೂ ಅಷ್ಟಮಠಗಳ ಅಧಿಪತ್ಯದಲ್ಲಿಯೇ ಇದೆ. ಸರ್ಕಾರದ ಆಡಳಿತದಲ್ಲಿ ಇರಲೇ ಇಲ್ಲ. ಇಲ್ಲಿ ಯಾವ ಕಾನೂನಿನ ಭಂಗವೂ ಆಗಿಲ್ಲ.

ಯಡಿಯೂರಪ್ಪನವರಿಗೆ ನಾನೇನೂ ಬೆಂಬಲ ನೀಡಿಲ್ಲ. ಅವರ ಮೇಲಿನ ಆರೋಪಗಳನ್ನು ಬರೇ ಮಾಧ್ಯಮಗಳ ಆಧಾರದಲ್ಲಿ ನಿರ್ಧರಿಸಬಾರದು. ನ್ಯಾಯಾಲಯದ ತೀರ್ಮಾನಕ್ಕೆ ಕಾದರೆ ವಿಳಂಬವಾಗುತ್ತದೆ. ಆದುದರಿಂದ ಪಕ್ಷದ ಹೈಕಮಾಂಡ್ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಅವರು ತಪ್ಪಿತಸ್ಥರೆಂದು ಸಾಬೀತಾದರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂಬುದಾಗಿ ಹೇಳಿದ್ದೇನೆ. ಬರೇ ಮಾಧ್ಯಮದ ಆಧಾರದಿಂದ ತೀರ್ಮಾನ ಮಾಡುವುದು ಸರಿಯೇ?



ಎಫ್‌ಐಆರ್ ಆಗಿದ್ದರೆ ಕೂಡಲೇ ಕ್ರಮ ಕೈಗೊಳ್ಳ ಬಹುದು. ಪ್ರಜಾಪ್ರಭುತ್ವದಲ್ಲಿ ಹೈಕಮಾಂಡ್, ವಿಧಾನಸಭೆ, ನ್ಯಾಯಾಲಯ ಇವು ಮೂರೇ ನಿರ್ಣಾಯಕ ಸಂಸ್ಥೆಗಳಾಗಿವೆ. ಹೀಗಾಗಿ ನಾನು ಹೇಳಿದ್ದರಲ್ಲಿ ತಪ್ಪೇನಿದೆ? ನಿಜ ಸಂಗತಿಗಳನ್ನು ಮರೆಮಾಚಿ ಅಷ್ಟಿಟ ಸುಳ್ಳು ಸಂಗತಿಗಳನ್ನು ನೀವು ಪತ್ರಿಕೆಯಲ್ಲಿ ಪ್ರಕಟಿಸುವುದು ನ್ಯಾಯವೇ?

*****

2 ಜಿ ತರಂಗದ ಹಗರಣದಲ್ಲಿ ನನ್ನ ಹೆಸರನ್ನು ನಿಮ್ಮ ಪತ್ರಿಕೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಅದರ ಆರ್ಥಿಕ ವ್ಯವಹಾರಕ್ಕೂ ನನಗೂ ಏನೇನೂ ಸಂಬಂಧವೇ ಇಲ್ಲ. ಮಾಧ್ಯಮದಲ್ಲಿ ಚರ್ಚೆ ಪ್ರಾರಂಭವಾಗುವವರೆಗೂ ನನಗೆ ಅದರ ಯಾವ ವಿಷಯವೂ ಗೊತ್ತಿರಲಿಲ್ಲ. ಯಾರ ಜೊತೆಗೂ ಯಾವುದೇ ಡೀಲ್ ನನ್ನೊಂದಿಗೆ ನಡೆದಿಲ್ಲ. 1996-97ರಲ್ಲಿ ನರಸಿಂಹರಾವ್ ಮತ್ತು ದೇವೇಗೌಡರ ಸರ್ಕಾರ ವಿದ್ದಾಗ ವಸಂತಕುಂಜದಲ್ಲಿ ಅರ್ಧ ಎಕರೆ ಮತ್ತು ಒಂದು ಎಕರೆ ಜಾಗವನ್ನು ಕಾನೂನಿಗೆ ಅನುಗುಣವಾಗಿ ನಮ್ಮ ರಾಮ ವಿಠಲ ಶಿಕ್ಷಣ ಸೇವಾ ಸಮಿತಿಗೆ ನಾವು ಪಡೆದಿದ್ದೇವೆ. ಅನೇಕ ಉದ್ಯಮಿಗಳಂತೆ ನೀರಾ ರಾಡಿಯಾರ ಪರಿಚಯವು ನಮಗೆ 1998ರ ಮೇಲೆ ಆಗಿದೆ. ನಮ್ಮ ಜಾಗಕ್ಕೂ ಅವರ ಟ್ರಸ್ಟಿಗೂ ಯಾವ ಸಂಬಂಧವಿಲ್ಲ. ನಮ್ಮ ಆಹ್ವಾನದಂತೆ ಶ್ರೀ ಅಡ್ವಾನಿ, ದೆಹಲಿ ಮುಖ್ಯಮಂತ್ರಿ ಶ್ರೀಮತಿ ಶೀಲಾ ದೀಕ್ಷಿತ್, ಶ್ರೀ ಆಸ್ಕರ್ ಫರ್ನಾಂಡಿಸ್ ಮೊದಲಾದವರು ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮೊದಲ ನೆಯ ಕಟ್ಟಡವು ನೀರಾ ರಾಡಿಯಾರವರ ಸಹಾಯವಿಲ್ಲದೆ ಉಳಿದ ಭಕ್ತರ ಸಹಾಯದಿಂದ ನಿರ್ಮಾಣವಾಗಿದೆ. ಕೃಷ್ಣಮಂದಿರದ ನಿರ್ಮಾಣದ ಬಗ್ಗೆ ಮಾತ್ರ ನೀರಾ ರಾಡಿಯಾರವರು ವಿಶೇಷ ಸಹಾಯವನ್ನು ಮಾಡಿದ್ದಾರೆ. ಕಟ್ಟಡಕ್ಕೆ ಬೇಕಾದ ಸಾಮಗ್ರಿಗಳ ಮುಖಾಂತರ ಅವರು ಸಹಾಯ ಮಾಡಿದರಲ್ಲದೆ, ಯಾವುದೇ ರೀತಿಯಿಂದ ರಾಮವಿಠಲ ಶಿಕ್ಷಣ ಸಮಿತಿಗೆ ಅವರು ಹಣವನ್ನು ನೀಡಿಲ್ಲ.

ಈ ಹಗರಣದಲ್ಲಿ ನೀರಾ ರಾಡಿಯಾರವರ ಪಾತ್ರವೇನು? ಅವರು ದೋಷಿಗಳೇ ಎಂಬುದು ಇನ್ನೂ ತೀರ್ಮಾನವಾಗಿಲ್ಲ. ಏನೇ ಇರಲಿ, ತಾನು ನಿರ್ದೋಷಿಯೆಂದು ಅವರು ನನ್ನಲ್ಲಿ ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಅವರ ವ್ಯವಹಾರಕ್ಕೂ ನನಗೂ ಏನೂ ಸಂಬಂಧವಿಲ್ಲ. ಕೃಷ್ಣಮಂದಿರ ಉದ್ಘಾಟನಾ ಸಮಾರಂಭದಲ್ಲಿ ವಿಶೇಷ ದಾನಿಗಳಾದ ಅವರೂ ಭಾಗವಹಿಸಿ ದ್ದರು. ಅವರನ್ನು ಸನ್ಮಾನಿಸಿದ್ದೇನೆ. ಈ ವಿವಾದದಲ್ಲಿ ನನ್ನನ್ನು ಅನವಶ್ಯಕವಾಗಿ ಎಳೆದ ಬಗ್ಗೆ ನನಗೆ ವಿಷಾದವಾಗಿದೆ.


● ಶ್ರೀ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ

ಈಗ ಬ್ಲಾಗ್ ಲೋಕದಲ್ಲಿ ಲಂಕೇಶ್

ಈಗ ನಿಮ್ಮ ನೆಚ್ಚಿನ 'ಲಂಕೇಶ್' ವಾರ ಪತ್ರಿಕೆಯು ಬ್ಲಾಗ್ ದಲ್ಲೂ ಲಭ್ಯವಿದೆ. ನಮ್ಮ ಬ್ಲಾಗ್ ಅಡ್ರೆಸ್: '...gaurilankesh.blogspot.com' ರ್ನಾಟಕದಿಂದ ಬೇರೆ ನಗರಗಳಲ್ಲಿ, ವಿವಿಧ ಲ್ಲಿ ಇರುವ ನಿಮ್ಮ ಮಿತ್ರರಿಗೆ ಈ ಬ್ಲಾಗ್ ಳಿಸಿ. ಅವರೂ ಇದನ್ನು ಓದುವಂತಾಗಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವಂತಾಗಲಿ, ಗಾಗಲೇ ಹಲವಾರು ಜನ ನಮ್ಮ ಬ್ಲಾಗ್‌ಅನ್ನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ.

ನ.... ಈ ಬ್ಲಾಗ್‌ಅನ್ನು ಶುರು ವುದನ್ನು ಕೇಳಿ ತುಂಬಾ ಸಂತೋಷವಾಯಿತು. ಂಕೇಶ್' ವಾರ ಪತ್ರಿಕೆಯನ್ನು ಆರಾಮವಾಗಿ ಓದಬಹುದು. ಧನ್ಯವಾದಗಳು.

- ಶ್ವೇತಾ ನದಿಗೇರ್



ಕುಳಿತಲ್ಲಿಂದಲೇ ಲೋಕದ ನಿಜ ಕಾಣುವಂತಾಯಿತು. ನಿಮ್ಮ ಅಪ್ಪ ಇರುತ್ತಿದ್ದರೆ ಸಂತಸಪಡುತ್ತಿದ್ದರು.

- ಬೋಳುವಾರು ಮೊಹಮ್ಮದ್ ಕುಞ್

ಬಿನಾಯಕ್ ಸೇನ್ ಅವರ ಬಂಧನದ ಬಗ್ಗೆ ನಿಮ್ಮ ಬ್ಲಾಗ್‌ನಲ್ಲಿನ ಟಿಪ್ಪಣಿಯನ್ನು ಓದಿದೆ. ನಿಜ, ಇವತ್ತು ವ್ಯವಸ್ಥೆಯ ವಿರುದ್ಧ ಮಾತನಾಡುವವರನ್ನು ಜೈಲಿಗೋ, ಹುಚ್ಚಾಸ್ಪತ್ರೆಗೋ ದೂಡಲಾಗುತ್ತದೆ. ಇದು ದುಃಖಕರ ಸಂಗತಿ.

- ಬಾಲು ಬಲಿ

ನೀವು ಬ್ಲಾಗ್ ಆರಂಭಿಸಿದ್ದು ಒಳ್ಳೆಯದೇ ಆಯಿತು. ತೀರಾ ವಯಕ್ತಿಕ ನೆಲೆಯ ಬ್ಲಾಗ್ ಲೋಕಕ್ಕೆ ಸಾಮುದಾಯಿಕ ನೆಲೆ ದೊರಕಬೇಕಿದೆ.

- ಅರುಣ್ ಜೋಳದಕೂಡ್ಲಿಗಿ

'ಲಂಕೇಶ್' ವಾರ ಪತ್ರಿಕೆಯ ಬ್ಲಾಗ್ ಸುದ್ದಿ ಕೇಳಿ ತುಂಬಾ ಖುಷಿಯಾಯಿತು. ಹೊಸ ವರ್ಷಕ್ಕೆ ಒಂದು ಹೊಸ ಸುದ್ದಿ ನೀಡಿದ್ದಕ್ಕೆ ಥ್ಯಾಂಕ್ಸ್.

- ಕನಕ ರಾಜು

ಬ್ಲಾಗ್ ನೋಡಿ ತುಂಬಾ ಖುಷಿಯಾಯಿತು. ನಿಮ್ಮ ಪ್ರಯತ್ನ ಯಶಸ್ವಿಯಾಗಲಿ,

- ಉಷಾ.ಬಿ.

ಬ್ಲಾಗ್ ತುಂಬಾ ಚೆನ್ನಾಗಿದೆ. ಇದುನ್ನು ನೀನು ಬಹಳ ಹಿಂದೆಯೇ ಆರಂಭಿಸಬೇಕಿತ್ತು. ಕರ್ನಾಟಕದಿಂದ ಹೊರಗಿರುವವರಿಗೆ ಇದು ತುಂಬಾ ಉಪಯುಕ್ತವಾಗಿದೆ. ಇದನ್ನು ಪ್ರತಿ ವಾರ ಮರೆಯದೆ ಅಪ್‌ಡೇಟ್ ಮಾಡಿ.

- ಕೋಮಲೇಶ್

ಬ್ಲಾಗ್ ಮೂಲಕ 'ಲಂಕೇಶ್' ವಾರ ಪತ್ರಿಕೆ ಇನ್ನೂ ಹೆಚ್ಚು ಜನರನ್ನು ತಲುಪುತ್ತದೆ. ಅಭಿನಂದನೆಗಳು.

- ಸುರೇಶ್ ಭಟ್



ಹಣದುಬ್ಬರ ಹಾಗೂ ಅಮೆರಿಕದ ಗುಲಾಮೀ!


▶▶ 2

ನೋಡಿದರೆ ಅಂತರರಾಷ್ಟ್ರೀಯ ಅಟಾಮಿಕ್ ಎನರ್ಜಿ ಏಜೆನ್ಸಿಯ ಅಧ್ಯಕ್ಷ ಎಲ್-ಬರಾದಿ ಇರಾನಿಗೆ ಭೇಟಿಕೊಟ್ಟು ಅಲ್ಲಿ ಯಾವ ಅಣ್ವಸ್ತ್ರಗಳೂ ಇಲ್ಲವೆಂದು ಸ್ಪಷ್ಟವಾಗಿ ಘೋಷಿಸಿಯಾಗಿದೆ.

ಆದರೂ ಅಮೆರಿಕ ಮತ್ತು ಯೂರೋಪುಗಳು ತಮ್ಮ ಸಾಮ್ರಾಜ್ಯಶಾಹಿ ಹಿತಾಸಕ್ತಿಯ ವಿರುದ್ಧವಾಗಿರುವ ಇರಾನನ್ನು ಹಣಿಯುವ ಸಲುವಾಗಿಯೇ ಅಣ್ವಸ್ತ್ರ ಭೂತವನ್ನು ಜೀವಂತವಾಗಿಟ್ಟಿವೆ. ಇರಾನಿನೊಡನೆ ಹಣಕಾಸು ಮತ್ತು ವ್ಯಾಪಾರ ಸಂಬಂಧ ಇಟ್ಟುಕೊಂಡಿರುವ ಎಲ್ಲಾ ದೇಶಗಳ ಮೇಲೆ ಇರಾನನ್ನು ಸಾಧ್ಯವಾದಷ್ಟು ಹೊರಗಿಡಲು ಒತ್ತಡ ಹೇರುತ್ತಿದೆ. ಮೊನ್ನೆ ಒಬಾಮಾ ಭಾರತಕ್ಕೆ ಬಂದಾಗಲೂ ಭಾರತಕ್ಕೆ ಇರಾನ್ ಜೊತೆ ಸಂಬಂಧ ಕಡಿದುಕೊಳ್ಳುವಂತೆ ಎಚ್ಚರಿಸಿಹೋಗಿದ್ದ.

ಅದರ ಫಲಿತಾಂಶವಾಗಿಯೇ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಇರಾನಿನ ವಿರುದ್ಧ ಮತ ಚಲಾಯಿಸಲು ಪ್ರಾರಂಭಿಸಿದೆ. ಮೊನ್ನೆ ಭಾರತದ ರಿಸರ್ವ್ ಬ್ಯಾಂಕು ಇರಾನಿನ ಜೊತೆ ತೈಲ ವ್ಯವಹಾರವನ್ನು ಇನ್ನು ಮುಂದೆ **Asian Clearing Union (ACU)** ಎಂಬ ವ್ಯವಸ್ಥೆಯಡಿ ಮಾಡಿಕೊಳ್ಳಲಾಗದೆಂದು ಘೋಷಿಸಿದೆ. ಇದರ ಹಿಂದೆ ಅಮೆರಿಕದ ಒಂದು ದೊಡ್ಡ ಕುತಂತ್ರವಿದೆ. ಇರಾನಿನ ಎಲ್ಲಾ ವಹಿವಾಟುಗಳು ತಮ್ಮ ಕಣ್ಣು ತಪ್ಪಿಸಿ ನಡೆಯಬಾರದೆಂಬ ಕುತಂತ್ರವದು. ಏಷಿಯಾ ದೇಶಗಳ ಕರೆನ್ಸಿಗಳಲ್ಲೇ ಇರಾನಿನ ಜೊತೆಯ ವಹಿವಾಟು ನಡೆದು ಹೋದರೆ ಈ ಬಹುದೊಡ್ಡ ಮೊತ್ತದ ವಹಿವಾಟು ತಮ್ಮ ಕಣ್ಣು ತಪ್ಪುತ್ತದೆ ಮಾತ್ರವಲ್ಲ ಅದರಲ್ಲಿ ತಮ್ಮ ಮಧ್ಯಪ್ರವೇಶವೂ ಇಲ್ಲದಂತಾಗುತ್ತದೆ ಎಂಬುದು ಮೊದಲಿಂದಲೂ ಅದಕ್ಕಿದ್ದ ಕಣ್ಣುರಿ. ಈಗ ಭಾರತ ಇರಾನಿನ ಜೊತೆ ತಮ್ಮ ವಹಿವಾಟನ್ನು ಡಾಲರ್ ಅಥವಾ ಯೂರೋಗಳಲ್ಲಿ ಮಾತ್ರ ನಡೆಸುತ್ತೇವೆಂದೂ ಮತ್ತು ಕೂಡಲೇ ತಮ್ಮ ವಹಿವಾಟಿಗೆ ಯೂರೋಪಿನ ಬ್ಯಾಂಕೊಂದನ್ನು ಸೂಚಿಸಬೇಕೆಂದೂ ಹೇಳಿರುವುದರಿಂದ ಈಗ ಈ ಇಡೀ ವಹಿವಾಟು ಯುರೋಪ್ ಮತ್ತು ಅಮೆರಿಕದ ಮಧ್ಯಪ್ರವೇಶಕ್ಕೆ ತೆರೆದುಕೊಳ್ಳುತ್ತದೆ. ಆ ಮೂಲಕ ಇರಾನಿನ ಆ ಆರ್ಥಿಕ ವ್ಯವಸ್ಥೆಯನ್ನು ಸೂಕ್ತ ಸಂದರ್ಭದಲ್ಲಿ ಅಮೆರಿಕ ಮತ್ತು ಯೂರೋಪುಗಳು ಬಗ್ಗುಬಡಿಯಬಹುದು. ಇದು ಅದರ ಹುನ್ನಾರ. ನಮ್ಮಿಂದ ಆಯ್ಕೆಯಾದ ಭಾರತ ಸರ್ಕಾರವೂ ಈ ಸಾಮ್ರಾಜ್ಯಶಾಹಿ ಹುನ್ನಾರದಲ್ಲಿ ಭಾರತೀಯ ಜನರ ಆಸಕ್ತಿಗೆ ವಿರುದ್ಧವಾಗಿ ಪಾಲುಗೊಂಡಿದೆ. ಇದರಿಂದ ಇರಾನಿನ ತೈಲ ಸರಬರಾಜು ನಿಂತಲ್ಲಿ ಕೂಡಲೇ ಡೀಸೆಲ್, ಪೆಟ್ರೋಲ್, ಅಡುಗೆ ಅನಿಲದ ಬೆಲೆ ಜಾಸ್ತಿಯಾಗುತ್ತದೆ. ಪರ್ಯಾಯವಾಗಿ ಸಿಗಬಹುದಾಗಿದ್ದ ಅಗ್ಗದ ಇರಾನ್ ಅನಿಲ ಮೂಲವೂ ಇಲ್ಲವಾಗುತ್ತದೆ. ಅಲ್ಲದೆ ಅಮೆರಿಕದ ಸಾಮ್ರಾಜ್ಯಶಾಹಿ ಕುತಂತ್ರದಲ್ಲಿ ಮತ್ತು ಅದರ ಗುಲಾಮಿಯಲ್ಲಿ ಶಾಶ್ವತವಾಗಿ ಸಿಲುಕಿದಂತಾಗುತ್ತದೆ.

ಹೀಗಾಗಿ ಈಗ ಆಯ್ಕೆ ಅಮೆರಿಕದ ಗುಲಾಮಿಯೋ ಅಥವಾ ಇರಾನಿನಂತಹ ದೇಶಗಳ ತೈಲ ಮತ್ತು ಸ್ನೇಹವೋ? ಎಂಬುದೇ ಆಗಿದೆ. ನಮ್ಮನ್ನಾಳು ವವರು- ಕಾಂಗ್ರೆಸ್-ಬಿಜೆಪಿ ಎಲ್ಲರೂ ಅಮೆರಿಕದ ಗುಲಾಮಗಿರಿಯನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ ಭಾರತವೆಂದರೆ ಭಾರತದ ಜನರೇ ಹೊರತು ಈ ದಲ್ಲಾಳಿಗಳಲ್ಲ ಎಂದು ನಾವು ಬೀದಿಗಿಳಿಯದಿದ್ದರೆ ಬದುಕೂ ಇಲ್ಲ. ಭವಿಷ್ಯವೂ ಇಲ್ಲ.



ಶಿಸ್ತಿನ ಸಂಶೋಧಕನಿಗೆ ನಾಡೋಜ ಹಿರಿಮೆ

1988: ಎಂ.ಎಂ. ಕಲಬುರ್ಗಿ ಅವರಿಗೆ ಐವತ್ತು; ಅವರ ಸಂಶೋಧನೆಗೆ ಇಪ್ಪತ್ತೈದು. ಆಗ ಪ್ರಕಟವಾಗಿದ್ದು 200 ಲೇಖನಗಳ ಮಾರ್ಗದ ಎರಡು ಸಂಪುಟಗಳು. 1998: ಕಲಬುರ್ಗಿಗೆ ಅರವತ್ತು. ಮತ್ತೆ 100 ಲೇಖನಗಳ ಮಾರ್ಗದ ಮೂರನೆಯ ಸಂಪುಟದ ಪ್ರಕಾಶನ. 2004. ಕಲಬುರ್ಗಿ ಸಂಶೋಧನೆಗೆ ನಲವತ್ತು. ಆಗ ಇನ್ನೂ 100 ಅಪ್ರಕಟಿತ ಲೇಖನಗಳ ನಾಲ್ಕನೆಯ ಸಂಪುಟದ ಕೊಡುಗೆ. 2010: ಎಪ್ಪತ್ತು ದಾಟಿದ ಕಲಬುರ್ಗಿ ಅವರಿಂದ ಮಾರ್ಗದ ಆರು ಸಂಪುಟಗಳ ಲೋಕಾರ್ಪಣೆ. ಕೊನೆಯ ಎರಡು ಸಂಪುಟಗಳಲ್ಲಿ ಅವರು ತಮ್ಮ ಹಲವಾರು ಕೃತಿಗಳಿಗೆ ಬರೆದ ಪೀಠಿಕೆ-ಪ್ರಸ್ತಾವನೆ-ಅರಿಕೆ ವಿದ್ಯಾರ್ಥಿಗಳ -ಮಿತ್ರರ ಪುಸ್ತಕಗಳಿಗೆ ಬರೆದ ಮುನ್ನುಡಿ-ಬೆನ್ನುಡಿ ಬೇರೆ ಸಂದರ್ಭಗಳಲ್ಲಿ ಮಾಡಿದ ಭಾಷಣ, ಲೆಕ್ಕಣಿಸಿದ ವ್ಯಕ್ತಿಚಿತ್ರಗಳಿವೆ. ಈ ಆರು ಸಂಪುಟಗಳು ಕಲಬುರ್ಗಿಯವರ ಬಿಡಿಬರೆಹಗಳ ಭಂಡಾರ; ಸಂಶೋಧನ ಜೀವನದ ಅಮೃತ ನಿಧಿ. ಶ್ರಮ-ಶಿಸ್ತು-ಶ್ರದ್ಧೆಗಳನ್ನು ಕ್ಷಣಕ್ಷಣಕ್ಕೂ ಬಯಸುವ ಸಂಶೋಧನಾ ಕ್ಷೇತ್ರದಲ್ಲಿ ಐವತ್ತು ವರ್ಷ ದುಡಿದು-ಬೆಳೆದು ಉಳಿದಿರುವ ದೈತ್ಯ ಸಂಶೋಧಕ ಕಲಬುರ್ಗಿ.

ಮಾರ್ಗದ ಆರು ಸಂಪುಟಗಳಲ್ಲಿರುವುದು 654 ಬರೆಹಗಳು; 3500 ಪುಟ ಮೀರಿದ ಸಂಶೋಧನ ಪಂಕ್ತಿ, ಇದು ಸಾಮಾನ್ಯರನ್ನು ಉಸಿರುಕಟ್ಟಿಸುವ, ವಿದ್ವಾಂಸರನ್ನು ದಂಗುಬಡಿಸುವ ಗಾತ್ರ-ವ್ಯಾಪ್ತಿ, ಓದಿನ ವಿಸ್ತಾರ, ಅಧ್ಯಯನದ ಆಳಗಳಿರುವ ಇದೊಂದು ಸಂಶೋಧನ ಸಾಗರ. ಇಲ್ಲಿ ಪಾಂಡಿತ್ಯ ಉಪ್ಪಿನಂತೆ ಕರಗಿದೆ; ಶೋಧನೆಯ ಫಲಿತಗಳು ಮುತ್ತಿನಂತೆ ಉಳಿದಿವೆ. ಕಲಬುರ್ಗಿಯವರದು ಬಹುಶಿಸ್ತೀಯ ಸಂಶೋಧನೆ. ವ್ಯಾಕರಣ, ಛಂದಸ್ಸು, ಹಸ್ತಪ್ರತಿಶಾಸ್ತ್ರ ಗ್ರಂಥ ಸಂಪಾದನೆ, ಶಾಸನ, ಜಾನಪದ, ನಾಮವಿಜ್ಞಾನ, ಇತಿಹಾಸ, ಸಾಹಿತ್ಯ ಚರಿತ್ರೆ-ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಅವರು ದುಡಿದಿದ್ದಾರೆ. ಅವರ ಬೌದ್ಧಿಕ ಪರಿಶ್ರಮದ ನಿತ್ಯಕಾಯಕದ ಫಲ ಈ ಸಂಪುಟಗಳಲ್ಲಿವೆ. ಅವರ ಈ ಬಹುಮುಖಿ ಸಂಶೋಧನೆಯೇ ಅವರನ್ನು ಆರ್. ನರಸಿಂಹಾಚಾರ್, ಗೋವಿಂದ ಪೈ, ಹಳಕಟ್ಟಿ ಅವರ ಮಹಾಸಾಲಿಗೆ ಏರಿಸಿದೆ.

ಸಂಶೋಧನೆಯ ಎಲ್ಲ ಮಾದರಿಗಳೂ ಈ ಸಂಪುಟಗಳಲ್ಲಿವೆ. ರನ್ನಕಂದ, ವಜ್ರಭಟ್ಟನ ವೀರಾವಳಿ, ಸಿದ್ಧರಾಮನ ಬಗೆಗಿನ ಸಿದ್ಧಮಂಕನ ಚರಿತೆ, ಹಳೆಯ-ಹೊಸ ಕುಮಾರರಾಮನ ಸಾಂಗತ್ಯಗಳು, ಇಮ್ಮಡಿ ಚಿಕ್ಕಭೂಪಾಲ-ನಿಂಬಸಾಮಂತರನ್ನು ಕುರಿತ ಕೃತಿ ಬರೆಹಗಳು ಹೊಸಹೊಸ ಮಾಹಿತಿ ಸೇರಿಸುವ ಆಕರನಿಷ್ಠ ಸಂಶೋಧನೆ. ಪಂಪ, ಬಸವಣ್ಣ ಸಿದ್ಧರಾಮ, ಚಾಮರಸ, ಕೆರೆಯ ಪದ್ಮರಸರ ಬಗೆಗಿನ ಚರಿತ್ರೋ-ಸಾಹಿತ್ಯ ಸಮಾಜೋ-ಧಾರ್ಮಿಕ ಬರೆಹಗಳು ಹೊಸ ದೃಷ್ಟಿಕೋನ ನೀಡುವ ವ್ಯಾಖ್ಯಾನ ನಿಷ್ಠ ಶೋಧಗಳು. ಕಲಬುರ್ಗಿಯವರು ವ್ಯಾಪಕವಾಗಿ ಕ್ಷೇತ್ರ ಸಂಶೋಧನೆ ಕೂಡ ಕೈಗೊಂಡಿದ್ದಾರೆ. ಪಂಪನ ಧರ್ಮಪುರ, ಅವನ ತಂದೆ ಭೀಮಪಯ್ಯನ ಮನೆತನ, ಸಿದ್ಧರಾಮ ಕಟ್ಟಿಸಿದ ದೇವಾಲಯ, ನಾಗಚಂದ್ರನ ಬಸದಿ, ಕಿತ್ತೂರ ಮನೆತನದ ದಾಖಲೆಗಳನ್ನು ಇಂಥ ತಿರುಗಾಟದಲ್ಲಿ ಹುಡುಕಿದ್ದಾರೆ. ಕರ್ನಾಟಕದ ಪಾಳೆಯಗಾರರು, ಉಪೇಕ್ಷಿತ ದಾಖಲೆಗಳಾದ ಕೈಪಿಡಿಯತ್ತು ಐತಿಹಾಸಿಕ ಲಾವಣಿಗಳ ಬಗ್ಗೆ ಹೆಚ್ಚು ಗಮನ ಸೆಳೆದವರು ಅವರೇ. ಸಾಹಿತ್ಯದ ಏಕಮುಖ ವಿಶ್ಲೇಷಣೆ ಮುರಿದು, ಅದನ್ನು ಚರಿತ್ರೆ-ಸಮಾಜ-ಧರ್ಮಗಳ ಪರಿಸರದಲ್ಲಿ ಶೋಧಿಸುವ ವಿಶಿಷ್ಟ ಮಾರ್ಗ ಅವರದು.

ಕಲಬುರ್ಗಿ ಒಬ್ಬ ಸಂಸ್ಕೃತಿ ಸಂಶೋಧಕ. ಪಂಪನಿಂದ ಅರಟಾಳ ರುದ್ರಗೌಡರ ಚರಿತ್ರೆಯವರೆಗೆ ಅವರ ಸಂಸ್ಕೃತ ಸಂಶೋಧನೆಯ ವ್ಯಾಪ್ತಿ. ಪಂಪನ ವೀರಸಿದ್ಧಾಂತ. ಸಮಯ ಪರೀಕ್ಷೆಯ ಆತ್ಮಬಲಿದಾನ ಅಸ್ಪೃಶ್ಯತೆಯ ನಿರ್ಮೂಲನದಲ್ಲಿ ಶರಣರ ಕಾರ್ಯವಿಧಾನ, ಶರಣರು ಕಟ್ಟಬಯಸಿದ ಸ್ತ್ರೀಸಮಾಜ, ಉಡುಚದೇವಿ-ಲಜ್ಜಾಗೌರಿ, ಅಡ್ಡಹೆಸರು, ಬಸವಣ್ಣನವರು ಯಾವ ಮೂಲದ ಬ್ರಾಹ್ಮಣರು, ಅನ್ಯಸಂಸ್ಕೃತಿಯ ಜೈನೀಕರಣ, ಪ್ರಾಚೀನ ದೇವಾಲಯಗಳ ನಾಶದ ಹಿನ್ನೆಲೆ, ಜೈನಸಮಾಜದ ಮತಾಂತರ ದೀಕ್ಷೆ-ಮಂತ್ರದೀಕ್ಷೆ ಪ್ರಸಾರ ಮಾಧ್ಯಮಗಳಾಗಿ ಪಾದೋದಕ-ಪ್ರಸಾದ-ವಿಭೂತಿ, ಚತುರಾಚಾರ್ಯ ಪೀಠ-ಪಂಚಪೀಠಗಳು ಇಂಥ ನೂರಾರು ವಿಷಯಗಳ ಬಗ್ಗೆ ಅವರು ಹೊಸಬೆಳಕು ಚೆಲ್ಲಿದ್ದಾರೆ. ಬಸವೋತ್ತರ ಯುಗದ ಅವೈದಿಕ ಸಾಂಸ ತಿಕ ಚಲನೆಗಳನ್ನು ಬೇಡ, ಕುರುಬ, ಗೊಲ್ಲ ಸಮಾಜಗಳ ಹಿನ್ನೆಲೆಯಲ್ಲಿ ಗುರುತಿಸುವ ಅವರ ಪ್ರಯತ್ನ ಭಿನ್ನ ಮಾರ್ಗದ್ದು. ಚಾವುಂಡರಾಯ, ವಿಷ್ಣುವರ್ಧನ ಕೃಷ್ಣದೇವರಾಯ, ಚಿಕದೇವರಾಜರನ್ನು ಅನ್ಯಭಾಷಾ-ಸಂಸ್ಕೃತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಕಲಬುರ್ಗಿಯವರ ಈ ಹುಡುಕಾಟ ಸಾಹಿತ್ಯದ ನೆಲೆ ದಾಟಿ ಪರಂಪರೆಯೊಂದಿಗಿನ ಅನುಸಂಧಾನವಾಗುತ್ತದೆ. ಇದರಿಂದಲೇ ಕಲಬುರ್ಗಿಯವರ ಸಂಶೋಧನೆ ಪುಸ್ತಕ ಪಾಂಡಿತ್ಯವಾಗದೆ, ಕೇವಲ ವಿದ್ವಾಂಸರ ವಾದವಾಗದೆ ಸಮಾಜಮುಖಿಯಾಗಿ ಸಾಮಾಜಿಕ ಸಂವಾದವಾಗಿದೆ.

ಕಲಬುರ್ಗಿಗೆ ಪಂಪನ ಬಗ್ಗೆ ಅಪಾರ ಅಭಿಮಾನ-ಗೌರವ. ಪಂಪನ ಬಗ್ಗೆ ಹತ್ತು ಹಲವು ಸಂಶೋಧನೆ ನಡೆಸಿರುವ ಅವರು ಪಂಪ ಪ್ರಶಸ್ತಿ ಪುರಸ್ಕೃತರು. ಅವರಿಗೆ ಈಚೆಗಷ್ಟೇ ಕನ್ನಡ ವಿಶ್ವವಿದ್ಯಾಲಯ ನಾಡೋಜ ಗೌರವ ಪದವಿ ನೀಡಿದೆ. ಇದನ್ನು ತಮ್ಮ ಹೆಸರ ಹಿಂದೆಮುಂದೆ ಹಾಕುವುದನ್ನು ಒಲ್ಲದ ಕಲಬುರ್ಗಿ ಇದನ್ನು "ಬಳಸಬಾರದು, ಭಾವಿಸಬೇಕು" ಎನ್ನುತ್ತಾರೆ. ಇದು ಮಹಾಕವಿಗೆ ಮಹಾಸಂಶೋಧಕ ತೋರುವ ಘನಗೌರವ.

• ಎನ್.ಎಸ್. ತಾರಾನಾಥ

ನನ್ನ ದೇವರು

• ಶಿ.ಜು. ಪಾಶ

ದೇವರನ್ನು ಹುಟ್ಟಿಸಿದ ಮೇಲೆ
ಯಾಕೋ ನನ್ನಲ್ಲೂ ಮೌನ, ಗಹನ ಕಾನನ;
ಎಲ್ಲೋ ಹುಲಿಯಾದಂತೆ, ಸಿಂಹವಾದಂತೆ
ಘರ್ಜನೆ-ಭಯವೇ ಜನಿಸಿದಂತೆ ವೇದನೆ
ನರಿಬಿಟ್ಟ ಹೂಸಿನ ಸಂಶೋಧನೆ.

ಆಶ್ಚರ್ಯವಾಯಿತು ಹುಟ್ಟಿದ ಮೇಲೆ ಅವನು
ನೆಟ್ಟಗಿದ್ದ ಜಗತ್ತಿನಲ್ಲಿ ಸೊಟ್ಟಗಿನ ಕಥೆಗಳು
ಕಟ್ಟುಕಥೆಗಳಲ್ಲಿ ವ್ಯಥೆಗಳು; ಓಹ್, ದೇವರೇ ಎಂಬುದ್ಗಾರಗಳು
ಕೊಂದುಬಿಡಲೇ? ಅಥವಾ ನೊಂದುಬಿಡಲೇ?
ಮನಸೊಳಗೆ ಸತ್ತ ಅಪ್ಸರೆಯ ದೇಹವಾಸನೆ.

ಅಂಡ-ವೀರ್ಯ ಸೇರಲಿಲ್ಲ; ಯುದ್ಧವಾಗಲಿಲ್ಲ,
ಗೆದ್ದವರು ಸಂಭ್ರಮಿಸಿ ಪ್ರೀತಿಸಲಿಲ್ಲ, ಆದರೂ
ಹುಟ್ಟಿಬಿಟ್ಟ ದೇವರು ಬಿಟ್ಟಿಬಿಟ್ಟಿ ಸೃಷ್ಟಿ
ಕುಂತಿಯಂತೆ ನಾನೂ ಎಸೆದುಬಿಡಲಾ ನದಿಗೆ?
ಸರಿಸಿಬಿಡಲಾ ಬದುಕಿನ ಬದಿಗೆ?

ಉಸಿರಾಡಲು ಮೂಗುಕೊಟ್ಟೆ, ನೋಡಲು ಕಣ್ಣು
ಕೇಳಲು ಕಿವಿ, ಅಡ್ಡಾಡಲು ಕಾಲು, ಅಪ್ಪಿಕೊಳ್ಳಲು ಕೈ
ತಪಸ್ಸು ಮಾಡಲು ಭೂಮಿ, ಶಾಂತವಾಗಿರಲು ಗುಡಿಮಿನಾರು
ಎಲ್ಲಎಲ್ಲವನು ಕೊಟ್ಟೆ ಹುಟ್ಟಿಸಿದ ತಪ್ಪಿಗೆ;
ಉಸಿರಾಡಲಿಲ್ಲ, ನೋಡಲಿಲ್ಲ, ಓಡಲಿಲ್ಲ, ಅಪ್ಪಿಕೊಳ್ಳಲೂ ಇಲ್ಲ!

ಹುಟ್ಟಿದ ದೇವರು ಸತ್ತಿದ್ದಾನೆ
ಸತ್ತ ದೇವರ ಮೆರವಣಿಗೆ ಸಾಗಿದೆ
ಬದುಕಿದವರನ್ನು ಮೆಲ್ಲಮೆಲ್ಲಗೆ ಕೊಲ್ಲುತ್ತಾ...



ಈ ಕಾಂಗ್ರೆಸ್ ಪಾರ್ಟಿ ದಳದ ಲೆವೆಲ್ಲಿಗೆ ಬತ್ತಲ್ಲ ಹೇಳು!

...ಲ್ಲಾ ತಾಲ್ಲೂಕು ಪಂಚಾಯ್ತಿ ಚುನಾವಣೆ ...ದಿಂದ ಯಾರಿಗೂ ಆಚ್ಚರಿಯಾಗಿರಲಿಲ್ಲ, ಆದರೆ ... ಸ್ಥಿತಿ ನೋಡಿದ ಸೀರ.

... ಕಾಂಗ್ರೆಸ್ ಯಾಕೆ ಹಿಂಗಾಯ್ತಲ್ಲಾ?" ಎಂದ.

...ಂಗಾಯ್ತಲ್ಲ ಅಂದ್ರೆ ಅದಿರದೇ ಅಂಗಲವೇನೊ. ...ನೋಟು, ಹರಿಜನರೋಟು ಟೋಟ್ಲು ಮಾಡಿದ್ರೆ ...ರಿಜಲ್ಲು ಬಂದತೂ" ಎಂದ ಉಗ್ರಿ.

...ಂಗರಿಲ್ಲಿ ಹರಿಜನರು ದಳಕಾಕಿದರಲ್ಲ ಇದಕ್ಕೇನೇ ... ಎಂದಳು ಜುಮ್ಮಿ.

...ಮು. ಲು ಸೀ ಮೆ
...ಪಟ್ಟೆಪುರಾಣ
► ಬಿ. ಚಂದ್ರೇಗೌಡ

...ವಾಗಿಲ್ಲ ಕಣೆ ನೀನು. ಯಾರು ಯಾರಿಗೋಟಾ ...ಂತ ಕಂಡಿಡಿ ಯ್ಯಂಗಾಗಿದ್ದಿ" ಎಂದ ಉಗ್ರಿ.

...ಮಾರು ಜನ ಅಂಗೆ ಹಾಕಿದ್ರು ಕಂಡ್ಯ."

...ನು ನನಿಗೂ ಗೊತ್ತು. ಅವು ಯಾಕಾಕಿದ್ರು ...? ಕಾಂಗ್ರೆಸ್ಸಿನೋರು ಯಣ್ಣೆ ಜ್ಯತಿಗೆ ಕಾಸನೂ ...ಂತ ಕಡೆವರಿಗೂ ಕಾದ್ರು. ಕಾಂಗ್ರೆಸ್ಸಿನೂರು ಬರಲಿಲ್ಲ, ...ಟ್ಟಿಗೆ ದಳಕ್ಕೆ ಜಡದರತ್ತಗೆ."

...ಂಗರೆ ಕಾಂಗ್ರೆಸ್ಸಿನೋರು ಕಾಸು ಕೊಡಲಿಲ್ಲ

...ವುರತ್ರ ಕಾಸೆಲ್ಲಿ ಬಂದತೇ. ಇಡೀ ಕರ್ನಾಟಕದಲ್ಲಿ ...ಚುನಾವಣೆ ಮಾಡಿದೋರು ಅವುರೆಯಾ. ಏನಪ್ಪ ...ವಳ್ಳೆ ಕ್ಯಾಂಡೇಟಾಕಿದ್ರು ಅಷ್ಟೆ."

...ದ್ರು ಸೋಲಿಸಿದರಲ್ಲ ಹೇಳು."

...ನ ಕೆಟ್ಟು ಕ್ಯರ ಹಿಡದಿರುವಾಗ ಯಂಥಾ ...ಜೂ ಸೋಲ್ತನೆ. ಆ ಕಾಗೋಡು ತಿಮ್ಮಪ್ಪ ಅನ್ನೋನು ...ಟೋಟು ಕ್ಯಲಸ ಮಾಡಿಸಿದ್ದನಂತೆ. ಆದ್ರು ಯರಡು ...ೀತ ಅತ್ತಗೆ. ಇಲ್ಲಿ ಮತದಾರ ಕುಲಗೆಟ್ಟವುನೆ ...ೋ, ಕ್ಯಾಂಡೇಟ್ ಕೆಟ್ಟೋನು ಅಂತಿಯೋ."

... ಬಂಗಾರಪ್ಪುಂದೇನಾಯ್ತು?" ಎಂದ ಕಾಳಮಾವ.

...ಾಕೋ ಅವುನ ಕಾಲುಗುಣನೆ ಸರಿಲ್ಲ ಕಣಮಾವ. ...ೋರಾಗಿ ಸವುಂಡು ಮಾಡಿಕಂಡು ದ್ಯಾವೇಗೌಡನ ...ಬ್ಬೋದೆ. ಅವುನು ಬಾಳ ಅಕ್ಕರೆಯಿರೋನಂಗೆ ...ಪ್ಪನ್ನ ಹಾಡಿ ಕೊಂಡಾಡಿ ಮಗ್ಗಿಗೆ ಕೂರಿಸಿಗಂಡಿದ್ದ. ... ಮಾಡಿ. ಸೊರಬದ ಜನ ಬಿಜೆಪಿನೇ ಗೆಲ್ಲಿಸಿದರಂತೆ. ... ಬಂಗಾರಪ್ಪ ಬಾಯಿ ಬಂದ್ ಮಾಡಿಕಂಡುವುನೆ."

...ಂಗ್ರೆಸ್ಸಲ್ಲೇ ಇದ್ದಿದ್ರೇನು ಕಡಿತಿತ್ತೇ?"

"ನೀನಂಗತಿ. ಅವನು ಇರಬೇಕಲ್ಲ ಅವ್ರುನು ಬದ್ವಾಸಕ್ಕೆ, ಯಾವ ಪಾರ್ಟಿನೂ ಇಲ್ಲ, ಬಿಎಸ್ಪಿ ಅಂತ ಒಂದ್ಸು ಪಾರ್ಟಿ ಉಳಕಂಡದೆ ಅಷ್ಟೆ."

"ಬಿಎಸ್ಪಿ ಅಂತಸೂ ಪಾರ್ಟಿ ಇದ್ದತೆ?"

"ಊ, ಮ್ಯಾಯಾವತಿ ಪಾರ್ಟಿ ಕಣ ಮಾವ. ಅದು ಬ್ಯಳಿತಿತ್ತೋ ಏನೋ. ಯಾವಾಗ ಪರಮೇಸ ಕಾಂಗ್ರೆಸ್ ಅದ್ಯಕ್ಷಾದ್ನೊ ಆಗ್ಲೆ ಬಿಎಸ್‌ಪಿ ಕರಗಿದಂಗೆ ಕಾಣ್ತದೆ."

"ಬಿಎಸ್‌ಪಿ ಯಾಕೆ ಕರಗ್ತಾ ಅದೆ ಗೊತ್ತೇನೊ ಉಗ್ರಿ?" ಎನ್ನುತ್ತಾ ವಾಟಿಸ್ಸೆ ಬಂದ.

"ಎಲ್ಲಿಗೋಗಿದ್ದ ಮರುದಿನದಿಂದ?" ಎಂದಳು ಜುಮ್ಮಿ.

"ನಮ್ಮ ಕ್ಯಾಂಡೇಟ್ ಸೋತಿದ್ರಿಂದ ಭೂಗತನಾಗಿದ್ದೆ ಕಣಕ್ಕ."

"ಸೋತ ಕ್ಯಾಂಡೇಟ್ ಆರಾಮಾಗಿ ರುವಾಗ ನೀನ್ಯಾಕೆ ತಲೆ ಮರಿಸಿಗಂಡಿದ್ದೊ?"

"ಯಾಕೆ ಗೊತ್ತೇನೊ ಉಗ್ರಿ. ಸಾಮಾನ್ಯವಾಗಿ ನಾನು ಯಾವುದೇ ಚುನಾವಣೇಲಿ ಕ್ಯಾಂಡೇಟಗಿಂತ ಜಾಸ್ತಿನೆ ವರಕು ಮಾಡಿರತಿನಿ."

"ವರುಕಲ್ಲ, ಕೂಗಾಡಿರಿತಿ ಕಣೊ."

"ಅಂಗೆ ತಿಳಕೊ. ಚುನಾವಣೆನ ನಾನು ಸಾವುಬದುಕಿನ ಸಮಸ್ಯೆಯಾಗಿ ತಗಂಬುಡ್ತೀನಿ."

"ಅದ್ಯಾಕೆ ಅಂದ್ರೆ ಯಾವಾಗ್ಲು ಅಮಲಲ್ಲಿರತಿ ನೋಡು, ಅದ್ಕೆ."

"ಇರಬವುದು. ಆ ತರ ಇದ್ದು ಕ್ಯಾಂಡೇಟ್ ಸೋತಾಗ ಅನಿವಾರ್ಯವಾಗಿ ನಾನು ತಲೆಮರೆಸಿ ಕೊಬೇಕಾಯ್ತದೆ. ಆದ್ರಿಂದ ಊರಲ್ಲಿರಲಿಲ್ಲ. ಆದ್ರು ನಾನು ಈ ಸೋಲ ಅವುಮಾನವಾಗಿ ತಗಳದಿಲ್ಲ. ಯಾಕಪ್ಪ ಅಂದ್ರೆ ನಾನಾಗ್ಲಿ, ನನ್ನ ಕಡೆಯವರಾಗ್ಲಿ ಯಾರಿಗೂ ಒಂದು ರೂಪಾಯಿ ಕೊಡ್ತಿಲ್ಲ, ಒಂದು ಬಾಟ್ಲನೂ ಕೊಡ್ತಿಲ್ಲ. ಅದಕಾಗಿ ಸೋತಿದ್ದಿವಿ ಅಂದ್ರೆ ಅದು ನಮ್ಮ ಗೆಲುವು, ಮತದಾರ್ರ ಸೋಲು ಅಲವೆ ದ್ವಡಪ್ಪ?"

"ಆದ್ರು ಗೆಲ್ಲಬೇಕಾಗಿತ್ತು ಕಂಡ್ಯ."

"ಅದು ನಿನ್ನ ಮನಿಸಿನಲ್ಲಿರೊ ಮಾತು. ಆದ್ರೆ ಜನ ಕೆಟ್ಟೋಗ್ಯವುರಲ್ಲ ಹೇಳು."

"ಸರಿಯಪ್ಪ, ಜನ ಕೆಡಿಸಿರೊರ್‍ಯಾರು ಹೇಳು."

"ನಾವೆ ಕೆಡಿಸಿದೋರು. ಅದನ್ನ ಒಪ್ಪಿಗತ್ತಿನ ದ್ವಡಪ್ಪ. ಆದ್ರುವೆ ಈ ಜನ ನಮ್ಮ ಕ್ಯಾಂಡೇಟ್ ಮುಖ ನೋಡಬೇಕಾಗಿತ್ತು. ಡಬಲ್ ಡಿಗ್ರಿ ಎಜುಕೇಟೆಡ್ ಅಂತ ಪ್ರಚಾರ ಮಾಡಿದ್ರೂ ಸೋಲಸವ್ರೆ?"

"ಅಲ್ಲ ಕಣೊ ವಾಟಿಸ್ಸೆ, ನಮ್ಮ ದೇಸದಲ್ಲಿ ನ್ಯಡಿಯೋ ಚುನಾವಣೇಲಿ ಡಿಗ್ರಿ ಎಲ್ಲಿ ಗೆಲ್ಲಿಸಿಕೊಟ್ಟಿದ್ದತೊ."

"ನಿಜಕಣೊ ಉಗ್ರಿ. ನಾನು ಯೋಚನೇನೆ ಮಾಡಿರಲಿಲ್ಲ, ಇದೇ ನಮ್ಮ ಮಾಜಿ ಪ್ರಧಾನಿಗಳಾದ ದ್ಯಾವೇಗೌಡ್ರು ಡಿಪ್ಲಮೊ. ಅವ್ರುರ ಮಗನೊಬ್ಬ ಒಂಬತ್ತನೇ ಕ್ಲಾಸು. ಇನ್ನೊಬ್ಬ ಡಿಗ್ರಿ ಮುಗುಸಲಿಲ್ಲ, ಆದ್ರು ಮಂತ್ರಿ, ಮುಖ್ಯಮಂತ್ರಿಗಳಾದ್ರು. ಅದೇ ಕೆಎಎಸ್ ಪಾಸ್ ಮಾಡಿರೊ ಬಾಲಕೃಷ್ಣ ಸರ್ಕಾರಿ ಕ್ಯಲಸ ಮಾಡಿ ವಿ.ಆರ್.ಎಸ್.ತಗಂಡು ಮನೆಲವುನೆ. ನಿಜ, ಡಿಗ್ರಿಗಳಿಗೂ ರಾಜಕಾರಣದ ಸೋಲು ಗೆಲುವಿಗೂ ಸಮುಂಧನೇ ಇಲ್ಲ, ನಾನು ಕ್ಯಾನುವಾಸಲ್ಲಿ ಅದ್ನೇ ಮುಂದು ಮಾಡಿಕಂಡು ಪ್ರಚಾರ ಮಾಡಕ್ಕೋಗಿದ್ದೆ. ಜಾಸ್ತಿ ಪೀಲಾದದ್ಕೇ ಅದೂ ಒಂದು ಕಾರಣ."

"ಸದ್ಯ ನಿನ್ನ ಕ್ಯಾಂಡೇಟ್ ಸೋತ್ರ ಅಂತ ಸೂಯ್‌ಸೈಡಿಗೆ ಟ್ರೈ ಮಾಡಿಲವಲ್ಲ ಹೇಳು"

"ಅದು ನ್ಯಡದೋಯ್ತು ಕಣೊ ಉಗ್ರಿ. ಈ ರಾಜ್ಯದಲ್ಲಿ ಅದ್ಯಾವುದೋ ಊರಲ್ಲಿ ಅಪ್ಪ ಸೋತ ಅಂತ ಮಗಳೇ ಸತ್ತಳಂತೆ. ಕ್ಯಾಂಡೇಟ್ ಸೋತ ಅಂತ ಅಭಿಮಾನಿ ಆತ್ಮಹತ್ಯೆ ಮಾಡಿಕೊಂನಂತೆ."

"ಅದ್ಯಾಕಂಗೆ ಸಾಯ್ತವುಲ?"

"ಯಾಕೆ ಅಂದ್ರೆ ಅವ್ರಲ್ಲ ಸೈಕಾಲಜಿ ಮ್ಯಾಟ್ರು ಕಣಕ್ಕ, ಬೇರೆ ಯಾವುದೊ ಪರಸೋನಲ್ ಮ್ಯಾಟ್ರುಗಳು ಸರಿಯಾದ



ಸಮಯ ಕಾಯ್ತಾಯಿರತವೆ. ನೋಡು ಮಂಡ್ಯಾದಲ್ಲಿ ಎಡೂರಪ್ಪನ್ನ ಇಳಿಸಿದ್ರೆ ಸೀಮೆಯಣ್ಣೆ ಹುಯ್ಕೊಂಡು ಸತ್ತೋಯ್ತಿನಿ ಅಂತ ಯಾವುದೊ ಕ್ರಾಕು ಯಣ್ಣೆ ಸಮೇತ ಬಂದಿತ್ತು. ಅದರ ಸಮಸ್ಯೆ ಏನು ಅಂತ ನೋಡಿದ್ರೆ, ಸಾಲಸೂಲದ ಸಮಸ್ಯೆ. ಅದ್ಕೆ ಎಡೂರಪ್ಪನ ಗಮನಕ್ಕೆ ಬೀಳಬೇಕಾಗಿತ್ತು. ಯಣ್ಣೆ ತಂದು ಟ್ರೈ ಮಾಡಿದ. ಅಗೊ ಅಂಗೆ ಒಂದು ಘಟನೆಗೆ ಹಲವು ಕಾರಣ ಇರತವೇ."

"ಅದೇನಾರ ಆಗ್ಲಿ, ಯಲಕ್ಷನ್ನಲಿ ಸೋತಿದ್ಕೆ ಸಾಯ್ತವೆ ಅಂದ್ರೆ ಆವಿಸ್ನಂಥಾ ಸಸ್ಯ ಮಗಸವ್ರುಲ? ಬದುಕು ಅಂದ್ರೆ ಯಲಕ್ಷನ್ನೊ ರಾಜಕಾರಣನೆ ಅದಿಲ್ದೆ ಬದುಕಲ್ಲಾಗಿರಿಲಂಪೆ."

"ಧಾರಾಳವಾಗಿ ಬದುಕಬವುದು ದ್ವಡಪ್ಪ, ವಿಸು ಪಾಡ್ತಿಯೇಳು. ಆ ಪಾಳು ನಜೀರ್ ಸಾಬರು ಮೂರು ಯಲಕ್ಷನ್ ತಂದು ಮಡಿಗ್ಯವುನೆ. ಅವ್ನ ಪಿಛಾಯಿಸೊ ವತ್ತಿಗೆ ಜನ ಗ್ವಬ್ಬರೆದ್ದು ಹೋಗ್ಯವುರೆ. ಇದೇ ನಮ್ಮ ಸೀರ ಚಿಗಪ್ಪನಂಥೋನ ಸುಸ್ತಾಗಿ ಕುಂತವುನೆ."

"ಅವುನ್ಯಾಕೆ ಸುಸ್ತಾಗಿದ್ದನ್ಲ? ಜೆಡಿಎಸ್ ಕಡಿಕೋಗಿ ಕಂಠ ಪೂರ್ತಿ ಕುಡಕಂಡು ಕಾಸುನೂ ಮಾಡಿಕಂಡು ಬಂದವ್ರುನೆ" ಎಂದಳು ಜುಮ್ಮಿ.

"ಆದ್ರು ಯಾಕ್ ಚಿಗಪ್ಪ ಡಲ್ಲಾಗಿದ್ದಿ?"

"ಅಲ್ಲಾ ಈ ಕಾಂಗ್ರೆಸ್ಸು, ಜೆಡಿಎಸ್ ಲ್ಯವೆಲ್ಲಿಗೆ ಬತ್ತಲ್ಲ ಹೇಳು."

"ಅಂಗೇನು ಆಗಿಲ್ಲ ಚಿಗಪ್ಪ, ಎಲ್ಲೆಲ್ಲಿ ಕಾಂಗ್ರೆಸ್ ಗೆಲ್ಲಬೇಕಾಗಿತ್ತೊ ಅಲ್ಯಲ್ಲ ದಳ ಅಡ್ಡಗಾಲಾಗಿ ಕಾಂಗ್ರೆಸ್ ಕೆಡಿಗ್ಯದೆ. ಅಂಗೇ ನೋಡಿದ್ರೆ ಯಲ್ಲಾ ಜಿಲ್ಲೆಲೂ ಕಾಂಗ್ರೆಸ್ ಅದೆ. ಅದೇ ನಿಮ್ಮ ಜೆಡಿಎಸ್ ಎಂಟತ್ತು ಜಿಲ್ಲೆಲಿ ಇಲ್ಲ, ಇದಕ್ಕೇನೇಳ್ತಿ?"

"ತುಂಡು ಗುತ್ತಿಗೆ ಜನಕೆ ಯಲ್ಲಾ ಕಡೆಲೂ ಪಾರ್ಟಿ ಇರದು ಬೇಕಾಗಿಲ್ಲ ಕಣೊ ವಾಟಿಸ್ಸೆ. ನಾಕೈದು ಜಿಲ್ಲೆಲಿದ್ದು ಒಂದು ಮೂವತ್ತು ನಲವತ್ತು ಶಾಸಕರಿದ್ರೆ ಸಾಕು, ಮುಖ್ಯಮಂತ್ರಿ ಆಗೋನು ಅಥವಾ ಸರ್ಕಾರ ರಚನೆ ಮಾಡೋರು ನನ್ನ ಮನೆ ಬಾಗಿಲಿಗೆ ಬತ್ತರೆ ಅಂತ ದ್ಯಾವೇಗೌಡ್ರು ಹೇಳಿಲ್ಲವೇ?" ಎಂದ ಉಗ್ರಿ.

"ಎಸ್. ಬಾಳ ಹಿಂದೆನೆ ಹೇಳ್ಯವುರೆ. ಅದೇ ತರ ಪಾಲಿಟಿಕ್ಸ್‌ನೂ ಮಾಡ್ತ ಅವುರೆ. ಆದ್ರೆ ಈ ಕಾಂಗ್ರೆಸ್ ಪಾರ್ಟಿಲಿ ಅಂತದೊಂದು ಮಾಸ್ಟರ್ ಮೈಂಡಿಲ್ಲ. ಹಿಂಗೆ ಆದ್ರೆ ಮುಂದೆ ದ್ಯಾವೇಗೌಡ್ರು ಅವುರ ಮಕ್ಕಳೇಳಿದಂಗೆ ಕೇಳಿಕಂಡು ಯಂಗೊ ಕಾಲ ಮಾಡೊ ಸ್ಥಿತಿ ಬರಬವುದು.

"ಅಲ್ಲಾ ಕುರುಬರೋಟ್ನು, ಹರಿಜನರೋಟ್ನು ನಚ್ಚಿಗಂಡು ಕುಂತದಲ್ಲ ಆ ಪಾರ್ಟಿ ಇದಕೇನೇಳನ?"

"ನಿನ್ನ ಕಣ್ಣಿಗೆ ಅಂಗೆ ಕಾಣ್ತದೆ ಕಣೊ ಉಗ್ರಿ. ಆ ಪಾರ್ಟಿಯ ಒಳ್ಳೆ ಸ್ಥಾನಮಾನದಲ್ಲಿ ಒಕ್ಕಲಿಗರು, ಲಿಂಗಾಯಿತ್ರ ಇಲ್ದೆ ಇರಬವುದು. ಆದ್ರೆ ಅವರೇ ಜೀವಾಳ. ಅಂಗೆ ನೋಡಿದ್ರೆ ಸ್ವಾಭಿಮಾನ, ಸ್ವಂತ ಪ್ರತಿಭೆ ಇರೊ ಜನಗಳ್ಯಲ್ಲ ಕಾಂಗ್ರೆಸ್ಸಲವುರೆ. ನಮ್ಮ ಅಂಬರೀಶ್ ಬೇರೆ ಪಾರ್ಟಿಲಿ ಈ ತರ ಇರಕ್ಯಾಯ್ತದಾ? ನಿನ್ನಷ್ಟಕ್ಕೆ ನೀನು ಯಂಗಾದ್ರೂ ಇದ್ದಕಂಡು ಹಾಳಾಗೋಗಕ್ಕೆ ಅವುಕಾಶ ಇರೊ ಒಂದೇ ಪಾರ್ಟಿ ಕಾಂಗ್ರೆಸ್ ಕಣೊ ಉಗ್ರಿ."

"!!" ●

...ಖದ ಮರೀಚಿಕೆಯ ಹಿಂದೆ...

...ಯಾಕೆ ಸುಮ್ಮನೇ ಕೂತಿದ್ದೀಯ. ನಿನ್ನ ಅರ್ಹತೆ, ನಿನಗಿರುವ ಪ್ರತಿಭೆ ಮತ್ತು ವರ್ಚಸ್ಸು ನೋಡಿ ಎಲ್ಲರೂ ...ಮೆ ಪಡ್ತಾರೆ. ನಿನ್ನ ಈಗಿನ ಕೆಮಿಸ್ಟ್ರಿ ಡಿಗ್ರಿ ಜೊತೆಗೆ ವಿದೇಶದಲ್ಲಿ ಸಂಶೋಧನೆ ನಡೆಸಿದ ಡಿಗ್ರಿಗಳು ಸೇರಿಕೊಂಡ್ರೆ ...ಲ್ ಬಹುಮಾನ ಕೂಡ ಬರಬಹುದು. ಒಬ್ಬ ಸಾಮಾನ್ಯ ವ್ಯಕ್ತಿಯ ತರಹ ಕೂತು ವೇಳೆ ಹಾಳು ...ಡ್ತೀಯ. ಫಾರಿನ್ ವಿಶ್ವವಿದ್ಯಾನಿಲಯಕ್ಕೆ ಅರ್ಜಿನಾದ್ರೂ ಹಾಕಬಾರ್ದ?"

...ಸುಮ್ಮನೇ ಕೂತಿದ್ದೇನೇ, ಯಾಕೆ ಗೊತ್ತ?"

...ಯಾಕೆ?"

...ಈಗಲೇ ನೆಮ್ಮದಿಯಾಗಿದ್ದೀನಿ–ಇನ್ನಷ್ಟು ಡಿಗ್ರಿ ಬಂದ್ರೆ, ನೊಬೆಲ್ ಬಹುಮಾನ ಬಂದ್ರೆ ಇದಕ್ಕಿಂತ ಹೆಚ್ಚು ...ಯಾಗಿರ್ತೀನೆ ಅಂತ ಅನ್ನಿಸಿಲ್ಲ, ಆದ್ರೂ ನಿನ್ನ ಮಾತು ಕೇಳಿ ಅಷ್ಟೆ ಮಾಡ್ತೀನಿ."


...ಈ ಪ್ರತಿಭಾವಂತ ಅಮೆರಿಕದ ವಿಶ್ವವಿದ್ಯಾನಿಲಯಗಳಿಗೆ ಬರೆದುಕೊಂಡ; ಇವನ ಅರ್ಹತೆ ಕಂಡ ಅಮೆರಿಕಾದ ...ಸರ್‌ಗಳು ಮೆಚ್ಚಿ ಸೀಟ್ ಕೊಟ್ಟರು. ಅಲ್ಲಿಗೆ ಹೋದವನು ತನ್ನ ಹೆಂಡತಿ, ಮಗುವನ್ನು ಕರೆಸಿಕೊಂಡ. ಅಭ್ಯಾಸ .... ಅವನು ಕೆಲಸ ಮಾಡುತ್ತಿದ್ದ ರೀತಿ ಕೂಡ ಅವನದೇ ಆಗಿತ್ತು. ನಿಧಾನಕ್ಕೆ, ತನಗೆ ತನ್ನ ಕೆಲಸ ಒಪ್ಪಿಗೆಯಾಗುವಂತೆ ...ವನು; ತನ್ನ ಕೆಲಸದಿಂದ ಸಂತೋಷ ಪಡೆಯುವನು. ಹೆಂಡತಿ ಮಗುವಿನೊಂದಿಗೆ ಆಟ ಆಡುವನು. ...ತ್ರ ವಿಹಾರ, ಸಿನಿಮಾ ಮುಂತಾದ್ದರಿಂದ ಖುಷಿ ಪಡೆಯುವನು; ಎಲ್ಲರಿಗೂ ಸುಖ ಹಂಚುವನು. ...ಸಿಗೆ ಒಂದು ದಿನ ಏನಾಯಿತೆಂದರೆ, ಈತ ನದಿಯ ದಂಡೆಯ ಪಿಕ್‌ನಿಕ್ ಜಾಗದಲ್ಲಿ ತನ್ನ ಕುಟುಂಬದೊಂದಿಗಿದ್ದಾಗ ...ತರೊಬ್ಬರು ಕಾಲುಜಾರಿ ನದಿಗೆ ಬಿದ್ದರು. ಇವನು ಹಿಂದೆಮುಂದೆ ನೋಡಲಿಲ್ಲ, ಉಟ್ಟಬಟ್ಟೆಯಲ್ಲೇ ಹಾರಿ ...ಯನ್ನು ಸಾಹಸದಿಂದ ಪಾರುಮಾಡಿದ. ಆದರೆ ಇವನೇ ನದಿಯ ಸುಳಿಗೆ ಸಿಕ್ಕು ಮುಳುಗಿ ತೀರಿಕೊಂಡ.

...ಂಥ ಹತ್ತಾರು ಕತೆಗಳನ್ನು ನೀವೂ ಕೇಳಿರಬಹುದು. ಮೊನ್ನೆ ಓದಿದ ಯಾವುದೋ ಲೇಖನದಿಂದ ಇದನ್ನು ...ದ್ದೇನೆ. ಇಲ್ಲಿ ನನಗೆ ಮುಖ್ಯವೆನ್ನಿಸಿದ್ದು ಆ ಪ್ರತಿಭಾವಂತ ತನ್ನಷ್ಟಕ್ಕೇ ತಾನು ಕೆಲಸ ಮಾಡುತ್ತಿದ್ದು ಸುಖವಾಗಿದ್ದಾಗ ... ನೆಮ್ಮದಿ ಅರ್ಥ ಮಾಡಿಕೊಳ್ಳದೆ ಅವನನ್ನು ವಿದೇಶಕ್ಕೆ ಕಳಿಸಿದವರಿಗೆ ಮನುಷ್ಯನ ಬಗ್ಗೆ ಒಂದು ಮುಖ್ಯ ... ಗೊತ್ತಿಲ್ಲ; ಈ ಅನಿರೀಕ್ಷಿತಗಳ ಗಣಿಯಾದ ಮನುಷ್ಯನಲ್ಲಿ ನಾವೆಲ್ಲ ನೋಡಿರುವಂತೆ, ಒಬ್ಬ ಒಂದು ಜಿಲ್ಲೆಯ ...ಕನಾಗಿ ಅಪಾರ ಹಣ ನುಂಗಿ ಆಸ್ತಿ ಮಾಡಿದರೂ ಅವನು ಸುಖವನ್ನೇ ಕಾಣದಿರಬಹುದು; ಇನ್ನೊಬ್ಬ ...ಡತನದಲ್ಲಿದ್ದು ತನ್ನ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಂಡು ಅಖಂಡ ಸುಖ ಅನುಭವಿಸುತ್ತಿರಬಹುದು. ಇದು ... ವಿಪರ್ಯಾಸ ಅಂದುಕೊಳ್ಳಬೇಡಿ. ಅದಕ್ಕಿಂತ ಹೆಚ್ಚಿನದು ಇಲ್ಲಿದೆ. ಬೆಂಗಳೂರ ಶ್ರೀಮಂತರ ಬಂಗಲೆಗೆ ಕೆಲಸದವಳಾಗಿ ...ಪುಟ್ಟ ಹಳ್ಳಿಯ ಹುಡುಗಿ ಮನೆಯ ವೈಭವ ನೋಡಿ ಕಿಟಾರನೆ ಕಿರುಚಿಕೊಂಡಳು; ಅವಳಿಗೆ ತನ್ನ ಗುಡಿಸಲು, ..., ಅಮ್ಮ, ಬೆಂಕಿ, ಕೇರಿಯ ಓರಗೆಯವರು ಮುಖ್ಯ. ಹಾಗೆಯೇ ಬಡತನ, ಸಿರಿತನ ಕೂಡ. ಲೇಖಕನಾದವನು ತನ್ನ ಪಾತ್ರಗಳ ವಿಚಿತ್ರ ಸುಖ ಮತ್ತು ಕಾತರ ಕೂಡಿದ ಸ್ಥಿತಿ–ಇದನ್ನು ಬೇಕಾದರೆ complex ಅನ್ನಿ– ಹಿಡಿದಿಡಲಾಗದವ ಒಳ್ಳೆಯ ಸಾಹಿತಿ ಆಗಲಾರ. ಜೇನ್ ಆಸ್ಟಿನ್, ಟಾಲ್‌ಸ್ಟಾಯ್ ತರಹದವರಿಗೆ ಇದು ಗೊತ್ತಿತ್ತು, ಇವನ್ನು ಅರಿತೇ ಪಾತ್ರಗಳಲ್ಲಿ ಅದಕ್ಕಾಗಿ ಹುಡುಕಿ ಬರೆಯುತ್ತಿದ್ದರು, 'ನಮಗೆಷ್ಟು ಭೂಮಿ ಬೇಕು?' ಎಂಬ ಕತೆಯ ಪಾತ್ರಗಳು ಎಲ್ಲ ಊರುಗಳಲ್ಲಿ ಕಂಡುಬರುವ types ತರಹ ಶುರುವಾಗುತ್ತದೆ. ಆ ಪಾತ್ರಗಳ ವೈಶಿಷ್ಟ್ಯ ಬೆಳೆಯುತ್ತಾ ಹೋಗುತ್ತದೆ. ಅವರಲ್ಲಿರುವ ನೆಮ್ಮದಿ ಕೂಡ. ಆತನು ತನಗೆ ಇನ್ನಷ್ಟು ಭೂಮಿ ಬೇಕು, ಮತ್ತಷ್ಟು ಬೇಕು ಎಂದು ಹಂಬಲಿಸತೊಡಗಿದಾಗ ಆ ನೆಮ್ಮದಿ ಕರಗುತ್ತದೆ. ನಿಜಜೀವನದಲ್ಲಿ ಮನುಷ್ಯ ಈ ನೆಮ್ಮದಿಗಾಗಿ ಅರಸುತ್ತಲೇ ಇದ್ದಾನೆ. ನಮ್ಮ ಪುರಂದರದಾಸರ ಸುಖ ಒಂದು ತರಹದ್ದಾದರೆ ಸಿದ್ಧಾರ್ಥನ ಸುಖ ಬೇರೆ ರೀತಿಯದು. ಅವರ ವ್ಯಕ್ತಿತ್ವ ನೋಡಿ ಜಡ ರೀತಿಯಲ್ಲಿ ಅದನ್ನು ಅಭಾವ ವೈರಾಗ್ಯವನ್ನಾಗಿ ಮಾಡಿ ವಿವರಿಸುವವರು ಮಹಾ ದಡ್ಡರು.

ಗುಡಿಸಲು, ಮನೆ, ಅರಮನೆ, ರಥ, ಕುದುರೆ ಕಾರು, ವಿಮಾನ.... ಮನುಷ್ಯನ ಸುಖಜೀವನದ ಕಲ್ಪನೆಯೊಂದಿಗೆ ವಸ್ತುಗಳು ಕೂಡ ಬೆಳೆಯುತ್ತಲೇ ಹೋಗುತ್ತವೆ. ಒಬ್ಬ ಮೊಗಲ್ ದೊರೆ ಊಟಕ್ಕೆ ಬಂದರೆ ಅವನನ್ನು ಸ್ವಾಗತಿಸುವವಳು, ಕೈ ತೊಳೆಯಲು ಪಾತ್ರೆ ತರುವವಳು, ಬಿಸಿನೀರು ತರುವವಳು, ಟವಲು ತರುವವಳು, ಊಟ ಬಡಿಸುವವಳು, ಇಷ್ಟೆಲ್ಲ ಇದ್ದೂ ತಿನ್ನಿಸುವವರಿಗಾಗಿ, ಅದೂ ಸಾಲದೆ ಅಗೆದು ಕೊಡುವವರಿಗಾಗಿ ಇಷ್ಟಪಡುತ್ತಾ ಒಂದು ಕೊಂಡಿ ಕಳಚಿದರೆ ಎಲ್ಲ ಸೇವಕರು ಹೊರೆಯಾಗುವ ಪರಿ ಕಾಣುತ್ತೇವೆ. ನನ್ನ ಡೋಬರ್‌ಮನ್ ಸ್ಟೆಫಿಗೆ ಜಡ್ಡಾದರೆ ಏನನ್ನೂ ತಿನ್ನದೆ ಇದ್ದು ಆಮೇಲೆ ಗರುಕೆ ತಿಂದು ಸರಿಮಾಡಿಕೊಳ್ಳುತ್ತದೆ; ನಾವು ಪ್ರೀತಿಯಿಂದ ಜಿಲೇಬಿ, ಜಾಮೂನ್ ಕೊಟ್ಟರೆ ಅದು ತಿನ್ನುವುದಿಲ್ಲ, ಸ್ಟೆಫಿಯ ಮೂಗು ವಾಸನೆಯಿಂದಲೇ ಆಹಾರವನ್ನು ಆರಿಸುತ್ತದೆ, ಆದರೆ ನಾಲಗೆ ಅಷ್ಟೇ ಚುರುಕು. ಮನುಷ್ಯ ಹಾಗಲ್ಲ. ಆಹಾರಕ್ಕೆ ಒಂದಿಷ್ಟೂ ಸಂಬಂಧಿಸದಿರುವ ಸೇವಕರು ಬೇಕು. ಇದು ಅಹಂಕಾರ. ಹಾಗೆಯೇ ಕಾಯಿಲೆಯೂ ಅಹಂಕಾರದ ಅಭಿವ್ಯಕ್ತಿ. ಮುಮ್ಮಡಿ ಜಾರ್ಜ್ ಎಂಬ ದೊರೆಗೆ ಕಾಯಿಲೆಯಾಗುತ್ತದೆ; ಆತ ಸಾಯದಿರುವಂತೆ ಔಷಧಿ ಕೊಟ್ಟು ಕಾಪಾಡಲು ಕೆಲವರಿಗೆ ಕಾರಣಗಳಿರುತ್ತವೆ; ಅವನನ್ನು ಬೇಗ ಸಾಯಿಸಲು ಮಿಕ್ಕವರಿಗೆ ಕಾರಣಗಳಿರುತ್ತವೆ. ಅವನ ಆರೋಗ್ಯ ಅವನ ದೇಹದ ಮಿತಿಯನ್ನು ಬಿಟ್ಟು ರಾಜಕೀಯ, ಸಾಮಾಜಿಕ ವಿಷಯವಾಗುತ್ತದೆ. ಆಗಲೇ ದುರಂತ ಶುರುವಾಗುತ್ತದೆ. ಮನುಷ್ಯ ಎಷ್ಟೇ ದೊಡ್ಡವನಿರಲಿ, ಸಣ್ಣವನಿರಲಿ, ಅವನ ದೇಹದ ಮಿತಿಯಲ್ಲಿ ಸುಖ, ದುಃಖ ಕಾಯಿಲೆ ಪಡೆಯುತ್ತಾನೆ–ಹಾಗೆಯೇ ನೆಮ್ಮದಿ, ಕ್ರಿಯಾಶೀಲತೆ, ಪ್ರೀತಿಯನ್ನು ಕೂಡ. ಆ ದೇಹದ ಮೇಲೆ ಸಲ್ಲದ ಜವಾಬ್ದಾರಿ ಹೇರಿದರೆ ಮುಮ್ಮಡಿ ಜಾರ್ಜ್‌ಗೆ ಆದದ್ದು ಆಗುತ್ತದೆ; ಹುಚ್ಚು ಹಿಡಿಯುತ್ತದೆ. ಆತನ ಹುಚ್ಚು ಮಾತ್ರ ಅವನನ್ನು ಕಾಪಾಡಬಲ್ಲದು; ಕೆಲವರನ್ನು ಅವರ ಸರಳ ನೆಮ್ಮದಿ ಕಾಪಾಡುವಂತೆ...

ಇದನ್ನಾಗಲೇ ಒಂದು ಸಲ ಬರೆದಿದ್ದೇನೆ. ಸುತ್ತ ಎಲ್ಲರೂ ಓಡುತ್ತಿದ್ದರೆ ಸ್ಟೇಷನಿಯ ಮೇಲೆ ಕೂತು ಮುಗುಳ್ನಗುವವನೇ ಎಲ್ಲರಿಗೆ ಸವಾಲಾಗಬಲ್ಲ...

ಆಗಸ್ಟ್ 17, 1994



ಯಡ್ಯೂರಪ್ನೋರು ಉತ್ತರ ಕುಮಾರ ಇದ್ದಂಗೆ

ಕೆಳೆದ ವರ್ಷವನ್ನು ಹಗರಣಗಳ ವರ್ಷ ಅಂತಾರೆ. ಹೀಗೆ ಮುಗುಮ್ಮಾಗಿ ಹೇಳುವುದಕ್ಕೆ ಬದಲಾಗಿ ನಿರ್ದಿಷ್ಟ ಇಸವಿಯನ್ನೇ ಹೇಳಬಹುದಾಗಿತ್ತಲ್ಲಾ ಎಂದರೆ ಅದು ಸಲ್ಲದು ಎನ್ನುತ್ತಾರೆ ತಿಳಿದವರು. ಯಾಕೆಂದರೆ ನಮ್ಮ ಈ ಪವಿತ್ರ ನಾಡಲ್ಲಿ ಯಾವ ವರ್ಷವೇ ಆದರೂ ಅದು ಹಗರಣಗಳ ವರ್ಷವೇ ಆಗಿರುತ್ತದೆ ಎನ್ನುವುದು ಅವರ ವಾದ. ಇದು ಹೇಗಾದರೂ ಇರಲಿ. ವಯೋವೃದ್ಧರೂ, ಜ್ಞಾನವೃದ್ಧರೂ, ರಾಜಕೀಯ ನಿಪುಣರೂ ಆದ ಕಲೈನಾರ್ ಕರುಣಾನಿಧಿಯವರು 'ಹಗರಣಗಳ ವರ್ಷ' ಎನ್ನುವುದನ್ನು ಒಪ್ಪಲು ತಯಾರಿಲ್ಲ. 2ಜಿ ತರಂಗಾಂತರ ಹಂಚಿಕೆ ಕಾನೂನುಬದ್ಧವಾಗಿಯೇ ನಡೆದಿದೆ ಎನ್ನುವುದು ಅವರ ಅಂತರಾಳದ ಮಾತು. ಆದರೂ ವಿಪಕ್ಷಗಳು ಆರೋಪ ಮಾಡುತ್ತಿರುವುದಕ್ಕೆ ಕಾರಣವನ್ನು ಅವರು ಸಂಶೋಧಿಸಿದ್ದಾರೆ. ಅದೇನು ಎಂದರೆ ಅಂದಿಮುತ್ತು ರಾಜಾ 'ದಲಿತ' ಎನ್ನುವುದೇ ಆಗಿದೆ!

ಇಲ್ಲಿಯೇ ಇನ್ನೊಂದು ವಿಷಯವನ್ನು ಪ್ರಸ್ತಾಪಿಸಬಹುದಾಗಿದೆ. ಕೇಂದ್ರದಿಂದ ರಾಜ್ಯಕ್ಕೆ ಬಂದರೆ ಯಡ್ಯೂರಪ್ಪನವರ ವಿರುದ್ಧ ದೇವೇಗೌಡರು ಮತ್ತು ಅವರ ಮಕ್ಕಳು ಭೂಹಗರಣ ಆರೋಪ ಮಾಡಿದ್ದೂ..... ಆಧ್ಯಾತ್ಮದಾಹಿಗಳಾದ ಕಾವಿಧಾರಿಗಳ ಸಂಶೋಧನೆಯಂತೆ ಅವರು ಲಿಂಗಾಯತರು ಎಂಬ ಕಾರಣಕ್ಕಾಗಿ! ಎಂದೇ ಆಧ್ಯಾತ್ಮದಾಹಿಗಳು ಬೀದಾತ್ಮದಾಹಿಗಳಾಗಿ ಅವತರಿಸಿದ್ದು!


ಒಂದು ಮಾತಂತೂ ಸ್ಪಷ್ಟ. ತರಂಗಾಂತರ ಹಂಚಿಕೆ ಹಗರಣಕ್ಕೂ, ಭೂಹಗರಣಕ್ಕೂ ಜಾತಿಯೆಂಬ ಜಾತಿಯೇ ಮೂಲಭೂತ ಕಾರಣ ಎಂಬುದಾಗಿದೆ. ಮಾನ್ಯ ಕರುಣಾನಿಧಿಯವರ ವಿಶ್ಲೇಷಣೆ ಇನ್ನೂ ಮುಂದುವರೆದಿದೆ. ಒಂದು ಲಕ್ಷದ ಎಪ್ಪತ್ತು ಸಾವಿರದ ಏಳು ನೂರ ಮೂವತ್ತು ಕೋಟಿ ಹಣವನ್ನೆಲ್ಲ ರಾಜಾ ಒಬ್ಬರೇ ಮನೆಗೆ ತೆಗೆದುಕೊಂಡು ಹೋಗಲು ಸಾಧ್ಯವೇ? ಒಂದು ವೇಳೆ ಹಾಗೆ ತೆಗೆದುಕೊಂಡು ಹೋಗಿದ್ದರೂ ಅದನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎನ್ನುವುದು ಅವರ ಪ್ರಶ್ನೆ. ಎಷ್ಟು ಹಣ ಇಡಲು ಎಷ್ಟು ಸ್ಥಳ ಬೇಕು ಅನ್ನುವ ಅನುಭವ ಇರುವವರ ಮಾತನ್ನು ಸುಖಾಸುಮ್ಮನೆ ತೆಗೆದುಹಾಕುವಂತಿಲ್ಲ!

ಕರುಣಾನಿಧಿಯವರ ಅನುಭವೀ ಮಾತನ್ನು ನಂಬಲು ಭಾರತೀಯ ಜನತಾಪಕ್ಷ ಸಿದ್ಧವಿಲ್ಲ ಎನ್ನುತ್ತಿದೆ. ದೇಶಾದ್ಯಂತ ಭ್ರಷ್ಟಾಚಾರ ವಿರೋಧಿ ಆಂದೋಲನ ಪ್ರಾರಂಭಿಸಿದೆ. ತಲೆಯೇ ಹೀಗೆ ಯೋಚಿಸಿರುವಾಗ ಬಾಲಂಗೋಚಿಗಳನ್ನು ಕೇಳಬೇಕಾದದ್ದೇನೂ ಇಲ್ಲ. ಎಬಿವಿಪಿ ಬೆಂಗಳೂರಿನ ರಾಷ್ಟ್ರೀಯ ಸಮ್ಮೇಳನದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪ್ರತಿಜ್ಞೆ ಸ್ವೀಕರಿಸಿದೆ. ಈ ಪ್ರತಿಜ್ಞೆ ಕೇಂದ್ರಕ್ಕೆ ಸೀಮಿತ ಅಂತೆ. ರಾಜ್ಯಮಟ್ಟಕ್ಕೆ ಇಳಿಯುವುದಿಲ್ಲವಂತೆ. ಯಾಕೆಂದರೆ ಇದು ರಾಷ್ಟ್ರಮಟ್ಟದ ಸಮ್ಮೇಳನ ಅಂತೆ! ಭ್ರಷ್ಟಾಚಾರ ವಿರೋಧಿ ಭೀಷ್ಮಪ್ರತಿಜ್ಞೆಯನ್ನು ರಾಜ್ಯಮಟ್ಟದಲ್ಲಿ ಕೈಗೊಳ್ಳುವುದಿಲ್ಲವೆ ಎಂದರೆ ರಾಜ್ಯ ಸಮ್ಮೇಳನದಲ್ಲಿ ಆ ಪ್ರತಿಜ್ಞೆ ಸ್ವೀಕರಿಸುವದಂತೆ!

ಅಂದರೆ ಒಂದು ವಿಷಯ ಸ್ಪಷ್ಟ ಆಯಿತು. ಕೇಂದ್ರದಲ್ಲಿ ಭಾಜಪ ವಿಪಕ್ಷ, ರಾಜ್ಯದಲ್ಲಿ ಆಡಳಿತ ಪಕ್ಷ. ಭಾಜಪ ಭ್ರಷ್ಟಾಚಾರ ಆಂದೋಲನ ಅಂದರೆ ಎಲ್ಲಿ ಅದು ಅಧಿಕಾರದಲ್ಲಿ ಇಲ್ಲವೋ ಅಲ್ಲಿ ಅಂತ!

****

ಯಡ್ಯೂರಪ್ನೋರು ಒಂದು ತರಹ ಮಹಾಭಾರತ ಉತ್ತರ ಕುಮಾರ ಇದ್ದಂಗೆ. ಅವನ ಪೌರುಷ ಬಡಾಯಿ ಎಲ್ಲ ಹೆಂಗಳೆಯರ ಮುಂದೆ ಇತ್ತಲ್ಲಾ ಹಂಗೇನೆ ಇವರೂನೋವೆ' ಅಂತಾರೆ ಅವರ ಕಂಡ್ರೆ ಆಗದೆ ಇರೋರು. 'ಹೇ ಅಂಗನ್ನಬ್ಯಾಡ್ರಿ. ಅವರ್ನೇನಂತ ತಿಳ್ಕಂಡಿದೀರಿ... ಸಿಂಹ ಕಣ್ರಿ.... ಸಿಂಹ. ಒಂದು ಸಲ ಘರ್ಜಿಸಿದರೆ ಸಾಕು. ನಾಡೆಲ್ಲ ನಡುಗೋಯ್ತದೆ' ಅಂದ್ರೆ 'ಅದು ಸಿಂಹ ಅಲ್ಲ ಕಣ್ರಿ ಸಿಂಹದ



ವೇಷದ ನರಿ. ನಾನು ಸಿಂಹ ಅನ್ನೊಂಡು ಘರ್ಜಿಸಿದ್ರೆ ಹೊರಬರ್ರೋದು ನರಿ ಊಳು ಕಣ್ರಿ' ಅಂತಾರೆ. 'ಅದೇನ್ ಒಸಿ ಬಿಡ್ಸಿ ಹೇಳಪ್ಪ' ಅಂದ್ರೆ.....

'ದೇವೇಗೌಡ ಅವರ ಮಕ್ಕಳು ನನ್ನ ಮೇಲೆ ಸುಳ್ಳುಸುಳ್ಳೆ ಭೂಹಗರಣದ ಆರೋಪ ಮಾಡ್ತಿದ್ದಾರೆ. ನಾನು ಬಹಿರಂಗ ಚರ್ಚೆಗೆ ಸಿದ್ಧ ಇದ್ದೀನಿ. ತಾಕತ್ತಿದ್ದರೆ ಬರ್ರಿ.'

ಗುಡುಗಿದರು ಯಡ್ಯೂರಪ್ಪನೋರು. ಎಲ್ಲಿ ಅಂತೀರಿ. ಭಾಗ್ಯಲಕ್ಷ್ಮಿಯರ ಮುಂದೆ!

'ಧರ್ಮರಾಯನಂತೋನೆ ಇರಬೇಕು ಇವ್ನು. ನಮ್ಗೆಲ್ಲ ಸೀರೆ ಉಡ್ಸವ್ನೆ. ದುಡ್ಡ ಬಾಯಿಗೆಸ್ಕೊಂಡಿದ್ರೆ ಹಿಂಗೆ ಸಭೇಲಿ ಸವಾಲ್ ಸೀತಿದ್ನ. ಇವರ ಅಭಿವೃದ್ಧಿ ನೋಡೋಕಾಗ್ದೆ ಹಿಂಗೆ ಮಾಡ್ತಿರಬೇಕು; ಹೊಟ್ಟೆಕಿಚ್ಚಿನ ಮೊಟ್ಟೆ ಕೋಳಿಗಳು. ಹಿಂಗೆ ಆಡ್ಕೊಳದ್ರ ಬದ್ಲು ಎದ್ರುಬದ್ರು ಕುಂತು ಮಾತಾಡ್ಲೇಳು' ಅಂತೆಲ್ಲ ಅಂದುಕೊಂಡಿರಬೇಕು ಭಾಗ್ಯಲಕ್ಷ್ಮೀರು.

ಯಡ್ಯೂರಪ್ನೋರ ಗುಡುಗ ಕೇಳಿ ಆ ಕುಮಾರಸ್ವಾಮಿ ಅನ್ನೋನು ಚೆಡ್ಡಿ ಒಳಗೆ ಎಲ್ಲ ಮಾಡಿಕೊಳ್ಳದೆ 'ಶಿಕಾರಿಪುರಕ್ಕೆ ಬರ್ತೀನಿ. ಬಹಿರಂಗ ಚರ್ಚೆ ಅಲ್ಲೇ ನಡೀಲಿ. ದಿನ ಸಮಯ ನಿಗದಿ ಮಾಡಿ' ಅಂದುಬಿಡೋದೆ! ಗುಹೆಗೇ ಹೋಗಿ ಸಿಂಹ ಸದೆಬಡೀತೀನಿ ಅನ್ನಬೇಕಾದ್ರೆ ಏನು ದಾಸತ್ತು ಅವನ್ದು ಅಂತೀನಿ!

ಅರೆರೆ ಇದೇನಯ್ಯ ಇದು ಅವರು ಹಗರಣವೇ ನಡೆದಿಲ್ಲ ಅಂತಾರೆ, ಇವರು ನೋಡಿದ್ರೆ ಹಿಂಗಂತ ಅವ್ರೆ. ಸವಾಲ್-ಜವಾಬ್ ನಡ್ದೇ ಬಿಡ್ಲಿ. ಬಲೇ ಮಜವಾಗಿರ್ತದೆ, ಎಂದೆಲ್ಲ ಯೋಚಿಸಿದ ಮಹಾಜನತೆ ಆ ರೋಚಕ ಕ್ಷಣಕ್ಕಾಗಿ ತುದಿಗಾಲಲ್ಲಿ ನಿಂತು ಕಾಯುತ್ತಿತ್ತು, ಆದರೆ.... 'ಬಹಿರಂಗ ಚರ್ಚೆಗೆ ಬನ್ನಿ' ಎಂದು ಹೆಂಗಳೆಯರ ನಡುವೆ ಘರ್ಜಿಸಿದ್ದ ಸಿಂಹ ಅದ ಮರೆತೇಬಿಟ್ಟಿತು!


ಪಾಪ ಅವರು ಹೇಳಿಕೇಳಿ ಮುಖ್ಯಮಂತ್ರಿ ಆಗಿರೋರು. ಅಂದ್ಮೇಲೆ ನೂರೆಂಟು ತಲೆ ತಾಪತ್ರಯ ಇರ್ತವೆ. ಅದರ ನಡುವೆ ಇಂತೋವೆಲ್ಲ ಮರ್ತೋಗೋದು ನ್ಯಾಯವೇಯ. ಆದರೆ ಮಾಧ್ಯಮದವರಿಗೂ ಮನರಂಜನಾ ವಾಕ್‌ಸಮರ ಕೇಳಲು ಕುತೂಹಲ ಇತ್ತಲ್ಲಾ. ಯಡ್ಯೂರಪ್ನೋರ್ಗೆ ನೆನಪಿಸಿದರು. 'ಬಹಿರಂಗ ಚರ್ಚೆಗೆ ಸಿದ್ಧ' ಅಂದವ್ರಲ್ಲಾ ಕುಮಾರಸ್ವಾಮಿಯೋರು ಅಂತ ಕೇಳಿದ್ದೇ ಅವರೇನು ಹೇಳಿದ್ರು.... 'ವಿಧಾನಸಭೆ ಕರ್ದಿದೀನಿ. ಅಲ್ಲಿ ವ್ಯಾಪಕ ಚರ್ಚೆ ಆಗಲಿ' ಅಂದ್ರು!

ಸಂಸತ್ತು, ವಿಧಾನಮಂಡಲದಲ್ಲಿ ಯಾವತ್ತೂ ಚರ್ಚೆ ಆಗಲ್ಲ, ಅವಿರೋದು ಗಲಭೆ ಮಾಡಕ್ಕೆ. ವಿಧಾನಸಭೆಗೆ ಸದಸ್ಯರು ಹೋಗ್ತಾರೆ... ಗಲಾಟೆ ಮಾಡಿ ಹೊರಕ್ಕೆ ಬರ್ತಾರೆ. ಆಮೇಲೆ ಗೊತ್ತೇ ಇದೆಯಲ್ಲ, ಗೊಂದಲದ ನಡುವೆಯೇ ಬಹುಮತದಿಂದ ಭೂಹಗರಣ ಖಂಡನಾ ನಿರ್ಣಯ ಬಿದ್ದೋಯ್ತು ಅಂತ ಸಭಾಧ್ಯಕ್ಷರು ಸಾರ್ತಾರೆ! ಅಂದ್ರೆ ಕರ್ನಾಟಕ ಭ್ರಷ್ಟಾಚಾರ ರಹಿತ ರಾಜ್ಯ ಅನ್ನುವುದಕ್ಕೆ ಅಧಿಕೃತ ಮುದ್ರೆ ಸಿಕ್ಕಂಗಾಯ್ತು!

****

ಯಡ್ಯೂರಪ್ನೋರ್ಗೆ ಇದ್ದಕ್ಕಿದ್ದಂತೆ ಸಂವಿಧಾನ ನೆನಪಾಗಿದೆ ಯಂತೆ. ಸಂವಿಧಾನಾತ್ಮಕವಾಗಿ ನೇಮಕ ಆಗಿರುವ ಸ್ಥಾನಗಳ ಬಗ್ಗೆ ಅಪಾರ ಗೌರವ ಬಂದಿದೆಯಂತೆ. ಆ ಸ್ಥಾನದಲ್ಲಿರುವವರ ವಿರುದ್ಧ ಯಾವ ಮಾತನ್ನೂ ಅವರು ಆಡುವುದಿಲ್ಲವಂತೆ!

ಇದು ಪವಾಡ ಅಂದ್ರೆ. ಅವರ ಪಕ್ಷದ ಗಡ್ಡದ ಬುದ್ಧಿಜೀವಿಗಳು, ಗಡ್ಡವಿಲ್ಲದೆ ಬುದ್ಧಿಜೀವಿ ಅನ್ನಿಸಿ ಕೊಳ್ಳೋರು. ಒಟ್ನಲ್ಲಿ ಸಾರಾಸಗಟಾಗಿ ಎಲ್ಲರೂ ರಾಜ್ಯ ಪಾಲರನ್ನ ಹಿಗ್ಗಾಮುಗ್ಗಾ ಜಾಡುಸ್ತಾ ಕುಂತವ್ರೆ. 'ರಾಜ್ಯಪಾಲ ಹಟಾವೊ' ಚಳವಳೀನೆ ಮಾಡ್ತೀವಿ ಅಂತ ಬಿದ್ದವೆ. ರಾಷ್ಟ್ರಪತಿಗಳಿಗೂ 'ಇವರ್ನ ಹಿಂದಕ್ಕೆ ಕರೀರಿ' ಅಂತ ಕಾಗದ ಬರ್ದಾರಂತೆ. ಇವರನ್ನ ನೋಡಿದ್ರೆ ಹಿಂಗಂತ ಅವ್ರಲ್ಲಾ.... ನಾನು ಮೈ ತುರುಸ್ತೀನಿ ನೀವು ದೊಣ್ಣೇಲಿ



ಎಚ್.ಎಲ್. ಕೇಶವಮೂರ್ತಿ

ಅಣಕ

ಬಡೀತಿರಿ ಅಂದಂಗದಲ್ಲ ಅಂದ್ರೆ.... ಅದು ಹಂಗಲ್ಲವಂತೆ, ಹಿಂಗಂತೆ.....


ಮುಖ್ಯಮಂತ್ರಿಗಳ್ಗೆ ರಾಜ್ಯಪಾಲರು 'ನಿಂ ಕಾಲ್ದಲಿ ಭೂಹಗರಣ ಆಗದೆ ಅನ್ನೋದನ್ನ ಮಾಧ್ಯಮಗಳಲ್ಲಿ ನೋಡಿದೀನಿ. ನೀವೇನೇಳ್ತೀರಿ' ಅಂತ ಕೇಳಿದ್ರಂತೆ. ಅದ್ಕೆ ಮುಖ್ಯಮಂತ್ರಿಗೋಳು 'ಯಾವುದೇ ಹಗರಣ ನಡೆದಿಲ್ಲ' ಅಂತ ಉತ್ತರ ಕಳ್ಸದ್ರಂತೆ. ಅವರತ್ರ ದಾಖಲೆ, ಪುರಾವೆ ಎಲ್ಲ ಇದ್ದವಂತೆ. ಅದೂ ಸಾಲದ್ಕೆ ರೆಡ್ಡಿ ಬ್ರದರ್ಸ್ ಇದಾರಲ್ಲ ಅವರು ಆದಾಯ ತೆರಿಗೆ ವಂಚನೆ ಮಾಡೋದು ಹೊಸದೇನೂ ಅಲ್ಲ, ಅದು ಈಗ ತಗ ಲಾಕ್ಕಂಡದಂತೆ. 'ಅಂತೋರ್ನ ಇನ್ನೂ ಮಂತ್ರಿಮಂಡಲದಲ್ಲಿ ಇಟ್ಕೊಂಡಿದೀರಲ್ಲ, ಕಿತ್ತೊಗ್ಗಿರಿ ಅತ್ಲಾಗೆ' ಅಂದ್ರಂತೆ. ಯಡ್ಯೂರಪ್ಪನವರಿಗೂ ಅದೇ ಬೇಕಾಗಿತ್ತು, ಅದ್ರೇನು ಮಾಡ್ತೀರಿ. ಇದು ಬಹಳ ನಾಜೂಕಿನ ವಿಷಯ. ಅವರನ್ನ ತೆಗೆದ್ರೆ ಮೂರು ಕಾಲಿನ ಕುರ್ಚಿ ಮೇಲೆ ಕುಂತು ಹೆಂಗೋ ಕಾಲ ತಳ್ತಿರೋ ಯಡ್ಯೂರಪ್ನೋರು ದಸ್ ಅಂತ ಬೀಳಬೇಕಾಯ್ತದೆ. ಅವರ್ನ ಇಟ್ಕಂಡ್ರೆ ಇದೇ ನೆಪ ಹಿಡ್ಕಂಡು ರಾಷ್ಟ್ರಪತಿ ಆಡಳಿತ ಹೇರ್ತಾರು ಅನ್ನೋ ಹೆದರಿಕೇಲಿ ಈ ಹೇಳಿಕೆ ನೀಡಿದಾರಂತೆ. ಪಕ್ಷದ ಮುಂದಾಳುಗಳ ಮುಂದೂ 'ಅಯ್ಯೋ ರಾಜ್ಯಪಾಲನ ಸಾವಾಸಕ್ಕೆ ಮಾತ್ರ ಹೋಗಬೇಡಿ. ನಿಮ್ ಕಾಲ ಮುರೀತೀನಿ' ಅಂತ ಹಲ್ಲುಹಲ್ಲು ಗಿಂಜವ್ರಂತೆ. ಮುಂದಾಳುಗಳಿಗೂ ಅಧಿಕಾರ ಕಿತ್ಕೊಂಡೋದ್ರೆ ಮುಂದಾ ಗಿದ್ದೋನು ಕಾಲಾಳಾಗಬೇಕಾಯ್ತದೆ ಅನ್ನೊ ದಿಗಿಲಿರಲ್ವಾ... ಅದ್ಕೇ 'ರಾಜ್ಯಪಾಲ ಹಟಾವೊ'ಕ್ಕೆ ತಾತ್ಕಾಲಿಕ ತಡೆ ನೀಡಿದ್ದಾರಂತೆ!

ಅಂದ್ರೆ ಯಡ್ಯೂರಪ್ನೋರೊಬ್ರೆ ಅಲ್ಲ, ಭಾರತೀಯ ಜನತಾ ಪಕ್ಷದ ಧೀಮಂತ ನಾಯಕರೂ ಉತ್ತರ ಕುಮಾರರೇ ಇರಬಹುದೇನೋ.....

ಕಳ್ಳಿ ರಾಡಿಯಾಳ ಧನ ಕಳ್ಳ ಕೃಷ್ಣನ ದೇವಸ್ಥಾನಕ್ಕೆ!

ಕೆಳೆದ ಸಂಚಿಕೆಯಲ್ಲಿ ಪ್ರಕಟಗೊಂಡ 'ನೀರಾ ರಾಡಿಯಲ್ಲಿ ಪೇಜಾವರ' ವರದಿ ಚೆನ್ನಾಗಿತ್ತು,

ಇದೇ ಪೇಜಾವರರು ತಮ್ಮ 80ನೇ ಹುಟ್ಟುಹಬ್ಬದ ಸಂದರ್ಭದಲ್ಲಿ 'ಯುವಕರು ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕು' ಎಂದು ಕರೆ ನೀಡಿದ್ದರು. ಆದರೆ ಇಲ್ಲಿ ತಾವೇ ಭ್ರಷ್ಟಾಚಾರದ ಹಣವನ್ನು ನೀರಾ ರಾಡಿಯಾ ಎಂಬ ತಮ್ಮ ಹಿಂಬಾಲಕಿಯಿಂದ ಪಡೆದು ಕೃಷ್ಣ ಮಠವನ್ನು ನಿರ್ಮಿಸಿದ್ದಾರೆ. ನೀರಾಳ ಕಳ್ಳ ಹಣವನ್ನು ಕಳ್ಳ ಕೃಷ್ಣನ ದೇವಸ್ಥಾನಕ್ಕೆ ಪಡೆದರೆ ತಪ್ಪೇನಿಲ್ಲ ಎಂಬ ತರ್ಕ ಇದ್ದರ ಹಿಂದಿರಬಹುದೇ?



2-ಜಿ ತರಂಗ ಹಗರಣದಲ್ಲಿ ಪೇಜಾವರರ ಪಾತ್ರ ಇಲ್ಲದಿರಬಹುದು. ಆದರೆ ಅದರಲ್ಲಿ ನೀರಾಳ ಪಾತ್ರ ಇರುವುದು ಈಗಾಗಲೇ ಬಹಿರಂಗಗೊಂಡಿರುವ ಟೇಪ್ಸ್ ಮತ್ತು ಮಾಹಿತಿಗಳಿಂದ ಸಾಬೀತಾಗಿದೆ. ಇಂತಹ ನೀರಾಳನ್ನು ತಮ್ಮ ಆಪ್ತ ಶಿಷ್ಯೆಯನ್ನಾಗಿಸಿಕೊಂಡಿದ್ದಾರೆ ಪೇಜಾವರರು ಎಂದರೆ ಅವರ ಪರಮ ಭಕ್ತರಿಗೂ ಖಂಡಿತವಾಗಿಯೂ ಮುಜುಗರವಾಗುತ್ತದೆ.


ಒಂದಂತೂ ಸತ್ಯ, ನಾವು ಏನನ್ನು ಮಾಡುತ್ತೇವೆ ಎಂಬುದಷ್ಟೇ ಮುಖ್ಯ ನಾವು ಎಂತಹವರೊಂದಿಗೆ ಗುರುತಿಸಿಕೊಳ್ಳುತ್ತೇವೆ ಎಂಬುದು. ಪೇಜಾವರರಿಗೆ ಅದು ಗೊತ್ತಿಲ್ಲ ಎಂದೇನಲ್ಲ,

ಅಂದಹಾಗೆ, ಪೇಜಾವರರ ಶಿಷ್ಯೆಯರು ಎಂತಹವರು ನೋಡಿ. ಇದೇ ಪೇಜಾವರರು ಉಮಾಭಾರತಿ ಎಂಬಾಕೆಗೆ ಸನ್ಯಾಸ ದೀಕ್ಷೆಯನ್ನು ನೀಡಿದ್ದಾರೆ. ಆದರೆ ಆಕೆ ಯಾವ ರೀತಿಯಲ್ಲೂ ಸನ್ಯಾಸಿ ಅಲ್ಲವೇ ಅಲ್ಲ, ಏಕೆಂದರೆ ಆಕೆ ತನ್ನ ಮಿತ್ರ ಗೋವಿಂದಾಚಾರ್ಯನನ್ನು 'ಚಾಕೋಲೇಟ್' ಎಂದು ಬಣ್ಣಿಸುತ್ತಾಳೆ, ಹುಬ್ಬಳ್ಳಿಯಲ್ಲಿ ಕೋಮುಗಲಭೆಗಳಿಗೆ ಪ್ರಚೋದನೆ ನೀಡಿ ಹಲವು ಜನರ ಸಾವಿಗೆ ಕಾರಣೀಭೂತಳಾಗುತ್ತಾಳೆ, ಅಧಿಕಾರ ದಾಹಕ್ಕಾಗಿ ಪಕ್ಷಗಳನ್ನೇ ತೊರೆಯುತ್ತಾಳೆ. ಇಂತಹ ಉಮಾಭಾರತಿ ನಮ್ಮ ಪೇಜಾವರರ ಪರಮಾಪ್ತೆ!

ಇನ್ನು ಈ ದೇಶದ ಇತಿಹಾಸದಲ್ಲೇ ಅತಿ ದೊಡ್ಡದಾದ ಹಗರಣದ ರೂವಾರಿ ನೀರಾ ರಾಡಿಯಾ ಕೂಡ ಪೇಜಾವರರ ಭಕ್ತೆ, ಹಿಂಬಾಲಕಿ. ಜೊತೆಗೆ ಪೇಜಾವರರ ದೇಗುಲಕ್ಕೆ ಹಣ ನೀಡುವ ತಿಜೋರಿ!

ಆಹಾ, ಇದೆಂತಹ ದೈವ ನಿಷ್ಠೆ ಅಯ್ಯಾ?

- ಪ್ರೀತಮ್. ಎಸ್. ಬೆಂಗಳೂರು



ಯಡಿಯೂರಪ್ಪನ ಚೆಡ್ಡಿ ಸರ್ಕಾರ ಬಂಡವಾಳಶಾಹಿಗಳಿಗೆಂದು ರೈತರ ಭೂಮಿಯನ್ನು ಕದ್ದದ್ದಾಯಿತು. ಈಗ ಪಶು ವೈದ್ಯಕೀಯ ಕಾಲೇಜಿಗೇ ಕನ್ನ ಹಾಕಿರುವುದು ಒಂದು ದೊಡ್ಡ ದುರಂತ.

ಆದರೆ ಯಡ್ಡಿ ಸರ್ಕಾರದ ಈ ದುಷ್ಟ ಯೋಜನೆಯನ್ನು ಇಂದು ಆ ಕಾಲೇಜಿನ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಇತರರು ಪ್ರತಿಭಟಿಸುತ್ತಿರುವುದು ಸ್ವಾಗತಾರ್ಹ. ಅವರ ಹೋರಾಟದ ದನಿ ಕರ್ನಾಟಕದ ನ್ಯಾಯಮೂರ್ತಿಗಳ ಕಿವಿ ಬಿದ್ದು ಅವರು ಯಡ್ಡಿಯ ಸರ್ಕಾರಕ್ಕೆ ಕ್ಯಾಕರಿಸಿ ಉಗಿಯುವಂತಾಗಲಿ,,

- ಶಶಿಕಲಾ ಗೌಡ. ಬೆಂಗಳೂರು

ಬಿನಾಯಕ್ ಸೇನ್ ಅವರ ಬಂಧನದ ಬಗ್ಗೆ ಪ್ರಕಟಗೊಂಡ ಎರಡೂ ಅಂಕಣಗಳು ಚೆನ್ನಾಗಿದ್ದವು. ಇವತ್ತು ನಮ್ಮ ಸರ್ಕಾರ, ಪೊಲೀಸರು ಮತ್ತು ನ್ಯಾಯಾಲಯ ಬಿನಾಯಕ್ ತರಹದ ಬಡವರ ಪರ ಹೋರಾಡುವವರಿಗೇ ಇಂತಹ ಶಿಕ್ಷೆ ನೀಡುತ್ತದೆಂದರೆ ನಿಜವಾಗಲೂ ನಮ್ಮ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಗೊತ್ತಾಗುತ್ತದೆ.

ಇವತ್ತು ನಮ್ಮ ಸಮಾಜ ಎಂತಹ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದರೆ, ಇಲ್ಲಿ ಬಡಜನರ ಪರ ದನಿ ಎತ್ತುವವರು ನಕ್ಸಲೈಟರು, ಕೋಮುವಾದದ ವಿರುದ್ಧ ಪ್ರತಿಭಟಿಸುವವರು ಸ್ಯೂಡೊ ಜಾತ್ಯತೀತರು, ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಮಾತನಾಡುವವರು ಭಯೋತ್ಪಾದಕರು, ಕಾಶ್ಮೀರದ ಜನರ ಪರ ದನಿ ಎತ್ತುವವರು ದೇಶದ್ರೋಹಿಗಳು! ಇವತ್ತು ಈ ನಾಡಿನಲ್ಲಿ ಉದ್ಯಮಿಗಳು, ಕೋಮುವಾದಿಗಳು ಮತ್ತು ಭ್ರಷ್ಟರೇ ನಾಡಿನ ಉದ್ಧಾರಕರು, ದೇಶಪ್ರೇಮಿಗಳು ಮತ್ತು ಪ್ರಜಾಪ್ರಭುತ್ವವನ್ನು ಕಾಪಾಡುತ್ತಿರುವ ಯೋಧರು!! ಭಾರತ ಮಾತೆಗೆ ಇಂತಹ ದುಃಸ್ಥಿತಿ ಬರಬಾರದಿತ್ತು,

- ಕಿರಣ್ ಕುಮಾರ್. ಶಿವಮೊಗ್ಗ

'ದುನಿಯಾ' ಹಿಂದಿನ ಕಥೆ



ಮಹಾನ್ ಮೌನಿಯಂತೆ ಕಾಣುವ ನಿರ್ದೇಶಕ ಸೂರಿಗೆ ಮಾತಾಡುವ ...ಡ್ ಬಂದರೆ ಅವರ ಮಾತಿಗೆ ಅಂತ್ಯವೇ ಇರುವುದಿಲ್ಲ, ಅಂತಹ ...ಡ್ ಅವರನ್ನು ಆವರಿಸಿದಾಗ ಅವರ ಮಾತಿನಲ್ಲಿ ಬದುಕು, ಸಾಹಿತ್ಯ ... ತೆಳು ವೇದಾಂತ, ಪೋಲಿ ಮಾತು, ಹೊಟ್ಟೆ ತುಂಬುವಷ್ಟು ನಗು ಇರುತ್ತೆ. ಮೊನ್ನೆ ನಡೆದ 'ಜಾಕಿ' ಚಿತ್ರದ ಪ್ಲಾಟಿನಮ್ ಡಿಸ್ಕ್ ...ರಂಭದ ನಂತರ ಯೋಗರಾಜ್ ಭಟ್ ಮತ್ತು ಸೂರಿ ಒಟ್ಟೊಟ್ಟಿಗೇ ...ಗೆ ಸಿಕ್ಕಿದರು. ಗಂಡ-ಹೆಂಡಿರಂತೆ ಅಂಟಿಕೊಂಡು ತಿರುಗುವ, ಲವರ್‌ಗಳ ಕಿವಿಯಲ್ಲಿ ಅದೇನನ್ನೋ ಪಿಸುಗುಟ್ಟುವ ಈ ಜೋಡಿ ಮಾತಿಗೆ ...ರಂತೂ ಒಬ್ಬರನ್ನೊಬ್ಬರು ಮೀರಿಸುವ ಅಪಾಪೋಲಿಗಳೇ... ತಮ್ಮ ...ಗಳಲ್ಲಿ ಹೊಸ ರೀತಿಯ ಸಾಲುಗಳನ್ನು ಸೃಷ್ಟಿಸುವ ಭಟ್ಟರು ಪ್ರೈವೇಟ್ ... ಮಾತಾಡುತ್ತಾ ಕೂತರೆ ಬಾಯಿ ಬ್ರಹ್ಮಾಂಡ...

...ಇಲ್ಲಿಯವರೆಗೆ ಐದು ಚಿತ್ರಗಳನ್ನು ನೀಡಿರುವ ಸೂರಿ ಇವತ್ತು ಸ್ಟಾರ್ ...ಶಕ. ಇವರು ನಿರ್ದೇಶಿಸಿದ ಮೊದಲ ಚಿತ್ರವೇ ಹೊಸ 'ದುನಿಯಾ'ವನ್ನು ...ಟ್ಟುಹಾಕಿದ್ದು ಎಲ್ಲರಿಗೂ ಗೊತ್ತಿದೆ. ಆದರೆ ಆ 'ದುನಿಯಾ'ದ ಹಿಂದೆ ... ಶ್ರಮ, ಅಸಮಾಧಾನಗಳು, ಕಷ್ಟಕಾರ್ಪಣ್ಯಗಳಿದ್ದವು ಎಂಬುದು ...ಷ್ಟು ಜನರಿಗೆ ಗೊತ್ತಿಲ್ಲ. ಮೊನ್ನೆ ಆ ದಿನಗಳ ಫ್ಲಾಶ್‌ಬ್ಯಾಕ್‌ಗೆ ಸೂರಿ ...ಳಿದಾಗ ಅಂದು ಅವರು ಎದುರಿಸಿದ ವಿವಿಧ ತರಹದ ಕಿರಿಕ್ಕು ...ಟಟ್ಟು, ಟ್ವಿಸ್ಟುಗಳನ್ನು ನಮ್ಮ ಮುಂದೆ ತೆರೆದಿಟ್ಟರು. ಅವುಗಳಲ್ಲಿ ...ವು ಇಲ್ಲಿವೆ....

– ಅಂದು ಸ್ಮಶಾನವೊಂದರಲ್ಲಿ ಚಿತ್ರೀಕರಣ ನಡೆಯುತ್ತಿತ್ತು. ವಿಜಿ ತನ್ನ ...ಯನ್ನು ಮಣ್ಣಲ್ಲಿ ಇಡುವ ದೃಶ್ಯವದು. ಅದಕ್ಕಾಗಿ ಹಳ್ಳವನ್ನೂ ...ಡಿಸಿದ್ದರು. ಒಂದಿಷ್ಟು ಪ್ಲಾಸ್ಟಿಕ್ ತಲೆಬುರುಡೆಗಳು, ಮೂಳೆ ಚಕ್ಕಳಗಳನ್ನೂ ... ಬಿಸಾಡಿದ್ದರು. ಹಾಗೆ ಗುಂಡಿ ತೆಗೆಸುವಾಗ ಪಕ್ಕದಲ್ಲಿ ಯಾವುದೋ ...ವಾದ ಹೆಣವೊಂದು ಸಿಕ್ಕಿಬಿಡೋದೇ? ತಕ್ಷಣ ಅದನ್ನು ಹಾಗೇ ...ಣ್ಣುಮುಚ್ಚಿ ಪ್ಯಾಚ್ ಮಾಡಲಾಯಿತು. ಆದರೆ ಅದನ್ನು ಗಮನಿಸಿದ ... ಪಾತ್ರಧಾರಿ "ನಾನು ಯಾವ ಕಾರಣಕ್ಕೂ ನಿಜವಾದ ಹೆಣದ ಪಕ್ಕದಲ್ಲಿ ಮಲಗುವುದಿಲ್ಲ" ಎಂದು ಹಠ ಹಿಡಿದುಬಿಟ್ಟರು. ಕಡೆಗೂ ಆಕೆಯನ್ನು ಒಪ್ಪಿಸುವಲ್ಲಿ ವಿಫಲರಾದ ಸೂರಿ ಜೂನಿಯರ್ ಆರ್ಟಿಸ್ಟ್ ಒಬ್ಬಳನ್ನು ಕರೆತಂದು ಆ ದೃಶ್ಯವನ್ನು ಚಿತ್ರೀಕರಿಸಿದರಂತೆ.

– ತಾಯಿಯ ಸಂಸ್ಕಾರ ಮಾಡುವ ಅದೇ ದೃಶ್ಯದಲ್ಲಿ ವಿಜಯ್ ನಟಿಸುತ್ತಿದ್ದರು. ತಾಯಿಯನ್ನು ಎರಡೂ ಕೈಗಳಿಂದ ಎತ್ತುತಂದು ಮಣ್ಣಿಗೆ ಇಟ್ಟನಂತರ ವಿಜಿ ಗೋಳೋ ಎಂದು ರೋದಿಸಬೇಕು ಎಂಬುದು ನಿರ್ದೇಶಕರ ಆದೇಶ. ಆದರೆ ಆಕ್ಷನ್ ಹೇಳಿದ ತಕ್ಷಣ ವಿಜಿ ಹೆಣವನ್ನು ಮಣ್ಣಿಗೆ ಇಡುವ ಮುನ್ನವೇ ಗಳಗಳನೆ ನೀರು ಸುರಿಸಲು ಆರಂಭಿಸಿದ್ದ. ಅದೂ ಗ್ಲಿಸರಿನ್ ಇಲ್ಲದೆ. ಚಿತ್ರರಂಗದಲ್ಲಿ ಏನಾದರೂ ಸಾಧಿಸಲೇ ಬೇಕು ಎಂದು ಹಪಹಪಿಸುತ್ತಿದ್ದ ವಿಜಿ ಅದು ಸಿನಿಮಾ ಎಂಬುದನ್ನೂ ಮರೆತು ತಮ್ಮ ಪಾತ್ರದಲ್ಲಿ ಅಷ್ಟು ಇನ್‌ವಾಲ್ವ್ ಆಗಿದ್ದರಿಂದ ಪದೇ ಪದೇ ರೀ ಟೇಕ್ ಮಾಡಬೇಕಾಗಿತ್ತು. ಆದರೆ ರಾ ಸ್ಟಾಕ್‌ಗೂ ಬಂಡವಾಳವಿಲ್ಲದ್ದರಿಂದ ಅಮೂಲ್ಯವಾದ ರೀಲನ್ನು ವಿಜಿಯ ಕಣ್ಣೀರು ನುಂಗಿಹಾಕಿತ್ತು.


– ಹಾಡೊಂದರ ಚಿತ್ರೀಕರಣ ನಡೆಯುತ್ತಿತ್ತು. ಸಾಮಾನ್ಯವಾಗಿ ಹಾಡುಗಳ ಶೂಟಿಂಗ್ ಸಂದರ್ಭದಲ್ಲಿ ಒಂದೇ ಥರದ ಎರಡೆರಡು ಬಟ್ಟೆಗಳನ್ನು ಇಟ್ಟಿರುತ್ತಾರೆ. ಒಂದುವೇಳೆ ಒಂದು ಕಾಸ್ಟ್ಯೂಮ್ ಹಾಳಾದರೆ ಮತ್ತೊಂದನ್ನು ಬಳಸುತ್ತಾರೆ. ಆದರೆ 'ದುನಿಯಾ' ತಂಡಕ್ಕೆ ಕಾಸಿನದ್ದೇ ದೊಡ್ಡ ಕೊರತೆಯಾಗಿದ್ದರಿಂದ ಸ್ಪೇರ್ ಕಾಸ್ಟ್ಯೂಮ್ ಇರಲಿಲ್ಲ. ಆ ಹಾಡಿಗಾಗಿ ಕರೀ ಚೆಲುವ ವಿಜಿಗೆ ಸೂಟು ತೊಡಿಸಿದ್ದರು. ಮೊದಲೇ ವಡ್ಡನಂತಾಡುವ ವಿಜಿ ತೊಪ್ಪನೆ ಹೋಗಿ ಕೆಸರಿನ ಮೇಲೆ ಕೂತುಬಿಟ್ಟಿದ್ದಾರೆ. ಹಿಂದೆ ತಿರುಗಿಸಿ ನೋಡಿದರೆ ಅಷ್ಟಗಲದ ಕರೆ. ಹೀಗಾಗಿ ಯಾವ ಆ್ಯಂಗಲಿನಿಂದಲೂ ವಿಜಯ್ 'ಬ್ಯಾಕು' ಕಾಣದಂತೆ ಶೂಟ್ ಮಾಡಬೇಕಾಗಿ ಬಂದಿತ್ತು.

– ಅದೇ ಹಾಡಿನ ಚಿತ್ರೀಕರಣ ಸಾಗಿತ್ತು. ಬಣ್ಣದ ಚಿಟ್ಟೆಯೊಂದು ಸೂಟುಧಾರಿ ವಿಜಿಯ ಕೋಟಿನ ಮೇಲೆ ಬಂದು ಕೂತು ಪದೇಪದೇ ಕಾಟ ಕೊಡುತ್ತಿತ್ತು. ಎಷ್ಟೇ ಓಡಿಸಿದರೂ ಆ ಚಿಟ್ಟೆ ಮತ್ತೆ ವಿಜಿಯನ್ನು ಬಿಡದೆ ಸತಾಯಿಸುತ್ತಿತ್ತು. ಕಡೆಗೆ ಆ ಚಿಟ್ಟೆಯನ್ನು ತೆಗೆದು ವಿಜಿಯ ಎದೆಯ ಬಳಿ ಬಿಟ್ಟು ಶೂಟ್ ಮಾಡಲಾಯಿತು. ತೆರೆಯ ಮೇಲೆ ಅದ್ಭುತವಾಗಿ ಕಂಡ ಆ ಚಿಟ್ಟೆಯನ್ನು ಗ್ರಾಫಿಕ್ ಮಾಡಿದ್ದಾರೆ ಎಂದೇ ಜನ ನಂಬಿದರು. ಆರ್ಥಿಕ ಬಿಕ್ಕಟ್ಟಿನಿಂದಾಗಿ ಅಂದು 'ದುನಿಯಾ' ಚಿತ್ರದ ಶೂಟಿಂಗ್ ಮುಗಿಸುವುದೇ ಆ ತಂಡಕ್ಕೆ ದೊಡ್ಡ ಮಾತಾಗಿತ್ತು. ಇನ್ನು ಗ್ರಾಫಿಕ್‌ನ ಮಾತೆಲ್ಲಿಯದು...

– 'ತನನಾ ತಾನಾನಾ ತನನಾನನಾನಾನ' ಎಂದು ಕೇಳಿಸುವ ಟ್ಯೂನ್‌ಅನ್ನು ಸಂಗೀತ ನಿರ್ದೇಶಕ ವಿ. ಮನೋಹರ್ ನೀಡಿದ್ದರು. ಎಲ್ಲರೂ 'ಇದೇನಿದು ಎಳೇಮಕ್ಕಳು ಮುಗ್ಗಿ ಹೇಳಿದಂತಿದೆ' ಎಂದು ಆ ಟ್ಯೂನ್‌ಅನ್ನು ಇಷ್ಟಪಟ್ಟಿರಲಿಲ್ಲ. ಆದರೆ ತಂಡದ ಇತರೆ ಸದಸ್ಯರ ಅಸಮಾಧಾನದ ನಡುವೆಯೂ ಹಠ ಮಾಡಿ ಆ ಟ್ಯೂನ್‌ಅನ್ನು ಸೂರಿ ಸೆಲೆಕ್ಟ್ ಮಾಡಿದ್ದರು. ಆ ಟ್ಯೂನಿಗೆ ಕವಿ ನಾಗೇಂದ್ರ ಪ್ರಸಾದ್ ಅವರಿಂದ ನಾಲ್ಕೈದು ವಿವಿಧ ಹಾಡುಗಳನ್ನು ಬರೆಸಿದರೂ ಯಾವುದೂ ಹೊಂದಿಕೆಯಾಗಿರಲಿಲ್ಲ. ಅಂದು ನಡುರಾತ್ರಿ ಗುಟಕಾ ತಿನ್ನುತ್ತಾ ಹಾಡಿನ ಸಾಲಿಗಾಗಿ ತಲೆ ಕೆಡಿಸಿಕೊಂಡು ಕೂತಿದ್ದ ನಾಗೇಂದ್ರ ಪ್ರಸಾದ್, ಒಂದು ರೌಂಡು ಟಾಯ್ಲೆಟ್ಟಿಗೆ ಹೋಗಿ ಬಂದು ಸೂರಿಯ ಮುಖವನ್ನೇ ದಿಟ್ಟಿಸುತ್ತಾ 'ಕರಿಯಾ ಐ ಲವ್ ಯು ಕರುನಾಡ ಮೇಲಾಣೆ..' ಎಂದರಂತೆ. ಈ ಸಾಲು ವಿಚಿತ್ರವಾಗಿದ್ದರೂ ಬೇರೆ ತರಹ ಇದೆಯಲ್ಲಾ ಅಂದುಕೊಂಡ ಸೂರಿ ಆ ಹಾಡನ್ನು ಒಪ್ಪಿ ನಾಗೇಂದ್ರ ಪ್ರಸಾದ್‌ರಿಂದ ಪೂರ್ಣಗೊಳಿಸಿ ಅದನ್ನು ಕೊಂಡೊಯ್ದು ಮನೋಹರ್ ಕೈಗಿಟ್ಟರಂತೆ. ಆ ಹಾಡಿನ ಸಾಲುಗಳ ಮೇಲೆ ಕಣ್ಣಾಡಿಸಿದ ಮನೋಹರ್ 'ಛೆ ಛೆ, ನನ್ನ ಸಂಗೀತಕ್ಕೆ 'ಇಂಥ ಲೈನುಗಳನ್ನು ಯೂಸ್ ಮಾಡೋದೇ? ಬೇಡ್ವೇಬೇಡ...' ಎಂದು ತಲೆ ಅಲ್ಲಾಡಿಸಿಬಿಟ್ಟರಂತೆ. ಆದರೆ ಮನೋಹರ್‌ಗೆ ಗಂಟು ಬಿದ್ದ ಅದೇ ಹಾಡನ್ನು ರೆಕಾರ್ಡ್ ಮಾಡಿಸಿದರಂತೆ. ಆಡಿಯೋ ಬಿಡುಗಡೆಯಾದಮೇಲೆ ಎಲ್ಲರನ್ನೂ ಮೊದಲಿಗೆ ಸೆಳೆದಿದ್ದು ಅದೇ ಹಾಡು!

– ಅಂದು ಮಧ್ಯರಾತ್ರಿ ಮೂರು ಗಂಟೆಗೆ ಕಡೇ ದಿನದ ಶೂಟಿಂಗ್ ಮುಗಿಸಿ ಚಿತ್ರರಂಗದ ಸಂಪ್ರದಾಯದಂತೆ ಕುಂಬಳಕಾಯಿ ಹೊಡೆದಿದ್ದರು. ಚಿತ್ರೀಕರಣ ಪೂರ್ಣವಾಗಿತ್ತಾದರೂ ನಿರ್ದೇಶಕ ಸೂರಿಯ ಕಲ್ಪನೆಗಳು ಸಂಪೂರ್ಣಗೊಂಡಿರಲಿಲ್ಲ. ಇನ್ನೂ ತೆಗೆಯಬೇಕೆಂದುಕೊಂಡಿದ್ದ ಬಹಳಷ್ಟು ದೃಶ್ಯಗಳನ್ನು ಸೆರೆಹಿಡಿಯಲಾಗಿರಲಿಲ್ಲ. ಒಲ್ಲದ ಮನಸ್ಸಿನಿಂದಲೇ ಕುಂಬಳಕಾಯಿ ಹೊಡೆದು ಮನೆಗೆ ಬಂದ ಸೂರಿ ಮೂಲೆಯಲ್ಲಿ ಕುಳಿತು "ನನ್ನ ಮೊದಲ ಸಿನಿಮಾನೇ ಹೀಗಾಗಿಬಿಡ್ತಲ್ಲಾ? ನಾನು ಅಂದುಕೊಂಡಿದ್ದು ಪೂರ್ಣವಾಗಲೇ ಇಲ್ಲವಲ್ಲಾ? ನನ್ನ ಭವಿಷ್ಯದ ಗತಿಯೇನು?' ಎಂದು ತಮ್ಮಲ್ಲಿ ತಾವೇ ಪ್ರಶ್ನೆ ಹಾಕಿಕೊಳ್ಳುತ್ತಾ ಬಿಕ್ಕಿಬಿಕ್ಕಿ ಅತ್ತಿದ್ದರು. ಇದೇ ಫೀಲಿಂಗ್‌ನಲ್ಲಿ ರಾತ್ರಿಯಿಡೀ ನಿದ್ರೆಯನ್ನೂ ಮಾಡಿರಲಿಲ್ಲ.

ಆದರೆ ಮಾರನೆ ಬೆಳಗ್ಗೆ ನಿರ್ಮಾಪಕ ಸಿದ್ದರಾಜು ಫೋನ್ ಮಾಡಿ "ಸಿನಿಮಾ ಎಲ್ಲಿ ತೋರಿಸ್ತೀರ? ನಮ್ ರಿಲೇಶನ್‌ಗಳೆಲ್ಲಾ ಬಂದ್‌ಬುಟ್ಟಾರೆ ನೋಡಕ್ಕೆ" ಅಂದರಂತೆ. ಸಿದ್ದರಾಜು ಮಾತು ಕೇಳಿದ ಸೂರಿಗೆ ಕಣ್ಣು ಮಂಜುಮಂಜು..! ರಾತ್ರಿತಾನೆ ಶೂಟಿಂಗ್ ಕಂಪ್ಲೀಟ್ ಆಗಿದೆ. ಇದಾದ ನಂತರ ಎಡಿಟಿಂಗು, ಡಬ್ಬಿಂಗು, ರೀರೆಕಾರ್ಡಿಂಗು ಎಲ್ಲವೂ ಆಗಬೇಕಿದೆ. ಇಂತಹ ಸ್ಥಿತಿಯಲ್ಲಿ ಅವರಿಗೆಲ್ಲ ಸಿನಿಮಾ ಅಂತ ತೋರಿಸುವುದು ಏನನ್ನು? ಆಗ ಇನ್ನು ಬಾಕಿ ಇರುವ ಕೆಲಸಗಳ ಬಗ್ಗೆ ಸಿದ್ದರಾಜು ಅವರಿಗೆ ಸೂರಿ ವಿವರಿಸಿದರಂತೆ. ಆಮೇಲೆ ಸೂರಿಗೆ ಗೊತ್ತಾಗಿದ್ದೇನೆಂದರೆ, ಸಿದ್ದರಾಜು ಮತ್ತು ಅವರ ಸಂಬಂಧಿಕರು ಸಿನಿಮಾ ಅಂದರೆ ಮದುವೆ ವಿಡಿಯೋ ತೆಗೆದಹಾಗೆ ಅಂದುಕೊಂಡಿದ್ದರಂತೆ!



'ದುನಿಯಾ' ಚಿತ್ರದ ಬಗ್ಗೆ ಸೂರಿ ಇಂಥವೇ ಬೇಕಾದಷ್ಟು ಪ್ರಸಂಗಗಳನ್ನು ನೆನಪಿಟ್ಟುಕೊಂಡಿದ್ದಾರೆ. ಮುಂದೊಂದು ದಿನ ಅದನ್ನೆಲ್ಲಾ ಬರೆದು ಪುಸ್ತಕವನ್ನಾಗಿಸುತ್ತಾರಂತೆ.

• ಅರುಣ್ .ಜಿ


ಬ್ಯಾಂಡ್ ಸ್ವಾಮಿಯೂ ಭಕ್ತ ಅಂಬರೀಶನೂ

...ಗೋಕುಲಾಷ್ಟಮಿಗೂ, ಇಮಾಮಿ ಸಾಬಿಗೂ ಏನು ಸಂಬಂಧ ನಾಣ್ಣುಡಿಯನ್ನು ನೆನಪಿಸಲು ಹೊರಟಂತಿದ್ದಾರೆ ಉಡುಪಿಯ ...ರ್ಯಾಯ ಉತ್ಸವದ ಸ್ವಾಮೀಜಿ ಶ್ರೀ ಲಕ್ಷ್ಮಿವರತೀರ್ಥರು.

ಈ ಸ್ವಾಮೀಜಿಯ ಭಕ್ತರು ಅವರನ್ನು 'ಹೈಟೆಕ್ ಸ್ವಾಮಿ' ಎಂದೇ ...ಯುತ್ತಾರೆ. ಅದಕ್ಕೆ ಕಾರಣ ಈ ಸ್ವಾಮೀಜಿ ಖಾವಿ ತೊಟ್ಟಿದ್ದರೂ ...ನಿಕ ಡ್ರಮ್ಸ್‌ಗಳನ್ನು ಚೆನ್ನಾಗಿ ಬಾರಿಸುತ್ತಾರೆ. ಅಷ್ಟೇ ಅಲ್ಲ ಅವರು ...ಮಾರು ಹತ್ತಾರು ಸಂಗೀತದ ಉಪಕರಣಗಳನ್ನು ಚೆನ್ನಾಗಿ ...ಸಬಲ್ಲವರಾಗಿದ್ದಾರೆ. ಸಂಗೀತವಲ್ಲದೆ, ಕ್ರೀಡೆಯಲ್ಲೂ ಉತ್ಸಾಹ ...ದಿರುವ ಈ ಸ್ವಾಮಿಗಳು ತಮ್ಮ ಅನುಯಾಯಿಗಳೊಂದಿಗೆ ಸಮುದ್ರದಲ್ಲಿ ...ಮು ಕಿಮೀ ಈಜಿ ತಮ್ಮ ಭಕ್ತರನ್ನು ಚಕಿತಗೊಳಿಸಿದ್ದರು. ಇಂತಹ ...ಆಸಕ್ತಿಗಳ ಲಕ್ಷ್ಮಿವರತೀರ್ಥರು ಈಗ ನಾಟಕರಂಗವನ್ನೂ ಪ್ರವೇಶಿಸಿದ್ದಾರೆ.

...ಇತ್ತೀಚೆಗೆ ಈ ಹೈಟೆಕ್ ಸ್ವಾಮೀಜಿ ಹಿರಿಯ ಸಿನಿಮಾ ...ಬದರಾದ ಶ್ರೀನಿವಾಸಮೂರ್ತಿಯವರನ್ನು ಕರೆದು "ನೀವು ನಮ್ಮ ...ರ್ಯಾಯ ಉತ್ಸವಕ್ಕಾಗಿ ಭಕ್ತ ಅಂಬರೀಶನನ್ನು ಕುರಿತ ನಾಟಕವನ್ನು ..., ಅದರ ಪ್ರದರ್ಶನವನ್ನು ನೀಡಿ" ... ಆಹ್ವಾನ ನೀಡಿದ್ದಾರೆ.

...ಮೀಜಿಯ ಈ ಆಹ್ವಾನದಿಂದ ...ಚಿತರಾಗಿರುವ ...ನಿವಾಸಮೂರ್ತಿ ಈಗಾಗಲೇ ಭಕ್ತ ...ಬರೀಶನ ಕುರಿತ ಕತೆ ಮತ್ತು ...ನ್ನು ಬರೆದು ಮುಗಿಸಿದ್ದಾರೆ. ...ಸುಮಾರು 18 ವರ್ಷಗಳ ಹಿಂದೆ ...ಕುಮ ಕಳ್ಳ' ನಾಟಕವನ್ನು ರಚಿಸಿ, ...ಕೊಂದರೂ ಅದರ 200 ...ರ್ಶನಗಳನ್ನು ನೀಡಿದ್ದ ...ನಿವಾಸಮೂರ್ತಿ ಅನಂತರ ನಾಟಕಕ್ಕಾಗಿ ರಂಗತಾಲೀಮು ನಡೆಸಿರಲಿಲ್ಲ, ಬದಲಾಗಿ ಚಿತ್ರರಂಗಕ್ಕೆ ಕಾಲಿಟ್ಟ ಅವರು ಇತ್ತೀಚೆಗೆ ಒಂದೇ ತರಹದ ಪಾತ್ರಗಳಲ್ಲಿ ನಟಿಸುತ್ತಾ ಏಕತಾನತೆಯಿಂದ ಸೊರಗಿ ಹೋಗಿದ್ದರು. ಆದರೆ ಈಗ ಲಕ್ಷ್ಮಿವರತೀರ್ಥರ ಆಹ್ವಾನ ಅವರಲ್ಲಿ ಮತ್ತೆ ಜೀವನೋತ್ಸಾಹವನ್ನು ತುಂಬಿದೆಯಂತೆ.





ಪುರಾಣಗಳಲ್ಲಿ ಬರುವ ವಿಷ್ಣು ಭಕ್ತ ರಾಜ ಅಂಬರೀಶನ ಕತೆ ನಾಟಕಕಾರರಲ್ಲಿ ಮಾತ್ರವಲ್ಲ, ಸಿನಿಮಾರಂಗದವರಲ್ಲೂ ಆಸಕ್ತಿ ಮೂಡಿಸುವಂತಹದ್ದು. ಡಾ.ರಾಜ್‌ಕುಮಾರ್ 'ಭಕ್ತ ಅಂಬರೀಶ' ಚಿತ್ರದಲ್ಲಿ ನಟಿಸುವ ಬಗ್ಗೆ ತುಂಬಾ ಆಸಕ್ತಿ ಹೊಂದಿದ್ದರು. ಆ ಚಿತ್ರವನ್ನು ಮಾಡಬೇಕೆಂಬುದು ಅವರ ಜೀವನದ ಕೊನೆಯ ಆಶೆಗಳಲ್ಲಿ ಒಂದಾಗಿತ್ತು.

ಅದಕ್ಕಾಗಿಯೇ ಆ ಯೋಜನೆಗಾಗಿ ಅವರ ಮಡದಿ ಮತ್ತು ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್ ಕೆಲಸವನ್ನೂ ಪ್ರಾರಂಭಿಸಿದ್ದರು. ಆ ಚಿತ್ರಕ್ಕಾಗಿ ಆಕಾಶ್ ಆಡಿಯೋ ಸಂಸ್ಥೆಯ ಸ್ಟುಡಿಯೋದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ನೇತೃತ್ವದಲ್ಲಿ ಹಾಡುಗಳ ರೆಕಾರ್ಡಿಂಗ್ ಮಾಡಿಸಿದ್ದರು. 'ಮಯೂರ' ಚಿತ್ರವನ್ನು ನಿರ್ದೇಶಿಸಿದ್ದ ವಿಜಯ ರೆಡ್ಡಿ ಅವರೇ ಈ ಚಿತ್ರವನ್ನೂ ನಿರ್ದೇಶಿಸುವುದೆಂದು ಫಿಕ್ಸ್ ಆಗಿತ್ತು. ಅಷ್ಟೇ ಅಲ್ಲ, ಮೈಸೂರು ಅರಮನೆಯಲ್ಲಿ ಚಿತ್ರೀಕರಣ ಮಾಡಲು ಅನುಮತಿಯನ್ನು ಕೂಡಾ ಪಡೆದಿದ್ದರು. ಒಂದು ಅಂದಾಜಿನ ಪ್ರಕಾರ ಈ ಚಿತ್ರದ ಪೂರ್ವಭಾವಿ ಸಿದ್ಧತೆಗಳಿಗಾಗಿ ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್ ಸುಮಾರು 50 ಲಕ್ಷ ರೂಪಾಯಿಗಳನ್ನು ವ್ಯಯಿಸಿದ್ದರು. ಆದರೆ ಕಾರಣಾಂತರಗಳಿಂದ ಆ ಚಿತ್ರ ಸೆಟ್ಟೇರಲೇ ಇಲ್ಲ. ಕೊನೆಗೂ ಭಕ್ತ ಅಂಬರೀಶನ ಪಾತ್ರ ಮಾಡಲಾಗದೆ ರಾಜ್‌ಕುಮಾರ್ ಇಹಲೋಕವನ್ನೇ ತ್ಯಜಿಸಿದರು. ಈಗಲೂ ರಾಜ್‌ಕುಮಾರ್ ಅವರ ಈ ಮಹತ್ವಾಕಾಂಕ್ಷೆಯ ಚಿತ್ರವನ್ನು ತಮ್ಮ ಮಕ್ಕಳ ಕೈಯಲ್ಲಿ ಮಾಡಿಸುವ ಆಶೆಯನ್ನು ಪಾರ್ವತಮ್ಮ ರಾಜ್‌ಕುಮಾರ್ ಹೊಂದಿದ್ದಾರೆ.

ಅದೆಲ್ಲ ಬದಿಗಿರಲಿ, ಇಂತಹ ಕಥಾವಸ್ತುವಿನ ನಾಟಕವನ್ನು ನಿರ್ವಹಿಸಲು ಸ್ವಾಮೀಜಿಯವರು ವೇದಿಕೆ ಕಲ್ಪಿಸಿಕೊಟ್ಟ ಕೂಡಲೇ ಮೂಲತಃ ರಂಗಭೂಮಿಯವರಾದ ಶ್ರೀನಿವಾಸಮೂರ್ತಿ ಸಹಜವಾಗಿಯೇ ಪುಳಕಿತರಾಗಿದ್ದಾರೆ. ಈಗ 'ಭಕ್ತ ಅಂಬರೀಶ' ನಾಟಕದ ಪಾತ್ರಗಳನ್ನು ನಿರ್ವಹಿಸಬೇಕೆಂದು ಬಹುತೇಕ ಸಿನಿಮಾ ನಟನಟಿಯರನ್ನು ಕೇಳಬೇಕೆಂದು ಮೂರ್ತಿಯವರು ತೀರ್ಮಾನಿಸಿದ್ದಾರೆ. ಈಗಾಗಲೇ ರಮೇಶ್ ಭಟ್, ಶಿವರಾಮ್, ಬ್ಯಾಂಕ್ ಜನಾರ್ಧನ್ ಮೊದಲಾದವರು ಇದರಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ.

ಅಂತೂ ಬಹಳ ಸಮಯದಿಂದ ಸಿನಿಮಾದವರನ್ನು ಕಾಡುತ್ತಿರುವ ಭಕ್ತ ಅಂಬರೀಶ ಕೊನೆಗೂ ನಾಟಕದ ರೂಪದಲ್ಲಿ ಬರುತ್ತಿರುವುದು ಅತ್ಯಂತ ಸಂತೋಷದ ವಿಷಯ. ಈ ನಾಟಕ ಜನಪ್ರಿಯವಾದರೆ ಅದನ್ನು ತೆರೆಗೆ ತರಲು ನಮ್ಮ ಹಲವು ನಿರ್ಮಾಪಕರು ಸಿದ್ಧತೆ ನಡೆಸಿದರೆ ಆಶ್ಚರ್ಯಪಡಬೇಕಿಲ್ಲ.

• ಶೆಣೈ

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 19-1-2011 RNI No. KARKAN2005/14648



ವರಮಾನ ಕೊಡದ ವಾರೆವ್ಹಾ

ವಿಜಯಲಕ್ಷ್ಮಿ ಸಿಂಗ್ ಎಂಬ ಮಹಿಳಾ ನಿರ್ದೇಶಕಿ ಒಂದು ಹೊಸ ರೀತಿಯ ಹ್ಯಾಟ್ರಿಕ್ ಬಾರಿಸಿದ್ದಾರೆ.

ಈ ಹಿಂದೆ ಸಾಹಸಸಿಂಹ ವಿಷ್ಣುವರ್ಧನ್- ಜಯಪ್ರದ ನಟಿಸಿದ್ದ 'ಈ ಬಂಧನ' ಎಂಬ ಚಿತ್ರದ ಮುಖಾಂತರ ವಿಜಯಲಕ್ಷ್ಮಿ ನಿರ್ದೇಶಕಿಯಾಗಿದ್ದರು. ಅದನ್ನು ಅವರ ಪತಿಯಾದ ನಟ-ನಿರ್ಮಾಪಕ ಜೈಜಗದೀಶ್ ನಿರ್ಮಿಸಿದ್ದರು. ಆ ಚಿತ್ರ ಬಾಕ್ಸಾಫೀಸ್‌ನಲ್ಲಿ ಅಂತಹ ದೊಡ್ಡ ಗಳಿಕೆಯನ್ನೇನೂ ಮಾಡಲಿಲ್ಲ.



ಅದಾದನಂತರ ವಿಜಯಲಕ್ಷ್ಮಿ ಕೈಗೆತ್ತಿಕೊಂಡಿದ್ದು 'ಮಳೆ ಬರಲಿ, ಮಂಜು ಇರಲಿ' ಚಿತ್ರವನ್ನು. ಈ ಚಿತ್ರವಾದರೂ ಬಾಕ್ಸಾಫೀಸ್‌ನಲ್ಲಿ ಗೆಲುವಿನ ನಗೆ ಬೀರಬಹುದು ಎಂದು ವಿಜಯಲಕ್ಷ್ಮಿ ಮಾತ್ರವಲ್ಲ ಗಾಂಧಿನಗರದ ಪಂಡಿತರೂ ಭಾವಿಸಿದ್ದರು. ಆದರೆ ವಿಜಯಲಕ್ಷ್ಮಿ ಸಿಂಗ್‌ರ ದುರದೃಷ್ಟ 'ಮಳೆ...'ಗೂ ಅಂಟಿಕೊಂಡಿತ್ತು. ಈ ಚಿತ್ರ ಕೂಡ ನಿರೀಕ್ಷಿಸಿದ್ದಷ್ಟು ಗಳಿಕೆಯನ್ನು ಮಾಡದಿದ್ದುದರಿಂದ ನಿರ್ಮಾಪಕ ಜೈ ಜಗದೀಶ್ ಮತ್ತೊಮ್ಮೆ ಒಂದಿಷ್ಟು ಹಣ ಕಳೆದುಕೊಂಡರು.

ಇದೀಗ ವಿಜಯಲಕ್ಷ್ಮಿ ಅವರ ನಿರ್ದೇಶನದ 'ವಾರೆವ್ಹಾ' ತೆರೆಕಂಡಿದೆ. ಬಾಕ್ಸಾಫೀಸ್‌ನ ಹೊಸ ಅದೃಷ್ಟದ ತಾರೆ ಕೋಮಲ್ ಈ ಚಿತ್ರದ ನಾಯಕನಟ. ಇಲ್ಲಿಯವರೆಗೂ ಎರಡು ಪ್ರೇಮಕಥೆಗಳನ್ನು ನೀಡಿದ್ದರಿಂದ ಈ ಬಾರಿ ಒಂದು ಸಂಪೂರ್ಣ ಹಾಸ್ಯಮಯ ಚಿತ್ರವನ್ನು ನೀಡಿ ಪ್ರೇಕ್ಷಕರ ಮನಗೆದ್ದು ತಮ್ಮ ಸಾಲವನ್ನು ತೀರಿಸಬಹುದೆಂದು ಜೈಜಗದೀಶ್-ವಿಜಯಲಕ್ಷ್ಮಿ ಲೆಕ್ಕಹಾಕಿದ್ದರು. ಆದರೆ ಈ ಕಾಮಿಡಿ ಚಿತ್ರವೂ ಈ ದಂಪತಿಗಳ ಪಾಲಿಗೆ ಟ್ರ್ಯಾಜಿಡಿಯಾಗುವ ಲಕ್ಷಣ ಕಾಣಿಸುತ್ತಿದೆ. ಅಲ್ಲಿಗೆ ಮೂರೂ ಚಿತ್ರಗಳೂ ಈ ದಂಪತಿಗಳ ಪಾಲಿಗೆ ಸುಖ-ನೆಮ್ಮದಿಯನ್ನು ತಂದುಕೊಡುವ ಬದಲಾಗಿ ಅವರಿಗೆ ಹ್ಯಾಟ್ರಿಕ್ ನೋವನ್ನು ತಂದುಕೊಟ್ಟಿವೆ.

ಅಂದಹಾಗೆ ವಿಜಯಲಕ್ಷ್ಮಿ ನಿರ್ದೇಶಿಸಿರುವ ಈ ಮೂರು ಚಿತ್ರಗಳು ರಿಮೇಕ್ ಎಂಬುದನ್ನು ಗಮನಿಸಬೇಕು. ರಿಮೇಕ್ ಚಿತ್ರ ಮಾಡಿದರೆ ಕೋಟಿ ಕೋಟಿ ಲಾಭ ಮಾಡಬಹುದು ಎಂಬ ವಾದ ಮಂಡಿಸುವ ಜನರು ಈ ಬಗ್ಗೆ ಸ್ವಲ್ಪ ಯೋಚಿಸಲಿ....



ಅಪ್ಪ ಮಕ್ಕಳ ಜೋಡಿ ಆಟ



ಕರ್ನಾಟಕ ರಾಜಕೀಯದಲ್ಲಿ ಅಪ್ಪ-ಮಕ್ಕಳ ಕಾಂಬಿನೇಷನ್ ಸುಸ್ತಾಗಿ ಕಾರ್ಯನಿರ್ವಹಿಸುತ್ತಿರುವುದು ಈಗ ಜಗಜ್ಜಾಹೀರ. ಕನ್ನಡ ಚಿತ್ರರಂಗದಲ್ಲೂ ಅಪ್ಪ-ಮಕ್ಕಳ ಜುಗಲ್‌ಬಂದಿ ಹಲವು ಬಾರಿ ನಡೆದು ಕೆಲವು ಕ್ಲಿಕ್ ಆಗಿದ್ದರೆ ಕೆಲವು ಠುಸ್ ಆಗಿವೆ.

ಈಗ ಮತ್ತೊಮ್ಮೆ ಕನ್ನಡ ಚಿತ್ರರಂಗದ ಎರಡು ಅಪ್ಪ-ಮಗನ ಜೋಡಿ ಒಟ್ಟಿಗೆ ಕೆಲಸ ಮಾಡುವ ಸುದ್ದಿ ಬಂದಿದೆ. 'ಮಿಸ್ಟರ್ ಡೂಪ್ಲಿಕೇಟ್' ಎಂಬ ಚಿತ್ರದಲ್ಲಿ ಮೊದಲ ಬಾರಿಗೆ ಡೈನಾಮಿಕ್ ಸ್ಟಾರ್ ದೇವರಾಜ್ ಮತ್ತು ಅವರ ಮಗ ಪ್ರಜ್ವಲ್ ದೇವರಾಜ್ ಜೊತೆಯಾಗಿ ನಟಿಸುತ್ತಿದ್ದಾರೆ.

ಪ್ರಜ್ವಲ್ ಮತ್ತು ದೇವರಾಜ್ ಅವರನ್ನು ಒಂದೇ ಚಿತ್ರದಲ್ಲಿ ಸೆರೆಹಿಡಿಯಲು ಅನೇಕ ನಿರ್ದೇಶಕರು ಆರಂಭದಿಂದಲೂ ಪ್ರಯತ್ನ ಮಾಡಿದ್ದರು. ಈಗ ಅದರಲ್ಲಿ ಯಶಸ್ಸು ಕಂಡಿರುವವರು ನಿರ್ದೇಶಕ ಕೂಡ್ಲು ರಾಮಕೃಷ್ಣ.

ಇದೇ ಹೊತ್ತಿಗೆ ಹಿರಿಯ ನಟ ಶ್ರೀನಿವಾಸಮೂರ್ತಿ ಮತ್ತು ಅವರ ಮಗ ನವೀನ್‌ಕೃಷ್ಣ 'ಯೋಗರಾಜ್' ಚಿತ್ರದಲ್ಲಿ ನಟಿಸಿರುವ ಸುದ್ದಿಯೂ ಬಂದಿದೆ. ಈ ಚಿತ್ರವನ್ನು ದಯಾಳ್ ನಿರ್ದೇಶಿಸುತ್ತಿದ್ದಾರೆ. ವಾಸ್ತವವಾಗಿ ಚಿತ್ರದ ಮುಹೂರ್ತದ ಸಂದರ್ಭದಲ್ಲಿ ಶ್ರೀನಿವಾಸಮೂರ್ತಿಯ ಈ ಚಿತ್ರದಲ್ಲಿ ನಟಿಸುವ ಪ್ರಸ್ತಾಪವೇ ಇರಲಿಲ್ಲ. ಆದರೆ ದಿಢೀರನೆ 'ಕವಿರತ್ನ ಕಾಳಿದಾಸ' ಚಿತ್ರದಲ್ಲಿ ಶ್ರೀನಿವಾಸಮೂರ್ತಿ ನಿರ್ವಹಿಸಿದ್ದ ಭೋಜರಾಜನ ತರಹದ ಒಂದು ಪಾತ್ರವನ್ನು ಸೃಷ್ಟಿಸಿದ ದಯಾಳ್ ಅದನ್ನು ಮೂರ್ತಿಯವರಿಗೆ 'ದಯ'ಪಾಲಿಸಿದ್ದಾರೆ. ಈ ಹಿಂದೆ ನವೀನ್‌ಕೃಷ್ಣ ಮತ್ತು ಶ್ರೀನಿವಾಸಮೂರ್ತಿ ಒಂದೆರಡು ಚಿತ್ರಗಳಲ್ಲಿ ಜೊತೆಯಲ್ಲಿ ಅಭಿನಯಿಸಿದ್ದರೂ ಕೂಡಾ ಈಗ 'ಯೋಗರಾಜ' ಚಿತ್ರದಲ್ಲಿ ಬಂದಿರುವ ಭೋಜರಾಜ ಪಾತ್ರ ತನ್ನದೇ ಆದ ತೂಕವನ್ನು ಹೊಂದಿದೆಯಂತೆ.


ಅಪ್ಪಮಕ್ಕಳ ಜುಗಲ್‌ಬಂದಿ ಸಿನಿಮಾರಂಗದಲ್ಲೂ ಗಟ್ಟಿಯಾಗಿ ಬೆಳೆಯುತ್ತದೋ ಎಂದು ಕಾದು ನೋಡಬೇಕಿದೆ.



'ಯೋಗರಾಜ' ಚಿತ್ರದಲ್ಲಿ ನೀತು



ನವರಸ ನಾಯಕ ಜಗ್ಗೇಶ್ ಇತ್ತೀಚೆಗೆ ಅಮೆರಿಕಕ್ಕೆ ಹೋದಾಗ ನ್ಯೂಜೆರ್ಸಿಯಲ್ಲಿ ತನ್ನ ಕೈಗಳಿಗೆ ಸುಮಾರು 1.60 ಲಕ್ಷ ರೂಪಾಯಿ ಖರ್ಚು ಮಾಡಿ ಎರಡು ಹಚ್ಚೆಗಳನ್ನು ಹಾಕಿಸಿಕೊಂಡಿದ್ದಾರೆ. ಈಗ ಅವರ ಬಲಗೈ ಮೇಲೆ ರಾಘವೇಂದ್ರಸ್ವಾಮಿ ರಾರಾಜಿಸುತ್ತಿದ್ದರೆ ಅವರ ಎಡಗೈ ಮೇಲೆ ಅವರ ತಾಯಿ ಮುಖ ಕಂಗೊಳಿಸುತ್ತಿದೆ.



ಆರತಿ ಎತ್ತಿರೇ ಕಳ್ ಮಂಜಂಗೆ



'ಕಳ್ ಮಂಜ' ಎಂಬ ಚಿತ್ರವನ್ನು ಹಾಸ್ಯ ಕಲಾವಿದ ಕೋಮಲ್ ನಿರ್ಮಿಸುತ್ತಿದ್ದು ಅದರಲ್ಲಿ ಅವರೇ ನಾಯಕ ನಟನಾಗಿ ನಟಿಸುತ್ತಿದ್ದಾರೆ.

ಈ ಚಿತ್ರದ ವಿಶೇಷತೆಯೇನೆಂದರೆ ಇದು ಆರಂಭವಾದಾಗ ಶತ್ರುಗಳಾಗಿದ್ದವರೆಲ್ಲ ಈಗ ಮಿತ್ರರಾಗಿದ್ದಾರೆ. ಅಂದರೆ 'ಎದ್ದೇಳು ಮಂಜುನಾಥ' ಚಿತ್ರ ಮುಕ್ತಾಯಗೊಂಡ ನಂತರ ಅದರ ನಾಯಕ ಜಗ್ಗೇಶ್ ಮತ್ತು ನಿರ್ದೇಶಕ ಗುರುಪ್ರಸಾದ್ ನಡುವಿನ ಸಂಬಂಧ ಹಳಸಿಹೋಗಿತ್ತು. ಹಾಗೆಯೇ ಆ ಚಿತ್ರದ ನಿರ್ಮಾಪಕ ಸನತ್‌ಕುಮಾರ್ ಮತ್ತು ನಿರ್ದೇಶಕ ಗುರುಪ್ರಸಾದ್ ಅವರ ಸಂಬಂಧವೂ ಮುರಿದುಬಿದ್ದಿತ್ತು.

ಅದಾದನಂತರ ಗುರುಪ್ರಸಾದ್ ನಿರ್ಮಿಸಲಿದ್ದ 'ಡೈರೆಕ್ಟರ್ಸ್ ಸ್ಪೆಷಲ್' ಎಂಬ ಚಿತ್ರಕ್ಕೆ ಕೋಮಲ್ ನಾಯಕನಟನಾಗಿ ಆಯ್ಕೆಯಾಗಿದ್ದರು. ಇನ್ನೇನು ಆ ಚಿತ್ರ ಆರಂಭವಾಗಬೇಕು ಎನ್ನುವಾಗ ಅದರಲ್ಲಿ ನಟಿಸಲು ಕೋಮಲ್ ಹಿಂದೇಟು ಹಾಕಿದರು. ಅದಕ್ಕೆ ಕಾರಣ ಆ ಚಿತ್ರದ ಕತೆಯಲ್ಲಿ ಕನ್ನಡ ಚಿತ್ರರಂಗದ ಬಹುತೇಕ ನಿರ್ದೇಶಕ, ನಾಯಕ-ನಾಯಕಿಯರನ್ನು ಗುರುಪ್ರಸಾದ್ ಗೇಲಿ ಮಾಡಿದ್ದದ್ದು! ಅಂತಹ ಚಿತ್ರದಲ್ಲಿ ನಟಿಸಿ ತನ್ನ ಭವಿಷ್ಯಕ್ಕೆ ತಾನೇ ಮಣ್ಣು ಬಳಿದುಕೊಳ್ಳುವುದು ಕೋಮಲ್‌ಗೆ ಇಷ್ಟವಿರಲಿಲ್ಲವಾದ್ದರಿಂದ ಅವರು 'ಡೈರೆಕ್ಟರ್ ಸ್ಪೆಷಲ್' ಚಿತ್ರಕ್ಕೆ ಸಲಾಂ ಹೊಡೆದಿದ್ದರು.

ಆಗ ಕೋಮಲ್ ಮತ್ತು ಗುರುಪ್ರಸಾದ್ ನಡುವಿನ ಸಂಬಂಧದಲ್ಲೂ ಬಿರುಕುಗಳು ಮೂಡಿದ್ದವು. ಅಂತಹ ಸಂದರ್ಭದಲ್ಲೇ ಜಗ್ಗೇಶ್ ಮತ್ತು ಕೋಮಲ್ ಅತ್ಯಂತ ಜಾಣ್ಮೆಯಿಂದ ಗುರುಪ್ರಸಾದ್ 'ಕಳ್ ಮಂಜ' ಚಿತ್ರದಲ್ಲಿ ನಿರ್ದೇಶಕನ ಪಾತ್ರವೊಂದನ್ನು ನಿರ್ವಹಿಸಲೇಬೇಕೆಂದು ಒತ್ತಡ ಹೇರಿದರು. ಅದರಿಂದಾಗಿ ಈಗ ಕೋಮಲ್-ಜಗ್ಗೇಶ್-ಗುರುಪ್ರಸಾದ್ ಮತ್ತೆ ಒಂದಾಗಿದ್ದಾರೆ. ಆದರೆ ಏಕಾಂಗಿಯಾಗಿ ಹೊರಗುಳಿದಿರುವುದು ಮಾತ್ರ ನಿರ್ಮಾಪಕ ಸನತ್‌ಕುಮಾರ್!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...